Swabhimani Sahakari
Pages : 28 / 20₹

# ಸ್ವಾಭಿಮಾನಿ ಸಹಕಾರಿ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ


ಸೌಹಾರ್ದ ಸಹಕಾರಿ ಚಳುವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 21
Issue - 06
June - 2024

## ಲೋಕಸಭಾ ಚುನಾವಣೆ ಫಲಿತಾಂಶ 2024:

ಎನ್ ಡಿ ಎ : 293

ಇಂಡಿಯಾ : 234




## ಮಹಾಜನತೆಯ ಒಲವು

## ಪ್ರಜಾಪ್ರಭುತ್ವದ ಗೆಲುವು

" ಪ್ರಜಾಪ್ರಭುತ್ವಕ್ಕಿಂತ ಹೆಚ್ಚು ಜನಪ್ರಿಯವಾದ ಮತ್ತು ಪ್ರಚಲಿತದಲ್ಲಿರುವ ಮತ್ತು ಇನ್ನೂ ಹೆಚ್ಚು ಉತ್ತಮ ಆಡಳಿತ ವ್ಯವಸ್ಥೆ ಇಲ್ಲ "

– ಮಹಾತ್ಮ ಗಾಂಧಿ

" ಪ್ರಜಾಪ್ರಭುತ್ವ ಎಂದರೆ, ಅದೊಂದು ಜೀವನ ಪದ್ಧತಿ"

– ಬಿ. ಆರ್. ಅಂಬೇಡ್ಕರ್

ಜೂನ್ 22
ಕಾರಹುಣ್ಣಿಮೆ





ಜೂನ್ ೦5
ವಿಶ್ವ ಪರಿಸರ ದಿನ

ನೈರುತ್ಯ ಮುಂಗಾರು ಆಗಮನ





ಜೂನ್ 17
ಬಕ್ರೀದ್

ಸೌಹಾರ್ದ ಸಹಕಾರಿಗಳ
ಸಂಖ್ಯೆ : 6279

ಇ-ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1627

# ಸೌಹಾರ್ದ ಸಹಕಾರಿಗಳ ಪ್ರಗತಿಯಲ್ಲಿ ನಿರ್ದೇಶಕರ ಕರ್ತವ್ಯ ಹಾಗೂ ಜವಾಬ್ದಾರಿ ಮಹತ್ವದ್ದು.



ಜಿ. ನಂಜನಗೌಡ

> ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಗೆ ಹೃದಯಪೂರ್ವಕ ನಮಸ್ಕಾರಗಳು. ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರವು ಅನೇಕ ಸವಾಲುಗಳ ನಡುವೆ ಪ್ರಗತಿಯತ್ತ ದಾಪುಗಾಲು ಹಾಕುತ್ತಿರುವುದು ಎಲ್ಲರಿಗೂ ತಿಳದ ಸಂತಸದ ಸಂಗತಿ. ಗ್ರಾಮಾಂತರ ಪ್ರದೇಶಗಳನ್ನೊಳಗೊಂಡಂತೆ ರಾಜ್ಯದಾದ್ಯಂತ ಎಲ್ಲಾ ಜಿಲ್ಲೆಗಳಲ್ಲಿ 6271 ಸೌಹಾರ್ದ ಸಹಕಾರಿಗಳು ನೋಂದಣಿಯಾಗಿರುತ್ತವೆ.

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಹೃದಯಪೂರ್ವಕ ನಮಸ್ಕಾರಗಳು. ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರವು ಅನೇಕ ಸವಾಲುಗಳ ನಡುವೆ ಪ್ರಗತಿಯತ್ತ ದಾಪುಗಾಲು ಹಾಕುತ್ತಿರುವುದು ಎಲ್ಲರಿಗೂ ತಿಳಿದ ಸಂತಸದ ಸಂಗತಿ. ಗ್ರಾಮಾಂತರ ಪ್ರದೇಶಗಳನ್ನೊಳಗೊಂಡಂತೆ ರಾಜ್ಯದಾದ್ಯಂತ ಎಲ್ಲಾ ಜಿಲ್ಲೆಗಳಲ್ಲಿ 6279 ಸೌಹಾರ್ದ ಸಹಕಾರಿಗಳು ನೋಂದಣಿಯಾಗಿರುತ್ತವೆ. ಸೌಹಾರ್ದ ಸಹಕಾರಿಗಳು ಉತ್ತಮ ಗುಣಮಟ್ಟದಲ್ಲಿ ಕಾರ್ಯನಿರ್ವಸುತ್ತಿವೆ ಎಂದಾದರೆ ಅದಕ್ಕೆ ಕಾರಣ ಸಂಸ್ಥೆಯ ಕ್ರಿಯಾಶೀಲ ಆಡಳಿತ ಮಂಡಳಿ, ನಿರ್ದೇಶಕರು ತಮ್ಮ ಜವಾಬ್ದಾರಿಯನ್ನು ಅರಿಯುವ ಮೂಲಕ ಸದಸ್ಯರ ಸಕ್ರೀಯ ಪಾಲ್ಗೊಳ್ಳುವಿಕೆ ಮತ್ತು ಸಿಬ್ಬಂದಿಯವರ ಕಾರ್ಯಕ್ಷಮತೆಯ ವೃದ್ಧಿಗೆ ಪೂರಕ ವಾತಾವರಣ ನಿರ್ಮಿಸಿ ಪರಿಣಾಮಕಾರಿಯಾಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ ಎಂದು ಅರ್ಥೈಸಬಹುದಾಗಿದೆ.

ಸಹಕಾರಿಗಳ ನಿರ್ದೇಶಕರುಗಳು ತಮ್ಮ ಕರ್ತವ್ಯಗಳನ್ನು ಹಾಗೂ ಜವಾಬ್ದಾರಿಗಳನ್ನು ನಿರ್ವಹಿಸಬೇಕಾದರೆ ಅವರು ಉತ್ತಮ ನಾಯಕತ್ವದ ಗುಣಗಳನ್ನು ಹೊಂದಿರಬೇಕು. ಸಹಕಾರಿಯ ಸ್ಥಾಪಿತ ಉದ್ದೇಶಗಳನ್ನು, ಉಪವಿಧಿಗಳನ್ನು, ಸಹಕಾರಿ ಕಾನೂನು ಹಾಗೂ ನಿಯಮಗಳನ್ನು ಸಹಕಾರಿ ಪರಿಸರವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುವುದು ಅಗತ್ಯ. ಸಹಕಾರಿ ಕ್ಷೇತ್ರದ ವಿರಾಟ ಸ್ವರೂಪವನ್ನು, ಪ್ರಚಲಿತ ವಿಷಯಗಳನ್ನು ತಿಳಿದಿರುವುದು ಅವಶ್ಯಕ. ವಿಶೇಷವಾಗಿ ಸಹಕಾರಿಯ ಹಣಕಾಸಿನ ನಿರ್ವಹಣೆಯ ಬಗ್ಗೆ ವ್ಯವಹಾರಗಳ ಬಗ್ಗೆ, ಸಂಪನ್ಮೂಲಗಳ ಸಂಗ್ರಹಣೆ ಮತ್ತು ಲಾಭದಾಯಕ ಹೂಡಿಕೆ ಮಾಡುವುದು ಮಹತ್ವದ ಜವಾಬ್ದಾರಿ. ಇದರ ಜೊತೆಗೆ ಸ್ವಾಭಾವಿಕ ಸಂಪನ್ಮೂಲಗಳ ಹಾಗೂ ಮಾನವ ಸಂಪನ್ಮೂಲಗಳ ಸದ್ಬಳಕೆಗೆ ಗಮನ, ಆಂತರಿಕ ಸಂಬಂಧಗಳ ನಿರ್ವಹಣೆ ಮತ್ತು ಮಾನವೀಯ ಮೌಲ್ಯಗಳನ್ನು ಪಾಲಿಸುವುದು ಅಗತ್ಯ.

ಈ ದಿಸೆಯಲ್ಲಿ ಸಂಯುಕ್ತ ಸಹಕಾರಿಯು ಪ್ರತಿವರ್ಷ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗೆ ರಾಜ್ಯಮಟ್ಟದಲ್ಲಿ ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಉತ್ತಮ ವಿಷಯಗಳನ್ನು ಅಳವಡಿಸಿಕೊಂಡು, ನುರಿತ ಉಪನ್ಯಾಸಕರಿಂದ ಉಪನ್ಯಾಸ ನೀಡಲಾಗುತ್ತಿದೆ. ಆರೋಗ್ಯಕರ ಚರ್ಚೆ ಹಾಗೂ ಉಪಯುಕ್ತ ವಿಷಯಗಳ ಕುರಿತು ಸಂವಾದ ಕಾರ್ಯಕ್ರಮಗಳನ್ನು ಏರ್ಪಡಿಸುತ್ತ ಬಂದಿದೆ. 2011 ರಿಂದ ಸತತವಾಗಿ ಹಲವಾರು ತರಬೇತಿ ಕಾರ್ಯಕ್ರಮಗಳನ್ನು ಸಂಯುಕ್ತ ಸಹಕಾರಿಯು ಪ್ರತಿವರ್ಷ ಹಮ್ಮಿಕೊಳ್ಳುತ್ತ ಬಂದಿರುತ್ತದೆ. ಪ್ರಸ್ತುತವೂ ಈ ರೀತಿಯ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಸೌಹಾರ್ದ ಸಹಕಾರಿಗಳು ಬಹಳ ಉತ್ಸುಕರಾಗಿರುವುದು ಸಂತೋಷದ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಗುಣಮಟ್ಟದ ಬೆಳವಣಿಗೆಗೆ ಪೂರಕವೆಂದು ಭಾವಿಸುತ್ತೇನೆ.

**ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ**

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ಮಹಾಂತಪ್ಪ ಎಸ್. ಎಮ್
ಸದಸ್ಯರು

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ : 080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop
**youtube :** https://www.youtube.com/@souharda471

**ಒ ಳ ಪು ಟ ಗ ಳ ಲ್ಲಿ. . .**

ಅಧ್ಯಕ್ಷರ ನುಡಿ........................................... 2
ಸಂಪಾದಕೀಯ........................................... 3
ಜ್ಞಾನ ಜ್ಯೋತಿ........................................... 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ........................................................ 05–15
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... ........................................................ 16–17
**ಲೇಖನಗಳು :**
ಸಹಕಾರಿ ಸಂಸ್ಥೆಗಳಲ್ಲಿ ಮುಖ್ಯಕಾರ್ಯನಿರ್ವಾಹಕನ ನೇಮಕ ಪ್ರಭಾರ ವ್ಯವಸ್ಥೆ – ಒಂದು ವಿಮರ್ಷೆ ....... ........................................................ 18–21
'ಜೂನ–1 ವಿಶ್ವ ಹಾಲು ದಿನಾಚರಣೆ' ..... 22, 24
ಮಹಾರಾಷ್ಟ್ರದ ಬುಲ್ಡಾನ ಅರ್ಬನ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಕ್ರೆಡಿಟ್ ಸಹಕಾರ ಸಂಘಗಳಿಗೆ ಮಾದರಿ......................... 23–24
ಸಹಕಾರ ಚಳುವಳಿಯ ಪ್ರಾರಂಭ, ಬೆಳವಣಿಗೆ ಮತ್ತು ಪ್ರಸಕ್ತ ಸನ್ನಿವೇಶ .................... 25–28

# ಸಂಪಾದಕೀಯ

## ನಾಡು, ನುಡಿ, ಕಲೆ, ಸಂಸ್ಕೃತಿಗಳ ರಕ್ಷಣೆ, ಐತಿಹಾಸಿಕ ಹಾಗೂ ಪೌರಾಣಿಕ ಐತಿಹ್ಯಗಳ ಸದ್ಬಳಕೆ, ಪ್ರಚಾರ, ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗಾಗಿ ಪ್ರವಾಸಿ (ಟೂರಿಸ್ಟ್) ಸಹಕಾರ ಸಂಘಗಳ ಸ್ಥಾಪನೆ ರಚನಾತ್ಮಕ ಕಾರ್ಯದಿಂದ ಸಾಧ್ಯ.

"ಆಡು ಮುಟ್ಟದ ಸೋಪ್ಪಿಲ್ಲ ರವಿಕಾಣದ ಸೋಬಗಿಲ್ಲ" ಎಂಬ ಕವಿವಾಣಿಯಂತೆ ಎಂದಂತೆ ಸಹಕಾರ ಕ್ಷೇತ್ರವೂ ಜೀವನದ ಎಲ್ಲ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದೆ. ಸಮುದಾಯಗಳ ಒಳಜಾತಿಗಳಿಗೂ ಅವರವರ ಆರ್ಥಿಕ ಅಭಿವೃದ್ಧಿಗಾಗಿ ಗುರಿಸಾಧನೆಗಾಗಿ ಪ್ರಾರಂಭಿಸಿರುವ 50ಕ್ಕೂ ಹೆಚ್ಚು ವಿಧವಾದ ಸಹಕಾರ ಸಂಘಗಳನ್ನು ನಾವು ಕಾಣಬಹುದಾಗಿದೆ. ಹುಟ್ಟಿನಿಂದ ಚಟ್ಟದವರೆಗೆ ಮಾನವನ ಎಲ್ಲ ಚಟುವಟಿಕೆಗಳನ್ನು ಸಹಕಾರ ಕ್ಷೇತ್ರದಿಂದ ನಿರ್ವಹಿಸಲಾಗುತ್ತಿದೆ. ಅಂದು ಕೇವಲ ಸೇವಾ ಕ್ಷೇತ್ರವಾಗಿ ಪ್ರಾರಂಭವಾಗಿರುವ ಈ ಸಹಕಾರ ಕ್ಷೇತ್ರ ಇಂದು ಉತ್ತಮ ಆರ್ಥಿಕ ಸಂಘಟನೆಯಾಗಿ ಸದಸ್ಯರ ಕೈದೀವೀಗೆಯಂತೆ ಕಾರ್ಯನಿರ್ವಹಿಸುತ್ತಿರುವುದನ್ನು ನಾವು ಕಾಣುತ್ತೇವೆ. ಆದಾಗ್ಯೂ ಸಹಕಾರ ಕ್ಷೇತ್ರ ಇನ್ನೂ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕು ಕಾರ್ಯನಿರ್ವಹಿಸದ ಕ್ಷೇತ್ರಗಳ ಅನ್ವೇಷಣೆಯಾಗಬೇಕು ಎಂಬುದರ ಬಗ್ಗೆ ಅನೇಕ ವೇದಿಕೆಗಳಲ್ಲಿ ಚರ್ಚೆಗಳು ನಡೆಯುತ್ತಿವೆ. ಕಳೆದ ಸಂಚಿಕೆಯಲ್ಲಿ ಕ್ಯಾಂಪಸ್ ಸಹಕಾರಿ ಸಂಘಗಳನ್ನು ಹೆಚ್ಚು ಪ್ರಾರಂಭಿಸಲು ವಿಫುಲ ಅವಕಾಶಗಳಿವೆ. ಈ ಬಗ್ಗೆ ಕ್ರಮ ಅಗತ್ಯ ಎಂದು ಸೂಚಿಸಲಾಗಿತ್ತು. ಈ ಬಾರಿ ಪ್ರವಾಸಿ ಸೌಹಾರ್ದ ಸಹಕಾರಿ ಸಂಸ್ಥೆಗಳನ್ನು ಪ್ರಾರಂಭಿಸುವ ಅಗತ್ಯತೆ ಬಗ್ಗೆ ವಿಚಾರ ಮಾಡುವುದು ಅಗತ್ಯ ಎನಿಸಿದೆ.

ಪ್ರಪಂಚಕ್ಕೆ ಭಾರತವೇ ಒಂದು ಪ್ರವಾಸಿ ತಾಣ. ಇಲ್ಲಿನ ಸ್ವಾಭಾವಿಕ ಸಂಪನ್ಮೂಲಗಳು, ಬೆಟ್ಟಗುಡ್ಡಗಳು, ಗಿರಿಕಂದರಗಳು, ವಿಶಾಲವಾಗಿ ಹರಿದಿರುವ ನದಿಗಳು, ಅರಣ್ಯ ಸಂಪತ್ತು, ಪ್ರಾಕೃತಿಕ ನಯನ ಮನೋಹರ ದೃಶ್ಯಗಳು, ಪೌರಾಣಿಕ ಹಾಗೂ ಐತಿಹಾಸಿಕ ಸ್ಮಾರಕಗಳು ಗ್ರಾಮೀಣ ಜೀವನ, ಗ್ರಾಮೀಣ ಕೈಗಾರಿಕೆಗಳು, ವೈವಿಧ್ಯಮಯವಾದ ಭಾಷೆ, ಉಡುಗೆ ತೊಡುಗೆ, ಊಟ ಉಪಹಾರಗಳು ಹೀಗೆ ಎಲ್ಲವೂ ಪ್ರವಾಸಿಗರಿಗೆ ಆಕರ್ಷಣೆ ಮಾಡುವಂತಹದ್ದಾಗಿದೆ. ಈ ವಿಷಯಗಳನ್ನು ಸಹಕಾರ ಕ್ಷೇತ್ರದ ಮೂಲಕ ಟೂರಿಸ್ಟ್ ಸಹಕಾರ ಸಂಘಗಳನ್ನು ಸ್ಥಾಪಿಸಿ ಅವುಗಳ ಮೂಲಕ ಈ ಎಲ್ಲ ವಿಷಯಗಳ ಬಗ್ಗೆ ಯುವಕರಿಗೆ ಮಾಹಿತಿ ವಿಶೇಷವಾಗಿ ಅತಿಥಿ ಸತ್ಕಾರದ, ಊಟ ತಿಂಡಿಗಳ ಪ್ರವಾಸಿಗರಿಗೆ ಅವುಗಳ ಸಮರ್ಪಕ ವಿವರಣೆಯನ್ನು ನೀಡುವ ಸಾಮರ್ಥ್ಯವನ್ನು ಬೆಳೆಸಿಕೊಂಡಾಗ ಈ ಪ್ರವಾಸಿ ಸೌಹಾರ್ದ ಸಹಕಾರಿ ಸಂಘಗಳ ಮೂಲಕ ಗ್ರಾಮೀಣ ಜನರಿಗೆ ಉದ್ಯೋಗ ನೀಡುವಲ್ಲಿ ಸಹಕಾರಿಯಾಗಬಹುದಾಗಿದೆ.

ಕರ್ನಾಟಕದ ಶಿರಸಿಯಲ್ಲಿ ಇದೇ ಮಾದರಿಯ ಒಂದು ಸ್ಪೈಸ್ ರೂಟ್ ಎಂಬ ಹೆಸರಿನ ಸೌಹಾರ್ದ ಸಹಕಾರಿ ಇದೆ. ಬೀದರ್‌ನಲ್ಲಿ ಪ್ರವಾಸಿ ಸೌಹಾರ್ದ ಸಹಕಾರಿ ನಿ., ಬೀದರ ಇವುಗಳ ಕಾರ್ಯಚಟುವಟಿಕೆಗಳು ವಿಭಿನ್ನವಾಗಿವೆ. ಸ್ಪೈಸ್ ರೂಟ್ ಸಂಘಕ್ಕೆ ಅನೇಕ ವಿದೇಶಿಯರು ಭೇಟಿ ನೀಡಿದ್ದಾರೆ. ಗ್ರಾಮೀಣ ಜೀವನ, ಕಲೆಗಳು, ಉಡಿಗೆ ತೊಡಿಗೆಗಳು, ಊಟ ಉಪಹಾರ, ಪ್ರಾದೇಶಿಕ, ಸಾಂಸ್ಕೃತಿಕ, ಪೌರಾಣಿಕ ಹಾಗೂ ಗ್ರಾಮೀಣ ಜೀವನ ಶೈಲಿಯ ಬಗ್ಗೆ ಮಾಹಿತಿ ನೀಡಲಾಗುತ್ತದೆ. ಅದೇ ರೀತಿ ಪ್ರವಾಸಿ ಸೌಹಾರ್ದ ಸಹಕಾರಿ ವತಿಯಿಂದ ರಾಜ್ಯದ / ಹೊರ ರಾಜ್ಯದ ಪ್ರವಾಸಿಗರು ಭೇಟಿ ನೀಡಿ ಬೀದರ ಕೋಟೆ ಸೇರಿದಂತೆ ಬೀದರ ಜಿಲ್ಲೆಯ ಅನೇಕ ಪ್ರವಾಸಿ ತಾಣಗಳನ್ನು ವೀಕ್ಷಿಸಿದ್ದಾರೆ. ಈ ರೀತಿಯ ಕಾರ್ಯಚಟುವಟಿಕೆಗಳನ್ನು ರಾಜ್ಯದಾದ್ಯಂತ ಎಲ್ಲಾ ಸೌಹಾರ್ದ ಸಹಕಾರಿ ಸಂಘಗಳಲ್ಲೂ ಈ ರೀತಿಯ ಕಾರ್ಯಗಳನ್ನು ಮಾಡಬಹುದಾಗಿದೆ. ಅಥವಾ ವಿಶೇಷವಾಗಿ ಪ್ರವಾಸಿ ಸಹಕಾರ ಸಂಘಗಳನ್ನು ಸ್ಥಾಪಿಸಲು ಕ್ರಮವಿಡಬಹುದಾಗಿದೆ.



## ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

## "ಜಗತ್ತು ಜಗದೀಶ"

ಬ್ರಹ್ಮ ಎಂದರೆ ಸುಂದರ, ಅರ್ಥಪೂರ್ಣ, ಆಧ್ಯಾತ್ಮಿಕ ಕ್ಷೇತ್ರದಲ್ಲಿ ಈ ಶಬ್ಧಕ್ಕೆ ಬಹಲ ಮಹತ್ವವಿದೆ. ಭಾರತದಲ್ಲಿ ರೂಪಗೊಂಡ ಎಲ್ಲ ಆಧ್ಯಾತ್ಮಿಕ ಗ್ರಂಥಗಳಲ್ಲಿ ಇದರ ಪ್ರಸ್ತಾಪವಿದೆ. ಸಾವಿರಾರು ವರ್ಷಗಳ ಹಿಂದೆ ಋಷಿಗಳು ಅರಣ್ಯ ಮಧ್ಯದಲ್ಲಿ ಕುಳಿತು ಸತ್ಯಶೋಧನೆಯಲ್ಲಿ ತೊಡಗಿದರು; ಎಲ್ಲವನ್ನೂ ಮರೆತರು; ಎಲ್ಲವನ್ನೂ ತ್ಯಜಿಸಿದರು. ಮನುಕುಲದಲ್ಲಯೇ ಇದೊಂದು ಅಪೂರ್ವ ಸಂಗತಿ, ಇಂದು ಭಾರತದಲ್ಲಿ ಇಡೀ ಜಗತ್ತು ಕೊಂಡಾಡಲು ಋಷಿಗಳು ಕೈಗೊಂಡ ಈ ಶೋಧನೆಯೇ ಕಾರಣ.

ಇಂದಿನ ವಿಜ್ಞಾನಿಗಳ ಶೋಧ ಅಷ್ಟು ಕಠಿಣದ್ದಲ್ಲ. ಅವರು ಕಾಣುವ ಜಗತ್ತಿನ ಒಳ–ಹೊರಗನ್ನು ನೋಡುತ್ತಾರೆ. ಆದರೆ ಸಾವಿರಾರು ವರ್ಷಗಳ ಹಿಂದೆ, ಮೂಲಭೂತ ಸೌಲಭ್ಯಗಳೇ ಇರದ ಕಾಲದಲ್ಲಿ ಋಷಿಗಳು ಈ ಕಾರ್ಯ ಮಾಡಿದರು. ಅವರು ಕಣ್ಣಿಗೆ ಕಾಣದ ಪರಮ ಸತ್ಯದ ಕುರಿತು ಚಿಂತನೆ ಮಾಡಿದರು. ಈ ವಿಶ್ವದ ಹಿಂದಿರುವ ಶಕ್ತಿಯನ್ನು ಕುರಿತು ಶೋಧಕ್ಕೆ ತೊಡಗಿದರು. ಈ ಶೋಧಕ್ಕಾಗಿ ಎಲ್ಲವನ್ನೂ ತ್ಯಜಿಸಿದರು. ಜಗತ್ತಿನಲ್ಲಿ ಯಾವುದೇ ಶೋಧವಾಗಬೇಕಾದರೆ ಅದರಲ್ಲಿ ಮುಳುಗಬೇಕಾಗುತ್ತದೆ. ಇಲ್ಲದಿದ್ದರೆ ಈ ಜಗತ್ತು ತನ್ನ ರಹಸ್ಯವನ್ನು ಬಿಟ್ಟುಕೊಡುವುದಿಲ್ಲ. ಹಾಗೇ ಮುಳುಗಿದವರೇ ಋಷಿಗಳು.

ಯಾವುದು ಜಗತ್ತು ಜೀವನವನ್ನು ಆರಂಭಿಸುವುದಕ್ಕೆ ಮುಂಚೆ ಇತ್ತೋ ಅದೇ ಬ್ರಹ್ಮ. ಅಲ್ಲಮ ಪ್ರಭುಗಳು ಹೇಳುವಂತೆ.

ಆದಿಆಧಾರವಿಲ್ಲದಂದು ಹಮ್ಮು ಬಿಮ್ಮುಗಳಿಲ್ಲದಂದು,
ಸುರಾಳನಿರಾಳವಿಲ್ಲದಂದು ಶೂನ್ಯನಿಶ್ಶೂನ್ಯವಿಲ್ಲದಂದು,
ಸಚರಾಚರವೆಲ್ಲ ರಚನೆಗೆ ಬಾರದಂದು
ಗುಹೇಶ್ವರಾ, ನಿಮ್ಮ ಶರಣನುದಯಿಸಿದನಂದು.

ಅದುವೇ ಬ್ರಹ್ಮ, ಬ್ರಹ್ಮ ಅಂಕಿತನಾಮ ಅಲ್ಲ, ಅದು ಅನ್ವರ್ಥಕನಾಮ. ಶಬ್ದದೊಳಗೇ ಅರ್ಥವಿದೆ – 'ಬ್ರಹ್ಮ' ಎಂದರೆ ಬಹಳ ದೊಡ್ಡದು. ಕಣ್ಣಿಗೆ ಕಾಣಲಾರದಷ್ಟು, ಮನಸ್ಸಿಗೆ ಸಿಗಲಾರದಷ್ಟು, ತರ್ಕಕ್ಕೆ ಹಿಡಿಸಲಾರದಷ್ಟು ದೊಡ್ಡದು. ಯಾವುದು ಸತ್ಯವೋ ಅದನ್ನು ನಾಶ ಮಾಡಲು ಬರುವುದಿಲ್ಲ. ಯಾವುದು ನಾಶವಾಗುತ್ತದೆಯೋ ಅದು ಸತ್ಯವಿಲ್ಲ. ಬ್ರಹ್ಮ ಸತ್ಯ ಆದ್ದರಿಂದ 'ಅಕ್ಷರಂ ಪರಬ್ರಹ್ಮ' ಎನ್ನುತ್ತಾರೆ. ಅಂದರೆ ಬ್ರಹ್ಮ ಅವಿನಾಶಿ. ಎಲ್ಲದರಲ್ಲೂ ಬ್ರಹ್ಮ ಇದೆ. ಆದರೆ ಎಲ್ಲವೂ ಬ್ರಹ್ಮ ಅಲ್ಲ. ಆಕಾಶದಲ್ಲಿ ಎಲ್ಲವೂ ಸಮಾಗಮಗೊಳ್ಳುತ್ತದೆ. ಆದರೆ ಎಲ್ಲದರಲ್ಲೂ ಆಕಾಶ ಸಮಗಮಗೊಳ್ಳುವುದಿಲ್ಲ. ಇಲ್ಲಿ ತಿಳಿದವರು ಇದನ್ನು ಬೇರೆ ಬೇರೆ ಹೆಸರುಗಳಿಂದ ಹೇಳಿದರು – ಅಲ್ಲಮಪ್ರಭುಗಳು ಇದನ್ನು 'ಏನೂ ಅಲ್ಲ' ಎಂದರು: ಋಷಿಗಳು 'ನಿಶ್ಯಬ್ದಂ ಬ್ರಹ್ಮಮುಚ್ಯತೆ' ಎಂದರು; ಸಾಕ್ರೆಟಿಸ್, ಝೆನ್ ಗುರುಗಳು ಇನ್ನೂ ಏನೇನೋ ಕರೆದರು. ಅವರು ಹೇಳಿದ ಶಬ್ದಗಳು ಬೇರೆ ಬೇರೆ ಆದರೂ ಅರ್ಥ ಒಂದೇ. ಏಕೆಂದರೆ ಅವರೆಲ್ಲರೂ ಸತ್ಯವನ್ನೂ ಕಂಡವರು.

ದೇವರಲ್ಲಿ ಎರಡೂ ಪ್ರಕಾರಗಳು – 'ಕಾಣುವ ದೇವರು' ಹಾಗೂ 'ಕಾಣದ ದೇವರು' ಕಾಣುವ ದೇವರೆಂದರೆ ನಾವು ನಮ್ಮ ಅನುಕೂಲಕ್ಕಾಗಿ ಬೇರೆ ಬೇರೆ ಹೆಸರುಗಳನ್ನು ಕೊಟ್ಟು ಕರೆಯುವ ದೇವರು. ಆದರೆ ಕಾಣದ ದೇವರು ಎಂದರೆ ಕಾಣುವ ದೇವರಿಗಿಂಗ ತೀರ ಭಿನ್ನ. ಕಾಣದ ದೇವರು ಬಟ್ಟಯಲು; ಎಲ್ಲವೂ ಅದರಲ್ಲಿದೆ: ಜಗತ್ತಿಗಿಂತ ಅದು ದೊಡ್ಡದು; ದಿಕ್ಕು ರಹಿತವಾದುದು: ಅದು ಬ್ರಹ್ಮ. "ಸರ್ವಂ ಖಲ್ವಿದಂ ಬ್ರಹ್ಮ", ಬ್ರಹ್ಮ ಮಧ್ಯೇ ಜಗತ್ ಸರ್ವಂ" ಅಂದರೆ ಎಲ್ಲದರಲ್ಲೂ ಇರುವುದು ದೇವರು.

ಮನುಷ್ಯ ಯಾವಾಗಲೂ ಸತ್ಯವನ್ನೂ ಪ್ರೀತಿಸಬೇಕು. ಆದರೆ ಇಂದು ಮನುಷ್ಯ ಕೈಬಿಟ್ಟುಹೋಗುವ ಅಸತ್ಯವನ್ನೂ ಪ್ರೀತಿಸುತ್ತಿದ್ದಾನೆ; ಯಾವುದು ನಾಶನಾಗುತ್ತದೆಯೋ ಅದನ್ನು ಪ್ರೀತಿಸುತ್ತಿದ್ದಾನೆ; ಯಾವುದನ್ನೂ ಸಣ್ಣದು ಮಾಡಬಹುದೋ ಅದಕ್ಕಾಗಿ ಹಂಬಲಿಸುತ್ತಿದ್ದಾನೆ; ಹೀಗಾಗಿ ಮನುಷ್ಯನಲ್ಲಿ ಚಿಂತೆ ಶುರುವಾಗಿದೆ. ಆದ್ದರಿಂದ ಮನುಷ್ಯ ಯಾವುದು ಕೈಬಿಟ್ಟು ಹೋಗುವುದಿಲ್ಲವೋ ಅದನ್ನು ಪ್ರೀತಿಸಬೇಕು. ದೇವರೆಂದರೆ ಅದು ನಿರಾಕಾರ; ಒಂದು ಸಂಕೇತ. ನಾವು ಕಾಣುವ ದೇವರು ನಿಜ ದೇವರ ಛಾಯೆ. ಹೀಗೆ 'ಅಕ್ಷರ' ಹಾಗೂ 'ಪೂರ್ಣ'ನಾದ ಪರಬ್ರಹ್ಮನ ಕಲ್ಪನೆ ಸಾವಿರಾರು ವರ್ಷಗಳ ಹಿಂದಿರುವ ಋಷಿಗಳದ್ದು. ಇಂದು ನಮಗೆ ಅದನ್ನು ತಿಳಿಯುವುದೇ ಕಷ್ಟವಾಗಿದೆ. ಇಂದು ನಾವು ದೇವರಿಗೆ ಇಟ್ಟಿರುವ ಹೆಸರು ಹಾಗು ಆಕಾರಗಳೆರಡನ್ನು ಸ್ವಲ್ಪ ಸರಿಸಿಬಿಟ್ಟರೆ ಉಳಿಯುವುದೇ ದೇವರು.

ಪರಬ್ರಹ್ಮನ ಅರ್ಥವನ್ನು ತಿಳಿದನಂತರ ಶಿಷ್ಯ ಪ್ರಶ್ನೆ ಕೇಳುತ್ತಾನೆ, "ಗುರುವೇ. ಇಂತಹ ದೇವರು ಮತ್ತು ಈ ಜಗತ್ತಿನ ಮಧ್ಯವಿರುವ ಸಂಬಂಧ ಏನು?" ಆಗ ಗುರು ಹೇಳುತ್ತಾನೆ. "ಅವೆರಡರ ಮಧ್ಯೆ ಇರುವ ಸಂಬಂಧ ತಿಳಿಯುವುದಕ್ಕಿಂತ ಮೊದಲು ಈ ಜಗತ್ತು ಹೇಗಿದೆ ಎಂಬುದನ್ನು ತಿಳಿ".

ಜಗತ್ತು ಹೇಗಿದೆ? ಇದು ಬೇರೆ ಬೇರೆಯವರಿಗೆ ಬೇರೆ ಬೇರೆ ರೀತಿಯಲ್ಲಿ ಕಂಡಿದೆ. ಈ ಜಗತ್ತಿನಲ್ಲಿ ಅದಕ್ಕಾಗಿ ಯುದ್ಧಗಲೇ ನಡೆದಿವೆ. ಅದನ್ನು ತಿಳಿಯದೇ ಆಳಲು ಮನುಷ್ಯ ಹಪಹಪಿಸುತ್ತಿದ್ದಾನೆ. ಆದರೆ ಜಗತ್ತಿನ ನಿಜವಾದ ಅರ್ಥ ಯಾರಿಗೂ ತಿಳಿದಿಲ್ಲ. ನಾವಿರುವ ಜಗತ್ತನ್ನು ತಿಳಿಯಬೇಕು. ಸರಿಯಾಗಿ ತಿಳಿದುಕೊಳ್ಳಬೇಕು. ಸರಿಯಾಗಿ ತಿಳಿದರೆ ಸರಿಯಾಗಿ ಬದುಕಬಹುದು. ತಪ್ಪಾಗಿ ತಿಳಿದರೆ ತಪ್ಪು ನಿರ್ಣಯ ಕೈಗೊಂಡು ಜೀವನವೇ ಕೆಡಬಹುದು.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 35,567 ಆಗಿರುತ್ತದೆ. ಇವುಗಳ ಪೈಕಿ 27,248 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 8,319

**ಮೇ ತಿಂಗಳ ಪ್ರಕರಣಗಳು :** ದಾವಾ ಪ್ರಕರಣ 1153 ಇತ್ಯರ್ಥಗೊಂಡ ಪ್ರಕರಣಗಳು 1,434.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 9,405 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 1,713 ಪ್ರಕರಣಗಳು ಇತ್ಯರ್ಥಗೊಂಡಿದ್ದು. 7,692 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಮೇ ತಿಂಗಳಿನಲ್ಲಿ ಒಟ್ಟು 319 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ.

# "ಸಹಕಾರ ಹಾಗೂ ಬ್ಯಾಂಕಿಂಗ್ ಮೆನೇಜ್‌ಮೆಂಟ್ ಡಿಪ್ಲೋಮಾ" (ಡಿ.ಸಿ.ಬಿ.ಎಮ್) 2ನೇ ತಂಡದ ತರಗತಿಗಳ (ಆನ್ ಲೈನ್) ಉದ್ಘಾಟನೆ



**ಶಿಕ್ಷಣ ಮತ್ತು ಅಕಾಡೆಮಿ ಅಂತರವನ್ನು ಕಡಿಮೆ ಮಾಡುತ್ತದೆ : ಶ್ರೀ ಶ್ರೀನಿವಾಸ ಬಳ್ಳಿ, ಕುಲಪತಿಗಳು, ನೃಪತುಂಗ ವಿಶ್ವವಿದ್ಯಾಲಯ, ಬೆಂಗಳೂರು.**

ಕರ್ನಾಟಕ ರಾಜ್ಯ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ ರಾಜ್ ವಿಶ್ವವಿದ್ಯಾಲಯ ಮತ್ತು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು ಜಂಟಿಯಾಗಿ ಪ್ರಾರಂಭಿಸಿದ ಡಿ.ಸಿ.ಬಿ.ಎಮ್ ಕೋರ್ಸಿನ 2ನೇ ತಂಡವನ್ನು ನೃಪತುಂಗ ವಿಶ್ವವಿದ್ಯಾಲಯದ ಕುಲಪತಿಗಳಾದ ಶ್ರೀ ಶ್ರೀನಿವಾಸ ಬಳ್ಳಿಯವರು ದಿನಾಂಕ 18-5-2024ರಂದು ಉದ್ಘಾಟಿಸಿ ಮಾತನಾಡುತ್ತ ಅಕಾಡೆಮಿ ಮತ್ತು ಶಿಕ್ಷಣದ ಅಂತರವನ್ನು ಈ ಕೋರ್ಸಿನಿಂದ ಕಡಿಮೆ ಮಾಡಲು ಸಾಧ್ಯವಾಗುತ್ತದೆ. ಇದೊಂದು ಒಳ್ಳೆಯ ಪ್ರಯತ್ನ. ಇದರಿಂದಾಗಿ ಹೆಚ್ಚಿನ ಯುವಕರು ಸಹಕಾರ ಕ್ಷೇತ್ರವನ್ನು ಅಧ್ಯಯನ ಮಾಡಲು ಹಾಗೂ ಜೀವನೋಪಾಯಕ್ಕೆ ಉಪಯೋಗಿಸಿಕೊಳ್ಳಲು ಸಾಧ್ಯವಾಗುತ್ತದೆ. ಎಂದು ತಿಳಿಸಿದರು.

**ಯುವಕರಿಗೆ ಸಹಕಾರಿ ಕ್ಷೇತ್ರ ಪರಿಚಯಿಸುವ ಪ್ರಯತ್ನ : ಶ್ರೀ ನಂಜನಗೌಡ, ಅಧ್ಯಕ್ಷರು, ಸಂಯುಕ್ತ ಸಹಕಾರಿ, ಬೆಂಗಳೂರು.**

ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ಮಾತನಾಡಿ ರಾಜ್ಯದ ಸೌಹಾರ್ದ ಸಹಕಾರಿಗಳಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಯ ಕೌಶಲ್ಯವನ್ನು ಹೆಚ್ಚಿಸುವುದರ ಜೊತೆಗೆ ಯುವಕರನ್ನು ಸಹಕಾರಿ ಕ್ಷೇತ್ರಕ್ಕೆ ಪರಿಚಯಿಸವುದು ಮತ್ತು ಯುವಕರು ಈ ಕ್ಷೇತ್ರದ ಪ್ರಯೋಜನವನ್ನು ಪಡೆಯಲು ಅವರಿಗೆ ಈ ಕ್ಷೇತ್ರದ ಜ್ಞಾನವನ್ನು ಒದಗಿಸುವುದು ಸಂಯುಕ್ತ ಸಹಕಾರಿಯ ಪ್ರಯತ್ನವಾಗಿದೆ. ಈಗಾಗಲೇ ಸಂಯುಕ್ತ ಸಹಕಾರಿಯ ವತಿಯಿಂದ 4 ತಂಡಗಳನ್ನು ಹಾಗೂ ವಿಶ್ವವಿದ್ಯಾಲಯದೊಂದಿಗೆ ಒಂದು ತಂಡ ಸೇರಿ ಒಟ್ಟಾರೆ 5 ತಂಡಗಳಿಂದ 2022 ಯುವಕರು ಹಾಗೂ ಸಿಬ್ಬಂದಿಯವರು ಈ ಕೋರ್ಸಿನ ಪ್ರಯೋಜನ ಪಡೆದಿದ್ದಾರೆ ಎಂದ ತಿಳಿಸಿದರು.

ಆರ್ಥಿಕ ಹಾಗೂ ಹಣಕಾಸು ಕ್ಷೇತ್ರಗಳಲ್ಲಿ ಸಹಕಾರ ಕ್ಷೇತ್ರಕ್ಕೆ ಮಹತ್ವದ ಪಾತ್ರ ನಿರ್ವಹಿಸಬೇಕಿದೆ. ಗ್ರಾಮೀಣ ಅಭಿವೃದ್ಧಿಯಲ್ಲಿ ಸಹಕಾರ ಕ್ಷೇತ್ರದ ಪಾತ್ರ ಮಹತ್ವದ್ದು.

**ಪ್ರೊ. ಶ್ರೀ ವಿಷ್ಣುಕಾಂತ ಚಟಪಲ್ಲಿ, ಕುಲಪತಿಗಳು, ಕೆಎಸ್‌ಆರ್‌ಡಿಪಿಆರ್.**

ವಿಶ್ವವಿದ್ಯಾಲಯದ ಕುಲಪತಿಗಳಾದ ಶ್ರೀ ವಿಷ್ಣುಕಾಂತ ಚಟಪಲ್ಲಿಯವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಈ ವಿಶ್ವ ವಿದ್ಯಾಲಯವು ಗ್ರಾಮೀಣ ಅಭಿವೃದ್ಧಿಗೆ ಹೆಚ್ಚಿನ ಒತ್ತು ಕೊಡುವ ವಿಶ್ವವಿದ್ಯಾಲಯವಾಗಿದೆ. ಗ್ರಾಮೀಣ ಅಭಿವೃದ್ಧಿಯಲ್ಲಿ ಸಹಕಾರ ಮಹತ್ವದ ಪಾತ್ರ ನಿರ್ವಹಿಸುತ್ತದೆ. ಹಿಗಾಗಿ ಸಹಕಾರ ಕ್ಷೇತ್ರದ ಈ ಡಿಪ್ಲೋಮಾ ಕೋರ್ಸಿಗೆ ನಾವು ಹೆಚ್ಚಿನ ಮಹತ್ವವನ್ನು ನೀಡುತ್ತೇವೆ. ಯುವಕರು ಹಾಗೂ ಸೌಹಾರ್ದ ಸಹಕಾರಿ ಸಿಬ್ಬಂದಿಯವರು ಹೆಚ್ಚಿನ ಸಂಖ್ಯೆಯಲ್ಲಿ ಈ ಕೋರ್ಸಿನ ಪ್ರಯೋಜನವನ್ನು ಪಡೆದುಕೊಳ್ಳಲು ಮುಂದಾಗಬೇಕು ಎಂದು ಕರೆನೀಡಿದರು.

**ಕಲಿಕೆ ಜೊತೆಗೆ ಅನುಷ್ಠಾನ ಈ ಕೋರ್ಸಿನ ವೈಶಿಷ್ಟ್ಯತೆ : ಶ್ರೀ ಮನೋಹರ ಮಸ್ಕಿ, ಸುಕೋ ಬ್ಯಾಂಕ ಸ್ಥಾಪಕ ಅಧ್ಯಕ್ಷರು, ಬಳ್ಳಾರಿ.**

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರಾದ ಶ್ರೀ ಮನೋಹರ ಮಸ್ಕಿಯವರು ಇದೊಂದು ಉತ್ತಮವಾದ ಡಿಪ್ಲೋಮಾ ಕೋರ್ಸ್ ಆಗಿದೆ. ಕಲಿಕೆಗೆ ಅವಕಾಶದ ಜೊತೆಗೆ ಕಲಿತ ವಿಷಯಗಳನ್ನು ಕಾರ್ಯಗತಮಾಡುವ ಅವಕಾಶ ಜೊತೆಗೆ ಅವರ ಕೌಶಲ್ಯವನ್ನು ಹೆಚ್ಚಿಸಿಕೊಳ್ಳುವ ಅವಕಾಶ ಜೊತೆಗೆ ಸಹಕಾರಿ ಸಂಸ್ಥೆಗೆ ಉತ್ತಮ ಸಿಬ್ಬಂದಿಯಂತೆ ಕಾರ್ಯನಿರ್ವಹಿಸುವ ಅವಕಾಶ ಒದಗಿಸುತ್ತದೆ. ಉತ್ತಮ ವಿಷಯಗಳಿವೆ. ಪಠ್ಯಕ್ರಮ ಉತ್ತಮವಾಗದೆ. ಆಗ್ಗಿಂದ್ದಾಗೆ ಇದನ್ನು ಪರಿಷ್ಕರಿಸಿ ಇಂದೀಕರಿಸಲಾಗುತ್ತದೆ. ವಿಶೇಷವಾಗಿ ಈ ಕ್ಷೇತ್ರದ ಬಗ್ಗೆ ತಿಳಿದುಕೊಳ್ಳಲು ಸಾಕಷ್ಟು ಅವಕಾಶವಾಗುತ್ತದೆ. ಎಂದು ತಿಳಿಸಿದರು.

**ಕೌಶಲ್ಯ ಹಾಗೂ ಮೌಲ್ಯವೃದ್ಧಿಯ ಕೋರ್ಸ್ ಇದಾಗಿದೆ : ಪ್ರೊ. ಶ್ರೀ ಎಸ್. ಎಸ್.ಹೂಗಾರ, ನಿವೃತ್ತ ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು ಬಿ.ಓ.ಎಸ್.**

ಈ ಕೋರ್ಸ್ ಸಂಯುಕ್ತ ಸಹಕಾರಿಯ ಹಾಗೂ ವಿಶ್ವವಿದ್ಯಾಲಯದ ಮಹತ್ವಕಾಂಕ್ಷೆಯ ಹಾಗೂ ಕನಸಿನ ಕೋರ್ಸ್ ಆಗಿ ಹೊರಹೊಮ್ಮಿದೆ. ಗ್ರಾಮೀಣ ಅಭಿವೃದ್ಧಿಯ ಗುರಿ ಇರುವ ಈ ವಿಶ್ವವಿದ್ಯಾಲಯ ಹಾಗೂ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಯ ಗುರಿ ಇರುವ ಸಂಯುಕ್ತ ಸಹಕಾರಿ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ನಿಟನಲ್ಲಿ ಹಾಗೂ ಯುವಕರನ್ನು ಈ ಕ್ಷೇತ್ರಕ್ಕೆ ಬರಮಾಡಿಕೊಳ್ಳುವ ದೃಷ್ಟಿಯಿಂದ ಉತ್ತಮ ವಿಷಯಗಳನ್ನು ಆಯ್ಕೆ ಉತ್ತಮ ಪಠ್ಯಕ್ರಮವನ್ನು ಅಳವಡಿಸಿದೆ. ಈ ಕೋರ್ಸ್ ಸಿದ್ಧತೆಗಾಗಿ ಸಂಯುಕ್ತ ಸಹಕಾರಿ ಹಾಗೂ ವಿಶ್ವವಿದ್ಯಾಲಯಗಳು ಸಾಕಷ್ಟು ಶ್ರಮ ಹಾಕಿವೆ. ಹೀಗಾಗಿ ಈ ಕೋರ್ಸ್

ಉತ್ತಮವಾಗಿ ಹೊರಹೊಮ್ಮುತ್ತಿದೆ ಈ ಪೈಪೋಟಿ ಯುಗದಲ್ಲಿ ಸಹಕಾರ ಕ್ಷೇತ್ರ ಇನ್ನೂ ಹೆಚ್ಚಿನ ದಕ್ಷತೆ ಹಾಗೂ ಪಾರದರ್ಶಕತೆಯಿಂದ ಕಾರ್ಯ ನಿರ್ವಹಿಸುವಂತಾಗಲು ಈ ಕೋರ್ಸ ಉತ್ತಮ ಮಾರ್ಗದರ್ಶನ ನೀಡುತ್ತದೆ ಎಂದು ತಿಳಿಸಿದರು.

ಡಾ. ಶ್ರೀ ಸುರೇಶ ನಾಡಗೌಡ, ಕುಲಸಚಿವರು ಇವರು ಉಪಸ್ಥಿತರಿದ್ದು ಡಿ.ಸಿ.ಬಿ.ಎಂ ಕೋರ್ಸ್‌ನ ವೈಶಿಷ್ಟತೆ ಮತ್ತು ಉಪಯೋಗದ ಬಗ್ಗೆ ತಿಳಿಸಿ ಈ ಕೋರ್ಸಿನ ಸಂಪೂರ್ಣ ಯಶಸ್ಸಿಗೆ ವಿಶ್ವವಿದ್ಯಾಲಯ ಬದ್ಧವಾಗಿದೆ ಎಂದು ತಿಳಿಸಿ ಕೋರ್ಸಿಗೆ ಶುಭ ಹಾರೈಸಿದರು.

ಶ್ರೀ ಶರಣಗೌಡ ಜಿ. ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಸಂಯುಕ್ತ ಸಹಕಾರಿ ಇವರು ಅತಿಥಿಗಳ ಪರಿಚಯ ಮಾಡಿ ಪ್ರಾಸ್ತವಿಕವಾಗಿ ಮಾತನಾಡಿ ಈ ಕೋರ್ಸಿನ ಪ್ರಾರಂಭಿಸುವ ಹಂತದಲ್ಲಿ ವಿಶ್ವವಿದ್ಯಾಲಯ ಮತ್ತು ಸಂಯುಕ್ತ ಸಹಕಾರಿ ಆಡಳಿತ ಮಂಡಳಿಯವರ ಇಚ್ಛಾಶಕ್ತಿ ಹಾಗೂ ತೀರ್ಮಾನದಂತೆ ದಿನಾಂಕ 05.01.2023 ರಂದು ವಿಶ್ವವಿದ್ಯಾಲಯದ ಜೊತೆಗೆ ಒಪ್ಪಂದ ಮಾಡಿಕೊಂಡು ದಿನಾಂಕ 01.01.2023 ರಂದು ಈ ಕೋರ್ಸ್‌ನ್ನು ಪ್ರಾರಂಭಿಸಲಾಯಿತು.

ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ಸಿಬ್ಬಂದಿ ಶ್ರೀಮತಿ ವಿಜಯಶ್ರೀ ರವರಿಂದ ಪ್ರಾರ್ಥನೆ, ಕಾರ್ಯಕ್ರಮದ ಕೋ–ಆರ್ಡಿನೇಟರ್ ಡಾ. ಶ್ರೀ ಅಭಯ ಗಸ್ತಿಯವರು ಅತಿಥಿಗಳನ್ನು ಸ್ವಾಗತ ಮಾಡಿದರು ಕೊನೆಯಲ್ಲಿ ಡಾ. ಶ್ರೀ ಅಭಿಷೇಕ ರವರು ವಂದನಾರ್ಪಣೆ ಮಾಡಿದರು.

ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಅಧಿಕಾರಿಗಳು ವಿಶ್ವವಿದ್ಯಾಲಯದ ಅಧಿಕಾರಿಗಳು ಹಾಗೂ ಡಿಸಿಬಿಎಮ್ ಕೋರ್ಸಿನ 168 ಅಭ್ಯರ್ಥಿಗಳು ಉಪಸ್ಥಿತರಿದ್ದರು.



## ಪ್ರೋ. ಶ್ರೀ ಶ್ರೀನಿವಾಸ ಬಳ್ಳಿ ಇವರಿಗೆ ಸನ್ಮಾನ

ಶ್ರೀ ಶ್ರೀನಿವಾಸ ಬಳ್ಳಿ ಕುಲಪತಿಗಳು ನೃಪತುಂಗ ವಿಶ್ವದ್ಯಾಲಯ ಬೆಂಗಳೂರು ಇವರಿಗೆ ಸಂಯುಕ್ತ ಸಹಕಾರಿಯ ವತಿಯಿಂದ ಶ್ರೀ ಶರಣಗೌಡ ಜಿ. ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಸಂಯುಕ್ತ ಸಹಕಾರಿಯ ಹಿರಿಯ ಅಧಿಕಾರಿಗಳು ಶಾಲು ಹೊದಿಸಿ ಹಾರ ಹಾಕಿ ಸನ್ಮಾನಿಸಲಾಯಿತು.

## ಡಿ.ಸಿ.ಬಿ.ಎಮ್. ಆನ್‌ಲೈನ್ ಕ್ಲಾಸ್‌ಗಳು ಪ್ರಾರಂಭ

ದಿನಾಂಕ 18–5–2024 ರಂದು 2ನೇ ತಂಡದ ಉದ್ಘಾಟನೆ ನಂತರ ಶ್ರೀ ಶರಣಗೌಡ ಜಿ. ಪಾಟೀಲ್, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಹಕಾರ ಪರಿಸರದ ವಿಷಯವಾಗಿ ಪ್ರಾರಂಭಿಕ ಉಪನ್ಯಾಸ ನೀಡಿದರು. ನಂತರ ದಿನಾಂಕ 19–5–2024 ರಂದು ಮಧ್ಯಾಹ್ನ 3–00 ರಿಂದ 4–00 ರವರೆಗೆ ಶ್ರೀ ಶರಣಗೌಡ ಜಿ. ಪಾಟೀಲ ರವರು ಸಹಕಾರ ಪತ್ತು ಹಾಗೂ ಸಹಕಾರ ಕಾಯ್ದೆಗಳ ವಿಷಯವಾಗಿ ಮತ್ತು ಶ್ರೀ ಎಸ್.ಆರ್. ಪ್ರಕಾಶರವರು ಡಿಜಿಟಲ್ ಬ್ಯಾಂಕಿಂಗ್ ಬಗ್ಗೆ ಉಪನ್ಯಾಸ ನೀಡಿದರು.

ಪ್ರತಿ ಶನಿವಾರ ಹಾಗೂ ಪ್ರತಿ ಭಾನುವಾರ ಮಧ್ಯಾಹ್ನ 3–00 ರಿಂದ 4–00 ಹಾಗೂ 4–00 ರಿಂದ 5–00 ಆನ್‌ಲೈನ್‌ನಲ್ಲಿ ತರಗತಿಗಳು ನಡೆಯುತ್ತವೆ. ನೋಂದಣಿಯಾಗಿರುವ ಎಲ್ಲ 294 ಅಭ್ಯರ್ಥಿಗಳು ಕಡ್ಡಾಯವಾಗಿ ತರಗತಿಗಳಿಗೆ ಹಾಜರಾಗುವುದು.

## 17ನೇ ಲೋಕಸಭಾ ಚುನಾವಣೆ - ಮುಖ್ಯ ಚುನಾವಣಾ ಆಯುಕ್ತ ಶ್ರೀ ರಾಜೀವ ಕುಮಾರ್ ರವರ ಹೇಳಿಕೆ.



1. ವಿಶ್ವದಲ್ಲೇ ಅತ್ಯಂತ ಹೆಚ್ಚು ಮತದಾರ ಸಂಖ್ಯೆ ಹೊಂದಿದ ರಾಷ್ಟ್ರ ಭಾರತ.
2. ಶ್ರೀ ರಾಜೀವ ಕುಮಾರ, ಮುಖ್ಯ ಚುನಾವಣಾಧಿಕಾರಿಯವರ ಪ್ರಕಾರ ಈ ಚುನಾವಣೆ ನಡೆಸುವುದು ದೊಡ್ಡ ಸವಾಲು.
3. ಈ ಚುನಾವಣೆಯನ್ನು ನಿರ್ವಹಿಸಲು 2 ವರ್ಷದಿಂದ ಸಿದ್ಧತೆ ನಡೆಸಲಾಗಿತ್ತು.
4. ಯಾವುದೇ ಹಿಂಸಾಚಾರಕ್ಕೆ ಅವಕಾಶವಾಗದ ಹಾಗೇ ಎಲ್ಲಾ ಕಡೆಗಳಲ್ಲೂ ಶಾಂತಿಯುತ ಹಾಗೂ ಉತ್ಸಾಹಭರಿತ ಮತದಾನ.
5. ಈ ಚುನಾವಣೆ 7 ಹಂತದ ಚುನಾವಣೆ ಇದಾಗಿತ್ತು.
6. ಸ್ಥಳೀಯ ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರವನ್ನು ನೀಡಲಾಗಿತ್ತು.
7. ಎಲ್ಲರೂ ಸೇರಿ ಟೀಮ್ ವರ್ಕ್‌ನಲ್ಲಿ ಈ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಲು ಅವಕಾಶವಾಯಿತು.
8. 98.04 ಕೋಟಿ ಮತದಾರರ ಪೈಕಿ 64.2 ಕೋಟಿ ಜನರಿಂದ ಮತದಾನ.
9. ಪ್ರಜಾಪ್ರಭುತ್ವದ ದೊಡ್ಡ ಹಬ್ಬ.

# ಸೌಹಾರ್ದ ಸಹಕಾರಿಗಳ ನಿರ್ದೇಶಕರಿಗಾಗಿ ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ



ಉದ್ಘಾಟನೆ



ಕ್ಯಾಪ್ಟನ್ ಡಾ. ರಾಜೇಂದ್ರ ಕೆ. ಭಾ.ಆ.ಸೇ, ಮಾನ್ಯ ಸಹಕಾರ ಸಂಘಗಳ ನಿಬಂಧಕರು ಇವರಿಗೆ ಸನ್ಮಾನ

**ಬೆಂಗಳೂರು** : ದಿನಾಂಕ 28.05.2024 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವತಿಯಿಂದ ರಾಜ್ಯದ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ ಎರಡು ದಿನಗಳ ಆಡಳಿತ ಪರಿಣಿತಿ ಮತ್ತು ವ್ಯವಹಾರ ಅಭಿವೃದ್ಧಿ ತರಬೇತಿಯನ್ನು ಸೌಹಾರ್ದ ಸಹಕಾರಿ ಸೌಧ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ ಇಲ್ಲಿ ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮದ ಉದ್ಘಾಟನೆಯನ್ನು ಕ್ಯಾಪ್ಟನ್ ಡಾ. ರಾಜೇಂದ್ರ ಕೆ. ಭಾ.ಆ.ಸೇ, ಮಾನ್ಯ ಸಹಕಾರ ಸಂಘಗಳ ನಿಬಂಧಕರು, ಸಹಕಾರ ಇಲಾಖೆ ಇವರು ನೆರವೇರಿಸಿದರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ವಹಿಸಿಕೊಂಡಿದ್ದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀಮತಿ ಗಗನ ಕೆ. ಮಾನ್ಯ ಉಪನಿಬಂಧಕರು ಹಾಗೂ ಪೀಠಾಧಿಕಾರಿಗಳು ದಾವಾ ಪಂಚಾಯಿತಿ ನ್ಯಾಯಾಲಯ (ನಿ.441) ಬೆಂಗಳೂರು, ಹಾಗೂ ಶ್ರೀ ಶಶಿಧರ ಮಾನ್ಯ ಸಹಕಾರ ಸಂಘಗಳ ಉಪ ನಿಬಂಧಕರು ಬೆಂಗಳೂರು, ಇವರು ಭಾಗವಹಿಸಿದ್ದರು.

ಕಾರ್ಯಕ್ರಮದ ಪ್ರಸ್ತಾವಿಕ ನುಡಿಗಳನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ನಡೆಸಿಕೊಟ್ಟರು.

ಈ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ವೈ ಟಿ ಪಾಟೀಲ ಹಾಗೂ ಎಲ್ ಎಸ್ ಆನಂದ್ ಇವರು ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ಪ್ರಾರ್ಥನೆಯನ್ನು ಸಂಯುಕ್ತ ಸಹಕಾರಿಯ ಸಿಬ್ಬಂದಿಯಾದ ಶ್ರೀಮತಿ ವಿಜಯಶ್ರೀ ಇವರು ನೆರವೇರಿಸಿದರು.

ಇದೇ ಸಂದರ್ಭದಲ್ಲಿ ಕ್ಯಾಪ್ಟನ್ ಡಾ. ರಾಜೇಂದ್ರ ಕೆ.ಭಾ.ಆ.ಸೇ, ಮಾನ್ಯ ಸಹಕಾರ ಸಂಘಗಳ ನಿಬಂಧಕರು, ಸಹಕಾರ ಇಲಾಖೆ ಇವರಿಗೆ ಸಂಯುಕ್ತ ಸಹಕಾರಿಯ ವತಿಯಿಂದ ಸನ್ಮಾನಿಸಲಾಯಿತು.

## ಸಮಾರೋಪ ಕಾರ್ಯಕ್ರಮ



ಸಂವಾದ ಕಾರ್ಯಕ್ರಮ



ಭಾಗವಹಿಸಿದ ಸಹಕಾರಿಗಳು

ರಾಜ್ಯದ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ ಆಯೋಜಿಸಿದ್ದ, ಆಡಳಿತ ಪರಿಣಿತಿ ಮತ್ತು ವ್ಯವಹಾರ ಅಭಿವೃದ್ಧಿ ತರಬೇತಿ ಕಾರ್ಯಕ್ರಮದ ಸಮಾರೋಪ ಕಾರ್ಯಕ್ರಮದೊಂದಿಗೆ 29.05.2024ರಂದು ಮುಕ್ತಾಯವಾಯಿತು.

### ಸೌಹಾರ್ದ ಸಹಕಾರಿಗಳು ಸಂಘಟಿತರಾಗಿ ಪ್ರಗತಿ ಸಾಧಿಸಬೇಕು – ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

ಸಮಾರೋಪ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸಮಾರೋಪ ಭಾಷಣ ಮಾಡಿದ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು

ಮಾತನಾಡಿ ಸೌಹಾರ್ದ ಸಹಕಾರಿ ಕ್ಷೇತ್ರ ರಾಜ್ಯದಾದ್ಯಂತ ತನ್ನ ಹೆಸರು ಗಳಿಸಿದೆ, ಐಟಿ, ಜಿಎಸ್‌ಟಿ, ಸಂಘದ ಹೆಸರು ಮುಂತಾದ ಅನೇಕ ವಿಷಯಗಳಲ್ಲಿ ನಾವು ಹೋರಾಟ ಮಾಡುತ್ತಲೆ ಬಂದಿದ್ದೇವೆ ಹಾಗೂ ಯಶಸ್ಸು ಗಳಿಸುತ್ತಾ ಬಂದಿದ್ದೇವೆ. ಕೆಲವೇ ಕೆಲವು ಸೌಹಾರ್ದ ಸಹಕಾರಿಗಳು ಮಾಡಿರುವ ಮೋಸ, ವಂಚನೆ ಪ್ರಕರಣಗಳಿಂದ ನಮ್ಮ ಇಡೀ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ತೊಂದರೆಗಳು ಬರುತ್ತಿವೆ. ನಾವು ಸಂಘಟಿತರಾಗಿ ಹೋರಾಟ ಮಾಡಿ ತೊಂದರೆಗಳನ್ನು ನಿವಾರಿಸಿಕೊಳ್ಳಬಹುದಾಗಿದೆ ಎಂದು ತಿಳಿಸಿದರು.

**ಸೌಹಾರ್ದ ಸಹಕಾರಿಗಳ ಗುಣಮಟ್ಟವನ್ನು ಹೆಚ್ಚಿಸಲು ತರಬೇತಿ ಪ್ರಯೋಜನಕಾರಿ – ಬಿ.ಎಸ್.ಗುಂಡೂರಾವ್**

ಸಮಾರೋಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಎಸ್.ಗುಂಡೂರಾವ್‌ರವರು, ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳು ಅತ್ಯಂತ ಉನ್ನತ ಮಟ್ಟದಾಗಿ ನಡೆಯುತ್ತಿರುವುದು ಅದರಲ್ಲಿಯೂ ಹೆಚ್ಚಿನ ಸಂಖ್ಯೆಯಲ್ಲಿ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳು ಭಾಗವಹಿಸಿ ಪ್ರಯೋಜನ ಪಡೆಯುತ್ತೀರುವುದು ಸಂತೋಷದ ವಿಷಯ. ಆದರೇ ಇಲ್ಲಿ ತರಬೇತಿ ಪಡೆದ ವಿವರಗಳು ಮತ್ತು ವಿಷಯಗಳನ್ನು ಪ್ರಸ್ತುತ ಪಡಿಸಿದ ಸಹಕಾರ ತಜ್ಞರು ತಿಳಿಸಿದ ಹಾಗೆ ನಾವುಗಳೆಲ್ಲ ಸೌಹಾರ್ದ ಸಹಕಾರಿ ಸಂಸ್ಥೆಗಳಲ್ಲಿ ಗುಣಮಟ್ಟವನ್ನು ಹೆಚ್ಚಿಸಲು ಪ್ರಯತ್ನ ಅವಶ್ಯ. ಈ ನಿಟ್ಟಿನಲ್ಲಿ ಇಲ್ಲಿ ತಿಳಿಸಿರುವ ವಿಷಯಗಳನ್ನು ನಮ್ಮ ಸೌಹಾರ್ದ ಸಹಕಾರಿಗಳಲ್ಲಿ ಅನುಷ್ಠಾನಗೊಳಿಸಿ ನಿಮ್ಮ ಸಂಸ್ಥೆಯ ಗುಣಮಟ್ಟವನ್ನು ಪ್ರಗತಿಯನ್ನು ಎತ್ತರಕ್ಕೆ ಬೆಳೆಸಿ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಸಿ ಪಿ ವಿಜಯ್ ರವರು ಮಾತನಾಡಿದರು.

ಪ್ರಾರಂಭದಲ್ಲಿ ಶ್ರೀಮತಿ ಹರ್ಷಪ್ರಭಾ ಇವರು ಪ್ರಾರ್ಥನೆಯನ್ನು ನಡೆಸಿಕೊಟ್ಟರು. ಹಿರಿಯ ಅಧಿಕಾರಿಯಾದ ಶ್ರೀ ಶಿವಕುಮಾರ ಬಿರಾದಾರರವರು ಅತಿಥಿ ಗಣ್ಯರ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಗಳನ್ನು ನಡೆಸಿಕೊಟ್ಟರು. ನಂತರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು. ಈ ಸಂದರ್ಭದಲ್ಲಿ ಭಾಗವಹಿಸಿದ ಎಲ್ಲ ನಿರ್ದೇಶಕರುಗಳಿಗೆ ಸಂಯುಕ್ತ ಸಹಕಾರಿಯ ವತಿಯಿಂದ ಪ್ರಮಾಣ ಪತ್ರವನ್ನು ಹಾಗೂ ಕಾಣಿಕೆಯನ್ನು ನೀಡಲಾಯಿತು.

**ಯಶಸ್ವಿ ಸೌಹಾರ್ದ ಸಹಕಾರಿಗಳ ಜೋತೆಗೆ ಸಂವಾದ ಕಾರ್ಯಕ್ರಮ :**

ಈ ಎರಡು ದಿನಗಳ ಆಡಳಿತ ಪರಿಣಿತಿ ಮತ್ತು ವ್ಯವಹಾರ ಅಭಿವೃದ್ಧಿ ತರಬೇತಿ ಅಂಗವಾಗಿ ರಾಜ್ಯದ ನಾಲ್ಕು ವಿಭಾಗಗಳಿಂದ ಐದು ಸೌಹಾರ್ದ ಸಹಕಾರಿಗಳನ್ನು ತಮ್ಮ ಸಹಕಾರಿಯ ನಡೆದು ಬಂದ ದಾರಿ ಕಂಡುಕೊಂಡ ಯಶಸ್ಸು, ಇವುಗಳ ಬಗ್ಗೆ ಪ್ರತಿನಿಧಿಗಳಿಗೆ ತಿಳಿಸಿಕೊಟ್ಟರು. ನಂತರ ಅವರ ಪ್ರಶ್ನೆಗಳಿಗೆ ಸಮರ್ಪಕ ಉತ್ತರಗಳನ್ನು ನೀಡಿ ತಮ್ಮ ಸಾಧನೆಯನ್ನು ಹಂಚಿಕೊಳ್ಳುವ ಹಾಗೂ ಪ್ರಗತಿಯತ್ತ ಪ್ರೇರೇಪಿಸುವ ಕಾರ್ಯಕ್ರಮ ಇದಾಗಿತ್ತು.

ಈ ಕಾರ್ಯಕ್ರಮದಲ್ಲಿ ಬೆಂಗಳೂರು ವಿಭಾಗದಿಂದ ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ–ಆಪರೇಟಿವ್ ಸೂಸೈಟಿ ಲಿ., ಇದರ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ತಮ್ಮ ಸಂಸ್ಥೆಯ ವಿವರಗಳನ್ನು ತಿಳಿಸಿದರು. ಮೈಸೂರು ವಿಭಾಗದಿಂದ ಪುತ್ತೂರಿನ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ದ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ವಸಂತ ನಾಯಕರವರು ಭಾಗವಹಿಸಿ ತಮ್ಮ ಸಂಸ್ಥೆಯ ವಿವರಗಳನ್ನು ನೀಡಿದರು. ಕಲಬುರಗಿ ವಿಭಾಗದಿಂದ ಶ್ರೀ ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ವತಿಯಿಂದ ಶ್ರೀ ವೀರೇಶ್ ಹೀರೆಮಠ ರವರು ಮಾತನಾಡಿ ತಮ್ಮ ಸಹಕಾರಿ ಸಂಸ್ಥೆಯ ಕುರಿತು ವಿವರ ನೀಡಿದರು. ಬೆಂಗಳೂರು ವಿಭಾಗದಿಂದ ಸ್ವಾತಿ ಜ್ಯೋತಿ ಮಹಿಳಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ದ ಅಧ್ಯಕ್ಷರಾದ ಶ್ರೀಮತಿ ಮುನಿರತ್ನ ರವರು ತಮ್ಮ ಸಂಸ್ಥೆಯ ಚಟುವಟಿಕೆ ಮತ್ತು ಸಾಧನೆಗಳನ್ನು ತಿಳಿಸಿದರು.

ಈ ಸಂವಾದ ಕಾರ್ಯಕ್ರಮದಲ್ಲಿ ಮತ್ತು ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಪ್ರತಿನಿಧಿಗಳು ತಮಗೆ ಬೇಕಾದ ವಿವರಣೆಯನ್ನು ಪಡೆದರು.

ಈ ಕಾರ್ಯಕ್ರಮದಲ್ಲಿ 15 ಜಿಲ್ಲೆಗಳಿಂದ 65 ಸೌಹಾರ್ದ ಸಹಕಾರಿಗಳಿಂದ 122 ಪ್ರತಿನಿಧಿಗಳು ಭಾಗವಹಿಸಿ ಪ್ರಯೋಜನ ಪಡೆದರು.

## ದಾವಾ ಪಂಚಾಯ್ತಿ ನ್ಯಾಯಾಲಯ (ನಿ.441) ಬೆಳಗಾವಿ ಪೀಠದ ಬ್ಯಾಂಕ್ ಖಾತೆ

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಬೆಳಗಾವಿ ಪ್ರಾಂತದಲ್ಲಿನ ಸೌಹಾರ್ದ ಸಹಕಾರಿಗಳು ದಾವಾ ಪಂಚಾಯ್ತಿ ನ್ಯಾಯಾಲಯದಲ್ಲಿ ಸಾಲಗಳ ವಸೂಲಾತಿಗಾಗಿ ಪ್ರಕರಣಗಳನ್ನು ದಾಖಲಿಸಲು ಮಾನ್ಯ ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ ರವರ ಆದೇಶದಲ್ಲಿರುವಂತೆ ನಿಗದಿಪಡಿಸಿದ ದಾವಾ ಪ್ರಕರಣ ಶುಲ್ಕವನ್ನು ನ್ಯಾಯಾಲಯಕ್ಕೆ ಭರಿಸಬೇಕಾಗುತ್ತದೆ. ಕಾರಣ ದಾವಾ ಪಂಚಾಯ್ತಿ ನ್ಯಾಯಾಲಯಕ್ಕೆ ಒಂದು **ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ತೆರೆಯಲಾಗಿದ್ದು** ತಮ್ಮ ಮಾಹಿತಿಗಾಗಿ ನೀಡಿದೆ ಹಾಗೂ ಸದರಿ ಬ್ಯಾಂಕ್ ಖಾತೆಯ ವಿವರಗಳನ್ನು ಈ ಕೆಳಗೆ ನಮೂದಿಸಿದೆ.

**Bank Account Details :**

| | |
|---|---|
| Account Name | : DRCS 441 BELAGAVI |
| Bank Name | : Canara Bank |
| Branch | : Anjaneya Nagar, Belagavi |
| Account Number | : 110179105933 |
| IFSC Code | : CNRB0008513 |

# ಆಡಳಿತ ಪರಿಣಿತಿ ತರಬೇತಿ



**ಚಾಮರಾಜನಗರ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಪ್ರಾಂತ ಇದರ ವತಿಯಿಂದ ಚಾಮರಾಜನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳಿಗೆ ಆಡಳಿತ ಪರಿಣಿತಿ ತರಬೇತಿ ಕಾರ್ಯಕ್ರಮವನ್ನು ದಿನಾಂಕ : 29.05.2024 ರಂದು ಮಹಾಮನೆ, ಬಿ.ರಾಚಯ್ಯ ಜೋಡಿರಸ್ತೆ, ರೋಟರಿ ಶಾಲೆ ಹಿಂಭಾಗ, ಚಾಮರಾಜನಗರ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಸದರಿ ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಜಿ. ನಂಜನಗೌಡ, ಮಾನ್ಯ ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ನೆರವೇ–ರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಪ್ರಸನ್ನ ಕುಮಾರ್ ಎ. ಆರ್ ಉಪಾಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು, ಶ್ರೀಮತಿ ಭಾರತಿ ಜಿ ಭಟ್ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಹಾಗೂ ಶ್ರೀ ಬಾಲಸುಬ್ರಹ್ಮಣ್ಯ ಎಸ್ ಮುಖ್ಯ ಪ್ರವರ್ತಕರು, ಉದ್ದೇಶಿತ ಚಾಮರಾಜನಗರ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ., ಇವರು ವಹಿಸಿಕೊಂಡಿದ್ದರು. ಕಾರ್ಯಕ್ರಮದ ಸ್ವಾಗತ & ಪ್ರಸ್ತಾವಿಕ ನುಡಿಯನ್ನು ಶ್ರೀ ಗುರುಪ್ರಸಾದ್ ಬಂಗೇರ, ಪ್ರಾಂತೀಯ ಅಧಿಕಾರಿ ಮತ್ತು ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಶ್ರೀ ಬಲರಾಮ್ ಎನ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಚಾಮರಾಜನಗರ ಜಿಲ್ಲೆ ಇವರು ನೆರವೇರಿಸಿದರು. ತರಬೇತಿ ಕಾರ್ಯಕ್ರಮದ ಮೊದಲನೆಯ ಅವಧಿಯಲ್ಲಿ ನಿವೃತ್ತ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರಾದ ಶ್ರೀ ರಾಮಪ್ಪ ಜಿ ಕೆ ರವರು ಸಹಕಾರಿ ಸಂಸ್ಥೆಗಳಲ್ಲಿ ಆರ್ಥಿಕ ಶಿಸ್ತಿನ ನಿರ್ವಹಣೆಯಲ್ಲಿ ನಿರ್ದೇಶಕರ ಹಕ್ಕುಗಳು ಮತ್ತು ಜವಬ್ದಾ–ರಿಗಳು ಎಂಬ ವಿಷಯದ ಕುರಿತು ಮತ್ತು ಎರಡನೆಯ ಅವಧಿಯಲ್ಲಿ ಕಾರ್ಪೊರೇಟ್ ಟ್ರೇನರ್‌ರಾದ ಶ್ರೀ ಶ್ರೀಶಾ ರವರು ಸಹಕಾರಿ ಸಂಸ್ಥೆಯನ್ನು ಉನ್ನತಿಕರಿಸುವಲ್ಲಿ ವ್ಯವಹಾರಾಭಿವೃದ್ಧಿ ಯೋಜನೆ ವಿಷಯದ ಕುರಿತು ಉಪನ್ಯಾಸ ನೀಡಿದರು. ಸದರಿ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 21 ಸೌಹಾರ್ದ ಸಹಕಾರಿಗಳಿಂದ 81 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

---



**ಮೈಸೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಪ್ರಾಂತ ಇದರ ವತಿಯಿಂದ ಮೈಸೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳಿಗೆ ಆಡಳಿತ ಪರಿಣಿತಿ ತರಬೇತಿ ಕಾರ್ಯಕ್ರಮವನ್ನು ದಿನಾಂಕ: 30.05.2024 ರಂದು ಹೋಟೇಲ್ ಗ್ರೀನ್ ಹೆರಿಟೇಜ್ ಸಭಾಂಗಣ, ದಿವಾನ್ಸ್ ರಸ್ತೆ, ಲೋಕಾಯುಕ್ತ ಕಛೇರಿ ಪಕ್ಕ, ಮೈಸೂರು ಇಲ್ಲಿ ಆಯೋಜಿಸಲಾಗಿತ್ತು.

ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ವೇದಿಕೆಯ ಮೇಲೆ ಉಪಸ್ಥಿತರಿದ್ದ ಗಣ್ಯರೊಂದಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ಉದ್ಘಾಟಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ ರವರು ವಹಿಸಿದ್ದರು.

ಸದರಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾನ್ಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ ಭಟ್ ರವರು, ಮಾನ್ಯ ನಿಕಟಪೂರ್ವ ನಿರ್ದೇಶಕರಾದ ಶ್ರೀ ಹೆಚ್.ವಿ. ರಾಜೀವ್‌ರವರು, ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ಎಸ್. ಆರ್. ನಾರಾಯಣ ರಾವ್ ರವರು, ಹಾಗೂ ನಿವೃತ್ತ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರಾದ ಶ್ರೀ ರಾಮಪ್ಪ ಜಿ ಕೆ ರವರು ಭಾಗವಹಿಸಿದ್ದರು.

ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ರವರು, ಕಾರ್ಯಕ್ರಮದ ಸ್ವಾಗತವನ್ನು ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು, ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾ–ರಿಯಾದ ಶ್ರೀ ಸುರೇಶ ಆರ್ ಎಸ್ ರವರು ಹಾಗೂ ವಂದನಾರ್ಪಣೆಯನ್ನು ಶ್ರೀ ಎಸ್.ಸಿ. ಭಗೀರಥ, ಮುಖ್ಯಕಾರ್ಯನಿರ್ವಾಹಕರು, ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಇವರು ನೆರವೇರಿಸಿದರು.

ತರಬೇತಿ ಕಾರ್ಯಕ್ರಮದ ಮೊದಲನೆಯ ಅವಧಿಯಲ್ಲಿ ನಿವೃತ್ತ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರಾದ ಶ್ರೀ ರಾಮಪ್ಪ ಜಿ ಕೆ ರವರು ಸಹಕಾರಿ ಸಂಸ್ಥೆಗಳಲ್ಲಿ ಆರ್ಥಿಕ ಶಿಸ್ತಿನ ನಿರ್ವಹಣೆಯಲ್ಲಿ ನಿರ್ದೇಶಕರ ಹಕ್ಕುಗಳು ಮತ್ತು ಜವಬ್ದಾರಿಗಳು ಎಂಬ ವಿಷಯದ ಕುರಿತು ಮತ್ತು ಎರಡನೆಯ ಅವಧಿಯಲ್ಲಿ ಕಾರ್ಪೊರೇಟ್ ಟ್ರೇನರ್‌ರಾದ ಶ್ರೀ ಶ್ರೀಶಾ ರವರು ಸಹಕಾರಿ ಸಂಸ್ಥೆಯನ್ನು ಉನ್ನತಿಕ–ರಿಸುವಲ್ಲಿ ವ್ಯವಹಾರಾಭಿವೃದ್ಧಿ ಯೋಜನೆ ವಿಷಯದ ಕುರಿತು ಉಪನ್ಯಾಸ ನೀಡಿದರು. ಸದರಿ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 48 ಸೌಹಾರ್ದ ಸಹಕಾರಿಗಳಿಂದ 125 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

# ವಿಷಯಾಧಾರಿತ ತರಬೇತಿ ಕಾರ್ಯಕ್ರಮ



**ಬಾಗಲಕೊಟೆ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತೀಯ ಕಛೇರಿ ವತಿಯಿಂದ ದಿನಾಂಕ 21 ಮೇ 2024 ರಂದು ಬಾಗಲಕೋಟೆ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗಾಗಿ ವಿಷಯಾಧಾರಿತ ತರಬೇತಿಯನ್ನು ಸಾಯಿ ಮಂದಿರ, ವಿದ್ಯಾಗಿರಿ, ಬಾಗಲಕೋಟೆಯಲ್ಲಿ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ಮಹಾದೇವ ಕುಂಬಾರ ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಎನ್. ಪಾಟೀಲ ಇವರು ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಸುನೀಲ ಪತ್ತಾರ, ಸಹಾಯಕ ನಿರ್ದೇಶಕರು, ಲೆಕ್ಕಪರಿಶೋಧನಾ ಇಲಾಖೆ, ಜಮಖಂಡಿ ಹಾಗೂ ಶ್ರೀ ರಾಚಯ್ಯ ಹಿರೇಮಠ, ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದ ಸ್ವಾಗತ ಹಾಗೂ ಪ್ರಸ್ತಾವಿಕ ನುಡಿಗಳನ್ನು ಶ್ರೀ ವೆಂಕಟೇಶ ರಾಠೋಡ್ ನೆರವೇರಿಸಿದರು. ಕಾರ್ಯಕ್ರಮದ ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಶ್ರೀಮತಿ ರೇಷ್ಮಾ ಪಾಟೀಲ, ಸಹಾಯಕಿ ಇವರು ನೆರವೇರಿಸಿದರು.

ಅಂತಿಮ ಲೆಕ್ಕಪತ್ರಗಳ ಸಿದ್ಧಪಡಿಸುವಿಕೆ ವಿಷಯದ ಕುರಿತು ಶ್ರೀ ಸುನೀಲ ಪತ್ತಾರ ಇವರು ಉಪನ್ಯಾಸ ನೀಡಿದರು ಮತ್ತು ದಾವಾ ದಾಖಲಾತಿ ಹಾಗೂ ಸಾಲ ವಸೂಲಾತಿ ಕುರಿತು ಶ್ರೀ ರಾಚಯ್ಯ ಹಿರೇಮಠ ಇವರು ಉಪನ್ಯಾಸ ನೀಡಿದರು. ಒಟ್ಟು 230 ಸೌಹಾರ್ದ ಸಹಕಾರಿಗಳಿಂದ 283 ಜನ ಭಾಗವಹಿಸಿದ್ದರು



**ಉತ್ತರಕನ್ನಡ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತೀಯ ಕಛೇರಿ ವತಿಯಿಂದ ದಿನಾಂಕ 22 ಮೇ 2024 ರಂದು ಉತ್ತರಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗಾಗಿ ವಿಷಯಾಧಾರಿತ ತರಬೇತಿಯನ್ನು, ಮಹಾಲಕ್ಷ್ಮಿ ಕಂಫರ್ಟ್, ಕುಮಟಾದಲ್ಲಿ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮೋಹನದಾಸ ಜೆ ನಾಯಕ ರವರು ವಹಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು, ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಗಂಗಾರಾಮ ಸಗ್ಗು ಕೊಳಾಪ್ಪೆ, ಅಧಿಕಾರಿಗಳು, ಕ.ರಾ.ಸೌ.ಸಂ.ಸ ನಿ., ಬೆಂಗಳೂರು ಹಾಗೂ ಶ್ರೀ ವಿನಾಯಕ ಶ್ರೀಧರ ಹೆಗಡೆ, ಸನ್ನದು ಲೆಕ್ಕಪರಿಶೋಧಕರು, ಕುಮಟಾ ಇವರು ಭಾಗವಹಿಸಿದ್ದರು,

ಕಾರ್ಯಕ್ರಮಕ್ಕೆ ಶ್ರೀ ಗಣಪತಿ ನಾಯ್ಕ, ಸ್ಕೊಡ್ವೆಸ್ ಮಹಿಳಾ ಸೌಹಾರ್ದ ಸಹಕಾರಿ ಸಂಘ ನಿ., ಶಿರಸಿ ಇವರು ಸ್ವಾಗತ ಕೋರಿದರು, ಶ್ರೀ ಬಸವರಾಜ ಹೊಂಗಲ, ಪ್ರಾಂತೀಯ ವ್ಯವಸ್ಥಾಪಕರು ಇವರು ಪ್ರಾಸ್ತವಿಕ ನುಡಿಗಳನ್ನು ಆಡಿದರು. ಶ್ರೀ ಸಂತೋಷ್ ಕುಮಾರ್ ಎಂ. ಜೆ, ಸೌಹಾರ್ದ ಅಭಿವೃದ್ಧಿ ಅಧಿಕಾರಿ ಇವರು ನಿರೂಪಿಸಿ ವಂದಿಸಿದರು.

ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ಎಂಬ ವಿಷಯವಾಗಿ ಶ್ರೀ ಗಂಗಾರಾಮ ಸಗ್ಗು ಕೊಳಾಪ್ಪೆ, ಅಧಿಕಾರಿಗಳು ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಉಪನ್ಯಾಸ ನೀಡಿದರು.

ಸಹಕಾರಿಯ ಲೆಕ್ಕಪತ್ರಗಳ ಅಂತಿಮಗೊಳಿಸುವಿಕೆ ಮತ್ತು ಲೆಕ್ಕಪರಿಶೋಧಕರಿಗೆ ನೀಡಬೇಕಾದ ದಾಖಲೆಗಳು ಎಂಬ ವಿಷಯವನ್ನು ಶ್ರೀ ವಿನಾಯಕ ಶ್ರೀಧರ ಹೆಗಡೆ, ಸನ್ನದು ಲೆಕ್ಕಪರಿಶೋಧಕರು ಉಪನ್ಯಾಸ ನೀಡಿದರು. ಜಿಲ್ಲೆಯ ಸೌಹಾರ್ದ ಸಹಕಾರಿಗಳಿಂದ 120 ಸಿಬ್ಬಂದಿಗಳು ಸಭೆಯಲ್ಲಿ ಹಾಜರಿದ್ದರು.



**ವಿಜಯಪುರ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವತಿಯಿಂದ ದಿನಾಂಕ 24.05.2024 ರಂದು ವಿಜಯಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ, ಸಂಗನಬಸವ ಮಂಗಲ ಕಾರ್ಯಾಲಯದಲ್ಲಿ ವಿಷಯಾಧಾರಿತ ತರಬೇತಿಯನ್ನು ಆಯೋಜಿಸಲಾಗಿರುತ್ತದೆ.

ಸಭೆಯ ಉದ್ಘಾಟನೆಯನ್ನು ಶ್ರೀ ಚೇತನ ಭಾವಿಕಟ್ಟಿ, ಮಾನ್ಯ ಸಹಾಯಕ ನಿಬಂಧಕರು, ಸಹಕಾರ ಸಂಘಗಳ ಇಲಾಖೆ ವಿಜಯಪುರ ಇವರು ನೆರವೇರಿಸಿದರು ಮತ್ತು ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ

ನಿರ್ದೇಶಕರಾದ ಶ್ರೀ ರಾಮನಗೌಡ ಬ. ಪಾಟೀಲ ಇವರು ವಹಿಸಿದ್ದರು. ಅತಿಥಿಗಳಾಗಿ ಹಿರಿಯ ಸಹಕಾರಿಗಳಾದ ಶ್ರೀ ಅಮರನಾಥ ಬಿರಾದಾರ, ಸಂಪನ್ಮೂಲ ವ್ಯಕ್ತಿಗಳಾಗಿ ಮಾನ್ಯ ಸಹಾಯಕ ನಿರ್ದೇಶಕರಾದ ಶ್ರೀ ಸುನೀಲ ಪತ್ತಾರ ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ರಾಚಯ್ಯಾ ಹಿರೇಮಠ ಇವರು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಗಣ್ಯಮಾನ್ಯರ ಸ್ವಾಗತ ಮತ್ತು ಪ್ರಾಸ್ತಾವಿಕವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಬಸವರಾಜ ಎಸ್. ಇವರು ನಡೆಸಿಕೊಟ್ಟರು. ಕಾರ್ಯಕ್ರಮದ ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಶ್ರೀಮತಿ ಪ್ರತಿಭಾ ಮಠ ಇವರು ನಡೆಸಿಕೊಟ್ಟರು.

ಲೆಕ್ಕಪತ್ರಗಳನ್ನು ಅಂತಿಮಗೊಳಿಸುವಿಕೆ ಈ ವಿಷಯದ ಕುರಿತು ಶ್ರೀ ಸುನೀಲ ಪತ್ತಾರ ಇವರು ಉಪನ್ಯಾಸ ನೀಡಿದರು.

ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ವಿಷಯದ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ರಾಚಯ್ಯಾ ಹಿರೇಮಠ ಇವರು ಉಪನ್ಯಾಸ ನೀಡಿದರು.

ಸಭೆಯಲ್ಲಿ 221 ಸೌಹಾರ್ದ ಸಹಕಾರಿಗಳಿಂದ 248 ಪ್ರತಿನಿಧಿಗಳು ಭಾಗವಹಿಸಿರುತ್ತಾರೆ.

---



**ಬೆಳಗಾವಿ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತೀಯ ಕಛೇರಿ ವತಿಯಿಂದ ದಿನಾಂಕ 27 ಮೇ 2024 ರಂದು ಬೆಳಗಾವಿ ಜಿಲ್ಲೆಯ ಬೆಳಗಾವಿ, ಖಾನಾಪೂರ, ಬೈಲಹೊಂಗಲ್, ಸವದತ್ತಿ, ರಾಮದುರ್ಗ, ಚನ್ನಮ್ಮನ ಕಿತ್ತೂರ ಹಾಗೂ ಯರಗಟ್ಟಿ ತಾಲ್ಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗಾಗಿ ವಿಷಯಾಧಾರಿತ ತರಬೇತಿಯನ್ನು, ಮಹಾಂತ ಭವನ, ಮಹಾಂತೇಶ ನಗರ, ಬೆಳಗಾವಿಯಲ್ಲಿ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಸುನೀಲ ಪತ್ತಾರ, ಸಹಾಯಕ ನಿರ್ದೇಶಕರು, ಲೆಕ್ಕಪರಿಶೋಧನಾ ಇಲಾಖೆ, ಜಮಖಂಡಿ ಇವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ್ ಕವಟಗೀಮಠ ಇವರು ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಸುನೀಲ ಪತ್ತಾರ, ಸಹಾಯಕ ನಿರ್ದೇಶಕರು, ಲೆಕ್ಕಪರಿಶೋಧನಾ ಇಲಾಖೆ, ಜಮಖಂಡಿ ಹಾಗೂ ಶ್ರೀ ರಾಚಯ್ಯ ಹಿರೇಮಠ, ಜಿಲ್ಲಾ ಸೌಹಾರ್ದ ಅಧಿಕಾರಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದ ನಿರೂಪಣೆ ಹಾಗೂ ಸ್ವಾಗತ ಶ್ರೀ ರಾಚಯ್ಯ ಹಿರೇಮಠ, ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ ನೆರವೇರಿಸಿದರು. ಪ್ರಾಸ್ತಾವಿಕ ನುಡಿಗಳನ್ನು ಶ್ರೀ ಬಸವರಾಜ ಹೊಂಗಲ್, ಪ್ರಾಂತೀಯ ವ್ಯವಸ್ಥಾಪಕರು ನೆರವೇರಿಸದರು. ಕಾರ್ಯಕ್ರಮದ ವಂದನಾರ್ಪಣೆಯನ್ನು ಶ್ರೀ ಶಿವಕಾಂತ ಎನ್, ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಇವರು ನೆರವೇರಿಸಿದರು.

ಅಂತಿಮ ಲೆಕ್ಕಪತ್ರಗಳ ಸಿದ್ಧಪಡಿಸುವಿಕೆ ವಿಷಯದ ಕುರಿತು ಸುನೀಲ ಪತ್ತಾರ, ಇವರು ಉಪನ್ಯಾಸ ನೀಡಿದರು ಮತ್ತು ದಾವಾ ದಾಖಲಾತಿ ಹಾಗೂ ಸಾಲ ವಸೂಲಾತಿ ಕುರಿತು ಶ್ರೀ ರಾಚಯ್ಯ ಹಿರೇಮಠ ಇವರು ಉಪನ್ಯಾಸ ನೀಡಿದರು.

ಒಟ್ಟು 172 ಸೌಹಾರ್ದ ಸಹಕಾರಿಗಳಿಂದ 189 ಜನ ಭಾಗವಹಿಸಿದ್ದರು.

---



**ಬೆಳಗಾವಿ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತೀಯ ಕಛೇರಿ ವತಿಯಿಂದ ದಿನಾಂಕ 28 ಮೇ 2024 ರಂದು ಬೆಳಗಾವಿ ಜಿಲ್ಲೆಯ ಗೋಕಾಕ ಹಾಗೂ ಮೂಡಲಗಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗಾಗಿ ವಿಷಯಾಧಾರಿತ ತರಬೇತಿಯನ್ನು ರೋಟರಿ ಕ್ಲಬ್, ಗೋಕಾಕನಲ್ಲಿ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಸತೀಶ್ ನಾಡಗೌಡ ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ್ ಕವಟಗೀಮಠ ಇವರು ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಸತೀಶ್ ನಾಡಗೌಡ ಹಾಗೂ ಶ್ರೀ ರಾಚಯ್ಯ ಹಿರೇಮಠ, ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದ ನಿರೂಪಣೆ, ಸ್ವಾಗತ ಹಾಗೂ ಪ್ರಸ್ತಾವಿಕ ನುಡಿಗಳನ್ನು ಶ್ರೀ ರಾಚಯ್ಯ ಹಿರೇಮಠ, ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ ನೆರವೇರಿಸಿದರು. ಕಾರ್ಯಕ್ರಮದ ವಂದನಾರ್ಪಣೆಯನ್ನು ಶ್ರೀ ಸುಜಯ ಬೆಳವಿ, ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಇವರು ನೆರವೇರಿಸಿದರು.

ಅಂತಿಮ ಲೆಕ್ಕಪತ್ರಗಳ ಸಿದ್ಧಪಡಿಸುವಿಕೆ ಹಾಗೂ ಜಿ.ಎಸ್.ಟಿ ವಿಷಯದ ಕುರಿತು ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಸತೀಶ್ ನಾಡಗೌಡ ಇವರು ಉಪನ್ಯಾಸ ನೀಡಿದರು ಮತ್ತು ದಾವಾ ದಾಖಲಾತಿ ಹಾಗೂ ಸಾಲ ವಸೂಲಾತಿ ವಿಷಯದ ಕುರಿತು ಶ್ರೀ ರಾಚಯ್ಯ ಹಿರೇಮಠ ಇವರು ಉಪನ್ಯಾಸ ನೀಡಿದರು. ಒಟ್ಟು 103 ಸೌಹಾರ್ದ ಸಹಕಾರಿಗಳಿಂದ 119 ಜನ ಭಾಗವಹಿಸಿದ್ದರು.



**ಬೆಳಗಾವಿ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತ ಇದರ ವತಿಯಿಂದ ಬೆಳಗಾವಿ ಜಿಲ್ಲೆಯ ಅಥಣಿ, ಕಾಗವಾಡ, ರಾಯಭಾಗ, ಚಿಕ್ಕೋಡಿ, ನಿಪ್ಪಾಣಿ ಮತ್ತು ಹುಕ್ಕೇರಿ ತಾಲ್ಲೂಕಿನ ಸಂಕೇಶ್ವರ ಸುತ್ತಲಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗಾಗಿ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ದಿನಾಂಕ: 28.05.2024 ರಂದು ಶ್ರೀ ಸಾಯಿ ಸೌಹಾರ್ದ ಸಭಾ ಭವನ, ಬಸವೇಶ್ವರ ಸರ್ಕಲ್, ಚಿಕ್ಕೋಡಿ ಇಲ್ಲಿ ಹಮ್ಮಿಕೊಳ್ಳಲಾಗಿತ್ತು.

ಸದರಿ ತರಬೇತಿ ಕಾರ್ಯಕ್ರಮವನ್ನು ಉದ್ಘಾಟನೆಯನ್ನು ಶ್ರೀ ರವೀಂದ್ರ ಪಾಟೀಲ, ಮಾನ್ಯ ಪೀಠಾಧಿಕಾರಿ, ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತ ನ್ಯಾಯಾಲಯ, ಬೆಳಗಾವಿ ಇವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಡಾ.ಮಲ್ಲಪ್ಪ ರಾವತನವರ, ಮಾನ್ಯ ಸಹಾಯಕ ನಿಬಂಧಕರು, ಚಿಕ್ಕೋಡಿ ಉಪವಿಭಾಗ, ಇವರು ವಹಿಸಿಕೊಂಡಿದ್ದರು.

ಕಾರ್ಯಕ್ರಮದ ಸ್ವಾಗತವನ್ನು ಶ್ರೀ ಶಿವಕಾಂತ ಎಸ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ ಮತ್ತು ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಶ್ರೀ ಜವಾಹರ ಮುಗ್ಗನವರ, ಸೌಹರ್ದ ಅಭಿವೃದ್ಧಿ ಅಧಿಕಾರಿ ಇವರು ನೆರವೇರಿಸಿದರು.

ಮೊದನೆಯ ಅವಧಿಯಲ್ಲಿ ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ವಿಷಯದ ಕುರಿತು ಶ್ರೀ ರವೀಂದ್ರ ಪಾಟೀಲ, ಮಾನ್ಯ ಪೀಠಾಧಿಕಾರಿಗಳು, ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತ ನ್ಯಾಯಾಲಯ ಬೆಳಗಾವಿ ಹಾಗೂ ಶ್ರೀ ಸಂತೋಷ ಬಸಣ್ಣವರ, ವ್ಯವಸ್ಥಾಪಕರು, ದಾವಾ ಪಂಚಾಯತ್ ನ್ಯಾಯಾಲಯ ಬೆಳಗಾವಿ ಇವರು ಉಪನ್ಯಾಸ ನೀಡಿದರು.

ಎರಡನೆಯ ಅವಧಿಯಲ್ಲಿ ಲೆಕ್ಕಪತ್ರಗಳ ಅಂತಿಮಗೊಳಿಸುವಿಕೆ ಮತ್ತು ಸಹಕಾರಿಯ ಲೆಕ್ಕಪರಿಶೋಧನೆ ವಿಷಯದ ಕುರಿತು ಶ್ರೀ ಮಹಾಂತೇಶ ಹೊಸಪೇಟೆ ಮಾನ್ಯ ಸನ್ನದು ಲೆಕ್ಕಪರಿಶೋಧಕರು, ಬೆಳಗಾವಿ ಇವರು ಉಪನ್ಯಾಸ ನೀಡಿದರು. ಸದರಿ ತರಬೇತಿಯಲ್ಲಿ ಒಟ್ಟು 216 ಸೌಹಾರ್ದ ಸಹಕಾರಿಗಳಿಂದ 241 ಪ್ರತಿನಿಧಿಗಳು ಭಾಗವಹಿಸಿದ್ದರು.



**ಹಾವೇರಿ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತ ಇದರ ವತಿಯಿಂದ ಹಾವೇರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ದಿನಾಂಕ: 29.05.2024 ರಂದು ಶ್ರೀ ಶಿವ ರೆಸಿಡೆನ್ಸಿ, ಹಾವೇರಿ ಇಲ್ಲಿ ಹಮ್ಮಿಕೊಳ್ಳಲಾಗಿತ್ತು.

ಸದರಿ ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಮತಿ ವಿದ್ಯಾ ವನಶೆಟ್ಟಿ, ಮಾನ್ಯ ಉಪನಿರ್ದೇಶಕರು, ಸಹಕಾರಿ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ ನೆರವೇರಿಸಿದರು.

ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಕೆ ಶಿವಲಿಂಗಪ್ಪ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಅಮೃತ್ ಬ್ಯಾಕೋಡಿ, ಮಾನ್ಯ ಸಹಾಯಕ ನಿರ್ದೇಶಕರು, ಸಹಕಾರಿ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ ಹಾವೇರಿ ಇವರು ವಹಿಸಿಕೊಂಡಿದ್ದರು.

ಕಾರ್ಯಕ್ರಮದ ಸ್ವಾಗತ, ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಶ್ರೀ ಕಲ್ಮೇಶ ಎಸ್ ಎಂ, ಸೌಹಾರ್ದ ಅಭಿವೃದ್ಧಿ ಅಧಿಕಾರಿ ನೆರವೇರಿಸಿದರು.

ಮೊದನೆಯ ಅವಧಿಯಲ್ಲಿ ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ವಿಷಯದ ಕುರಿತು ಶ್ರೀ ವಿ ಜಿ ಕುಲಕರ್ಣಿ, ಉಪನ್ಯಾಸಕರು ಇವರು ಉಪನ್ಯಾಸ ನೀಡಿದರು. ಎರಡನೆಯ ಅವಧಿಯಲ್ಲಿ ಲೆಕ್ಕಪತ್ರಗಳ ಅಂತಿಮಗೊಳಿಸುವಿಕೆ ಮತ್ತು ಸಹಕಾರಿಯ ಲೆಕ್ಕಪರಿಶೋಧನೆ ವಿಷಯದ ಕುರಿತು ಶ್ರೀ ಎಂ ಕೆ ಬಾಬಜಿ, ಮಾನ್ಯ ಹಿರಿಯ ಸನ್ನದು ಲೆಕ್ಕಪರಿಶೋಧಕರು, ಹುಬ್ಬಳ್ಳಿ ಇವರು ಉಪನ್ಯಾಸ ನೀಡಿದರು. ಸದರಿ ತರಬೇತಿಯಲ್ಲಿ ಒಟ್ಟು 92 ಸೌಹಾರ್ದ ಸಹಕಾರಿಗಳಿಂದ 104 ಪ್ರತಿನಿಧಿಗಳು ಭಾಗವಹಿಸಿದ್ದರು.




**ಕಲಬುರಗಿ :** ದಿನಾಂಕ 19.05.2024 ರಂದು ಕಲಬುರಗಿ ಜಿಲ್ಲೆಯಲ್ಲಿ ಹೊಸದಾಗಿ ನೋಂದಣಿಗೊಂಡ ಸಹುಲತ ಸೌಹಾರ್ದ ಸಹಕಾರ ಸಂಘ ನಿ., ಕಲಬುರಗಿ ಈ ಸಹಕಾರಿಯ ಉದ್ಘಾಟನೆ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿಯವರು ಮುಖ್ಯ ಅತಿಥಿಗಳಾಗಿ ಹಾಗೂ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಸಹಕಾರಿಯ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು, ಮಾನ್ಯ ಉಪಾಧ್ಯಕ್ಷರು ಹಾಗೂ ಮಾನ್ಯ ನಿರ್ದೇಶಕರುಗಳು ವಿವಿಧ ಸೌಹಾರ್ದ ಸಹಕಾರಿಗಳಿಗೆ ಭೇಟಿ



**ಚಾಮರಾಜನಗರ :** ದಿನಾಂಕ : 29.05.2024ರಂದು ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಸಹಕಾರಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ, ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನ ಕುಮಾರ್, ಉಪಾಧ್ಯಕ್ಷರು, ಶ್ರೀ ಮಂಜುನಾಥ್ ಎಸ್.ಕೆ, ನಿರ್ದೇಶಕರು ಹಾಗೂ ಶ್ರೀಮತಿ ಭಾರತಿ ಜಿ. ಭಟ್ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಭೇಟಿ ನೀಡಿ ಸಹಕಾರಿಯ ಆರ್ಥಿಕ ಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ಪಡೆದು ಇನ್ನೂ ಹೆಚ್ಚಿನ ಆರ್ಥಿಕ ಚಟುವಟಿಕೆಯನ್ನು ನಡೆಸುವಂತೆ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಪದ್ಮಪ್ರಸಾದ್ ಶೆಟ್ಟಿ ಹಾಗೂ ನಿರ್ದೇಶಕರು ಸಂಯುಕ್ತ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ನಿರ್ದೇಶಕರುಗಳನ್ನು ಸನ್ಮಾನಿಸಿದರು.

---

**ಚಾಮರಾಜನಗರ :** ದಿನಾಂಕ 29.05.2024ರಂದು ಶ್ರೀ ಮಾತೇ ಆರ್ಯೈಕೆದಾರರ ಸೌಹಾರ್ದ ಸಹಕಾರಿ ಸಂಘ ನಿ., ಚಾಮರಾಜನಗರ ಸಹಕಾರಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ, ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನ ಕುಮಾರ್, ಉಪಾಧ್ಯಕ್ಷರು, ಶ್ರೀ ಮಂಜುನಾಥ್ ಎಸ್.ಕೆ, ನಿರ್ದೇಶಕರು ಶ್ರೀಮತಿ ಭಾರತಿ ಜಿ ಭಟ್ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ.,ಬೆಂಗಳೂರು ಇವರು ಭೇಟಿ ನೀಡಿ ಸಹಕಾರಿಯ ಆರ್ಥಿಕ ಚಟುವಟಿಕೆಗಳ ಬಗ್ಗೆ ಹಾಗೂ ಸಹಕಾರಿಯ ಮುಂದಿನ ಗುರಿಯ ಬಗ್ಗೆ ಮಾಹಿತಿಯನ್ನು ಪಡೆದು ಇನ್ನೂ ಹೆಚ್ಚಿನ ಆರ್ಥಿಕ ಚಟುವಟಿಕೆಯನ್ನು ನಡೆಸುವಂತೆ ಮಾರ್ಗದರ್ಶನ ನೀಡಿದರು ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಲಿಯ ಎಲ್ಲಾ ಪದಾಧಿಕಾರಿಗಳು ಹಾಜರಾಗಿದ್ದರು.

**ಚಾಮರಾಜನಗರ :** ದಿನಾಂಕ:29.05.2024ರಂದು ಶ್ರೀ ಸಿದ್ದಮಲ್ಲೇಶ್ವರ ವಿರಕ್ತಮಠ ಚಾಮರಾಜನಗರ ಸಹಕಾರಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ, ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನ ಕುಮಾರ್, ಉಪಾಧ್ಯಕ್ಷರು, ಶ್ರೀ ಮಂಜುನಾಥ್ ಎಸ್.ಕೆ, ನಿರ್ದೇಶಕರು ಶ್ರೀಮತಿ ಭಾರತಿ ಜಿ ಭಟ್ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಭೇಟಿ ನೀಡಿದರು ಈ ಸಂದರ್ಭದಲ್ಲಿ ವಿರಕ್ತಮಠದ ಅಧ್ಯಕ್ಷರಾದ ಶ್ರೀ ಚನ್ನಬಸವ ಸ್ವಾಮಿ–ಜಿಯವರನ್ನು ಭೇಟಿ ಮಾಡಿದರು. ಈ ಸಂದರ್ಭದಲ್ಲಿ ಶ್ರೀ ಸಿದ್ದಮಲ್ಲೇಶ್ವರ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಾಬು ರಂಗಸಮುದ್ರ ಇವರು ಉಪಸ್ಥಿತರಿದ್ದರು.

**ಚಾಮರಾಜನಗರ :** ದಿನಾಂಕ: 30–05–2024ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು, ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ ರವರು, ಮಾನ್ಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ ಭಟ್ ರವರು ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು, ಸಪ್ತರ್ಷಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಸಹಕಾರಿಗೆ ಭೇಟಿ ನೀಡಲಾಯಿತು. ಸದರಿ ಸಹಕಾರಿಯ ಆರ್ಥಿಕ ಕಾರ್ಯಚಟುವಟಿಕೆಗಳ ಕುರಿತು ಮಾಹಿತಿ ಪಡೆದು, ಸಹಕಾರಿಯ ಅಭಿವೃದ್ಧಿಯ ಕುರಿತು ಸಹಕಾರಿಯ ಆಡಳಿತ ಮಂಡಲಿ ಸದಸ್ಯರಿಗೆ ಮತ್ತು ಮುಖ್ಯಕಾರ್ಯನಿರ್ವಾಹಕರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ಮಾರ್ಗದರ್ಶನ ಮಾಡಿದರು. ಮೈಸೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಉಪಸ್ಥಿತರಿದ್ದರು. ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಾಬು ರಂಗಸಮುದ್ರ ಇವರು ಉಪಸ್ಥಿತರಿದ್ದರು.

**ಚಾಮರಾಜನಗರ :** ಉದ್ದೇಶಿತ ಚಾಮರಾಜನಗರ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದ ಪೂರ್ವಭಾವಿ ಸಭೆಯನ್ನು ದಿನಾಂಕ : 30.04.2024ರಂದು ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿಯ ಕಾರ್ಯಾಲಯದಲ್ಲಿ ಜರುಗಿಸಿದ್ದು ಈ ಸಭೆಯಲ್ಲಿ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದ ಬೆಳವಣಿಗೆ ಮತ್ತು ಕಾರ್ಯಚಟುವಟಿಕೆಗಳ ಬಗ್ಗೆ ಮೈಸೂರು ಪ್ರಾಂತೀಯ ಅಧಿಕಾರಿಯಾದ ಶ್ರೀ ಗುರುಪ್ರಸಾದ್ ಬಂಗೇರ ಇವರು ಮಾಹಿತಿಯನ್ನು ನೀಡಿದರು ನಂತರ ಶ್ರೀ ಎಸ್. ಬಾಲಸುಬ್ರಮ್ಮಣ್ಯ ನಿರ್ದೇಶಕರು ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ನಿ., ಇವರು ಒಕ್ಕೂಟದ ರಚನೆ ಮತ್ತು ಅವಶ್ಯಕತೆ ಕುರಿತು ಮಾಹಿತಿಯನ್ನು ನೀಡಿದರು. ಈ ಸಭೆಯಲ್ಲಿ ಶ್ರೀ ಚಂದ್ರಶೇಖರಯ್ಯ ಎಂ. ಅಧಿಕಾರಿ, ಕ.ರಾ.ಸೌ.ಸಂ.ಸ ನಿ., ಬೆಂಗಳೂರು ಮತ್ತು ಶ್ರೀ ಬಲರಾಮ್ ಎನ್. ಚಾಮರಾಜನಗರ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಹಾಗೂ ಚಾಮರಾಜನಗರ ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ಉಪಾಧ್ಯಕ್ಷರು, ನಿರ್ದೇಶಕರುಗಳು ಹಾಜರಿದ್ದರು. ಈ ಸಭೆಯಲ್ಲಿ ಒಟ್ಟು 24 ಸೌಹಾರ್ದ ಸಹಕಾರಿಗಳಿಂದ 40 ಜನ ಭಾಗವಹಿಸಿದ್ದರು.

## ಸಂಯುಕ್ತ ಸಹಕಾರಿಯ ಮುಂಬರುವ ತರಬೇತಿ ಕಾರ್ಯಕ್ರಮಗಳು

1. ದಿನಾಂಕ 12.06.2024 ರಿಂದ 13.06.2024 ರವರೆಗೆ ರಾಜ್ಯದ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ 2 ದಿನಗಳ ತರಬೇತಿ 2ನೇ ತಂಡದ ಕಾರ್ಯಕ್ರಮವನ್ನು ಸೌಹಾರ್ದ ಸಹಕಾರಿ ಸೌಧ ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಗಿದೆ.
2. ದಿನಾಂಕ 10.06.2024 ರಿಂದ 16.06.2024 ರವರೆಗೆ ಪಟ್ಟಣ ಸಹಕಾರಿ ಬ್ಯಾಂಕುಗಳ ಕಿರಿಯ ಅಧಿಕಾರಿಗಳು ಹಾಗೂ ಸಿಬ್ಬಂದಿಯವರಿಗಾಗಿ 7 ದಿನಗಳ ತರಬೇತಿ ಕಾರ್ಯಕ್ರಮವನ್ನು ಕಿರ್ಲೋಸ್ಕರ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್, ಯಂತ್ರಪುರ, ಹರಿಹರದಲ್ಲಿ ಹಮ್ಮಿಕೊಳ್ಳಲಾಗಿದೆ.
3. ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿರುವ ಸಂಪನ್ಮೂಲ ವ್ಯಕ್ತಿಗಳ ಸಮಾಲೋಚನಾ ಸಭೆಯನ್ನು ಜೂನ್ ಕೊನೆಯ ವಾರದಲ್ಲಿ ಹಮ್ಮಿಕೊಳ್ಳಲಾಗುವುದು.

## ಕ್ಲಸ್ಟರ್ ಮಟ್ಟದ ತರಬೇತಿ

**ಕಲಬುರಗಿ :** ದಿನಾಂಕ 18.05.2024ರಂದು ಮಹಾಗಾಂವ ಪತ್ತಿನ ಸೌಹಾರ್ದ ಸಹಕಾರಿ ನಿ., ಮಹಾಗಾಂವ ಸದರಿ ಸಹಕಾರಿಯ ಕಛೇರಿಯಲ್ಲಿ ಕಮಲಾಪುರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯ ನಿರ್ವಾಹಕರುಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿಯವರು ಸಾಲ ಮಂಜೂರಾತಿ ಹಾಗೂ ಸಾಲ ನೀಡುವಾಗ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಮಾರ್ಗದರ್ಶನ ಮಾಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ವೀರಶೆಟ್ಟಿಯವರು ಲೆಕ್ಕಪ–ರಿಶೋಧನಾ ಪೂರ್ವ ತಯಾರಿ, ಸಹಕಾರಿಗಳ ಚುನಾವಣಾ, ಸಾಮಾನ್ಯ ಸಭೆ, ಉಪವಿಧಿಯ ತಿದ್ದುಪಡಿಯ ಅಂಶಗಳು, ನಿಧಿಗಳ ಹೂಡಿಕೆ, ಲಾಭ ವಿಂಗಡನೆಯ ಪದ್ಧತಿ ಕುರಿತು, ಸುಸ್ಥಿ ಸಾಲ ಸಹಕಾರಿಗಳಿಗೆ ನೀಡುವ ನೋಟಿಸ್ ಮತ್ತು ದಾವಾ ದಾಖಲಾತಿಗೆ ಬೇಕಾಗುವ ಅಗತ್ಯ ದಾಖಲೆಗಳ ಮಾಹಿತಿ ನೀಡಲಾಯಿತು. ಸದರಿ ಸಭೆಯಲ್ಲಿ 05 ಸಹಕಾರಿಗಳ 05 ಪ್ರತಿನಿಧಿಗಳು ಭಾಗವಹಿಸಿ ಪ್ರಯೋಜನೆ ಪಡೆದರು.

ದಿನಾಂಕ 23.05.2024 ರಂದು ಮಧ್ಯಾಹ್ನ 3.30ಕ್ಕೆ ಕಂಪ್ಲಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಕಾನಿಯವರಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಪೇಟೆ ಬಸವೇಶ್ವರ ಸೌಹಾರ್ದ ಸಹಕಾರಿ ಸಂಘ ನಿ., ಕಂಪ್ಲಿಯಲ್ಲಿ ಆಯೋಜಿಸಲಾಗಿತ್ತು. ಸಹಕಾರಿಗಳ ಪ್ರತಿನಿಧಿಗಳಿಗೆ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರಿ ರವಿಕುಮಾರವರು ಶಾಸನಾತ್ಮಕ ಕರ್ತವ್ಯಗಳು, ಲೆಕ್ಕಪರಿಶೋಧನಾ ವರದಿ, ಸಾಮಾನ್ಯ ಸಭೆ ನಡೆಸುವ ಬಗ್ಗೆ ಮಾಹಿತಿ ನೀಡಿದರು. ಸಭೆಯಲ್ಲಿ 6 ಸಹಕಾರಿಗಳಿಂದ 13 ಮುಕಾನಿಯವರು ಭಾಗವಹಿಸಿ ಪ್ರಯೋಜನೆ ಪಡೆದರು.

**ಸಿರುಗುಪ್ಪ :** ದಿನಾಂಕ 20.05.2024 ರಂದು ಸಿರುಗುಪ್ಪ ಮತ್ತು ಕುರುಗೋಡು ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ವಿಷ್ಣು ವಿಲಾಸ ಸೌಹಾರ್ದ ಪತ್ತಿನ ಸಹಕಾರಿ ನಿ., ಸಿರುಗುಪ್ಪ ಮಧ್ಯಾಹ್ನ 3.00 ಗಂಟೆಗೆ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಹನುಮಂತಯ್ಯಶೆಟ್ಟಿಯವರು ವಹಿಸಿ ಪ್ರಾಸ್ತಾವಿಕ ನುಡಿಯನ್ನು ನುಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರವಿಕುಮಾರವರು ಶಾಸನಾತ್ಮಕ ಕರ್ತವ್ಯಗಳು, ಲೆಕ್ಕಪರಿಶೋಧನಾ ವರದಿಗಳು, ಸಾಮಾನ್ಯ ಸಭೆ ಮತ್ತು ಆಡಳಿತ ಮಂಡಳಿ ಸಭೆ ನಡೆಸುವ ಬಗ್ಗೆ ಮಾಹಿತಿ ನೀಡಲಾಯಿತು. ಸಭೆಯಲ್ಲಿ 17 ಸಹಕಾರಿಗಳಿಂದ 23 ಪ್ರತಿನಿಧಿಗಳು ಭಾಗವಹಿಸಿದ್ದರು.



**ದಾವಣಗೆರೆ :** ದಿನಾಂಕ 09–05–2024ರಂದು ಜಂಗಮ ಸೌಹಾರ್ದ ಸಹಕಾರಿ ಸಂಘ ನಿಯಮಿತ, ದಾವಣಗೆರೆ ಈ ಸಹಕಾರಿಗೆ ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ಎಸ್. ಹಾಗೂ ಟಾಸ್ಕ್‌ಫೋರ್ಸ್ ಅಧಿಕಾರಿಗಳಾದ ಶ್ರೀ ಮಹಾಂತಪ್ಪ ಇವರು ಭೇಟಿ ನೀಡಿದರು. ಸದರಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರ ಸಭೆ ಜರುಗಿತು. ಸಭೆಯಲ್ಲಿ ದಾವಣಗೆರೆ ಜಿಲ್ಲಾ ನಿರ್ದೇಶಕರಾದ ಶ್ರೀ ಎಂ.ಆರ್. ಪ್ರಭುದೇವ್ ಇವರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿ ಪ್ರಸ್ತುತ ಆರ್ಥಿಕ ಪರಿಸ್ಥಿತಿ ಹಾಗೂ ಲೆಕ್ಕಪರಿಶೋಧನೆ ಬಾಕಿ ಇರಲು ಕಾರಣ ಕುರಿತು ವಿಚಾರಿಸಿ ಅಗತ್ಯ ಕಾನೂನು ಸಲಹೆ ಹಾಗೂ ಮಾರ್ಗದರ್ಶನ ನೀಡಿದರು. ಸಹಕಾರಿಯ ಮಾಜಿ ಅಧ್ಯಕ್ಷರಾದ ಶ್ರೀ ವೀರಯ್ಯ, ಉಪಾಧ್ಯಕ್ಷರು, ನಿರ್ದೇಶಕರು ಮತ್ತು ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಿದ್ದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ಹಾಗೂ ಉಮೇಶ್ ಎ.ಎಸ್. ಇವರು ಉಪಸ್ಥಿತರಿದ್ದರು.

## ಮೇ – 2024 : ಶಾಸನಾತ್ಮಕ ವಿಭಾಗದ ಕಾರ್ಯಚಟುವಟಿಕೆಗಳು

**1. ಸಮಾಪನಾಧಿಕಾರಿ ನೇಮಕವಾಗಿರುವ ಕುರಿತು.**

**ಅ. ಸಿರಿವೈಭವ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಂಗಳೂರು (ಬಿಜಿಯು–0154).**

ಸಿರಿವೈಭವ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಂಗಳೂರು ಸಹಕಾರಿಗೆ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ–1997ರ ಪ್ರಕರಣ 48ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಮಾನ್ಯ ಸಹಕಾರಿಗಳ ನಿಬಂಧಕರು ಕರ್ನಾಟಕ ರಾಜ್ಯ ಇವರು ದಿನಾಂಕ 15.04.2024ರಂದು ಸಹಕಾರಿಯ ಸಮಾಪನಾಧಿಕಾರಿಯಾಗಿ ಶ್ರೀ ರಾಜೇಶ್ ಕೆ.ಎಮ್., ಅಧಿಕಾರಿ, ಟಾಸ್ಕಫೋರ್ಸ್ ವಿಭಾಗ, ಕೇಂದ್ರ ಕಛೇರಿ, ಕ.ರಾ.ಸೌ.ಸಂ.ಸ.ನಿ.,ಬೆಂಗಳೂರು ಇವರನ್ನು ನೇಮಕ ಮಾಡಿ ಆದೇಶ ಮಾಡಿರುತ್ತಾರೆ ಸದರಿ ಸಮಾಪನಾಧಿಕಾರಿಗಳು ಸಮಾಪನಾಧಿಕಾರಿಯ ದಿನಾಂಕ 27.05.2024ರಂದು ಅಧಿಕಾರವನ್ನು ಸ್ವೀಕಾರ ಮಾಡಿರುತ್ತಾರೆ.

**2. ಸೌಹಾರ್ದ ಸಹಕಾರಿಗಳ ಸಮಾಪನಾಧಿಕಾರಿ ಬದಲಾವಣೆಯಾಗಿರುವ ಕುರಿತು.**

| ಕ್ರ.ಸಂ | ಸೌಹಾರ್ದ ಸಹಕಾರಿಯ ಹೆಸರು | ಹಿಂದಿನ ಸಮಾಪನಾಧಿಕಾರಿಯ ಹೆಸರು | ಬದಲಾವಣೆಯಾದ ಸಮಾಪನಾಧಿಕಾರಿಯ ಹೆಸರು |
|---|---|---|---|
| 01 | ಬೀಳಗಿ ತಾಲೂಕಾ ಸಾವಯವ ಕೃಷಿ ಸೌಹಾರ್ದ ಸಹಕಾರಿ ನಿ., ಬೀಳಗಿ | ಶ್ರೀ ನಾಗರಾಜ ಜಿ.ಹೆಚ್., ಜಿಲ್ಲಾ ಸಂಯೋಜಕರು, ಕ.ರಾ.ಸೌ.ಸಂ.ಸ.ನಿ.,ಬೆಳಗಾವಿ | ಬಾಗಲಕೋಟೆ ಜಿಲ್ಲಾ ಸಂಯೋಜಕರು, ಕ.ರಾ.ಸೌ.ಸಂ.ಸ.ನಿ., ಬೆಳಗಾವಿ |
| 02 | ಜಮಖಂಡಿ ತಾಲೂಕಾ ಸಾವಯವ ಕೃಷಿ ಸೌಹಾರ್ದ ಸಹಕಾರಿ ನಿ., ಜಮಖಂಡಿ | ಶ್ರೀ ನಾಗರಾಜ ಜಿ.ಹೆಚ್., ಜಿಲ್ಲಾ ಸಂಯೋಜಕರು, ಕ.ರಾ.ಸೌ.ಸಂ.ಸ.ನಿ., ಬೆಳಗಾವಿ | ಬಾಗಲಕೋಟೆ ಜಿಲ್ಲಾ ಸಂಯೋಜಕರು, ಕ.ರಾ.ಸೌ.ಸಂ.ಸ.ನಿ., ಬೆಳಗಾವಿ |
| 03 | ಶ್ರೀ ದಾನೇಶ್ವರಿ ಸೌಹಾರ್ದ ಸಹಕಾರಿ ನಿ., ಮುದೋಳ | ಶ್ರೀ ನಾಗರಾಜ ಜಿ.ಹೆಚ್., ಜಿಲ್ಲಾ ಸಂಯೋಜಕರು, ಕ.ರಾ.ಸೌ.ಸಂ.ಸ.ನಿ., ಬೆಳಗಾವಿ | ಬಾಗಲಕೋಟೆ ಜಿಲ್ಲಾ ಸಂಯೋಜಕರು, ಕ.ರಾ.ಸೌ.ಸಂ.ಸ.ನಿ., ಬೆಳಗಾವಿ |
| 04 | ಘಟಪ್ರಭಾ ಸೌಹಾರ್ದ ಪತ್ತಿನ ಸಹಕಾರಿ ನಿ.,ಮಹಾಲಿಂಗಪೂರ | ಶ್ರೀ ನಾಗರಾಜ ಜಿ.ಹೆಚ್., ಜಿಲ್ಲಾ ಸಂಯೋಜಕರು, ಕ.ರಾ.ಸೌ.ಸಂ.ಸ.ನಿ., ಬೆಳಗಾವಿ | ಬಾಗಲಕೋಟೆ ಜಿಲ್ಲಾ ಸಂಯೋಜಕರು, ಕ.ರಾ.ಸೌ.ಸಂ.ಸ.ನಿ., ಬೆಳಗಾವಿ |
| 05 | ಶ್ರೀ ಜಂಗಮ ಸಿರಿ ಸೌಹಾರ್ದ ಸಹಕಾರಿ ನಿ., ಮುಧೋಳ | ಶ್ರೀ ನಾಗರಾಜ ಜಿ.ಹೆಚ್., ಜಿಲ್ಲಾ ಸಂಯೋಜಕರು, ಕ.ರಾ.ಸೌ.ಸಂ.ಸ.ನಿ., ಬೆಳಗಾವಿ | ಬಾಗಲಕೋಟೆ ಜಿಲ್ಲಾ ಸಂಯೋಜಕರು, ಕ.ರಾ.ಸೌ.ಸಂ.ಸ.ನಿ., ಬೆಳಗಾವಿ |
| 06 | ಕಸ್ಟಮರ್ ಬೆನೆಫಿಟ್ ಟ್ರೇಡ್ ಮಲ್ಟಿಪರ್ಪಸ್ ಸೌಹಾರ್ದ ಸಹಕಾರಿ ನಿ., ನವನಗರ–ಬಾಗಲಕೋಟೆ | ಶ್ರೀ ನಾಗರಾಜ ಜಿ.ಹೆಚ್., ಜಿಲ್ಲಾ ಸಂಯೋಜಕರು, ಕ.ರಾ.ಸೌ.ಸಂ.ಸ.ನಿ., ಬೆಳಗಾವಿ | ಬಾಗಲಕೋಟೆ ಜಿಲ್ಲಾ ಸಂಯೋಜಕರು, ಕ.ರಾ.ಸೌ.ಸಂ.ಸ.ನಿ., ಬೆಳಗಾವಿ |
| 07 | ಜನಶಕ್ತಿ ಸೌಹಾರ್ದ ಸಹಕಾರಿ ನಿ., ಬಾದಾಮಿ | ಶ್ರೀ ನಾಗರಾಜ ಜಿ.ಹೆಚ್., ಜಿಲ್ಲಾ ಸಂಯೋಜಕರು, ಕ.ರಾ.ಸೌ.ಸಂ.ಸ.ನಿ., ಬೆಳಗಾವಿ | ಬಾಗಲಕೋಟೆ ಜಿಲ್ಲಾ ಸಂಯೋಜಕರು, ಕ.ರಾ.ಸೌ.ಸಂ.ಸ.ನಿ., ಬೆಳಗಾವಿ |
| 08 | ಸಮಯ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಬಾಗಲಕೋಟೆ | ಶ್ರೀ ನಾಗರಾಜ ಜಿ.ಹೆಚ್., ಜಿಲ್ಲಾ ಸಂಯೋಜಕರು, ಕ.ರಾ.ಸೌ.ಸಂ.ಸ.ನಿ., ಬೆಳಗಾವಿ | ಬಾಗಲಕೋಟೆ ಜಿಲ್ಲಾ ಸಂಯೋಜಕರು, ಕ.ರಾ.ಸೌ.ಸಂ.ಸ.ನಿ., ಬೆಳಗಾವಿ |

ಮೇಲ್ಕಂಡ ಸೌಹಾರ್ದ ಸಹಕಾರಿಗಳಿಗೆ ಈ ಹಿಂದೆ ಸಮಾಪನಾಧಿಕಾರಿಯಾಗಿ ನೇಮಕವಾಗಿದ್ದ ಶ್ರೀ ನಾಗರಾಜ ಜಿ.ಹೆಚ್., ಜಿಲ್ಲಾ ಸಂಯೋಜಕರು, ಕ.ರಾ.ಸೌ.ಸಂ.ಸ.ನಿ., ಬೆಳಗಾವಿ ಇವರು ವರ್ಗಾವಣೆಯಾಗಿರುವುದರಿಂದ ಇವರ ಬದಲಾಗಿ ಬಾಗಲಕೋಟೆ ಜಿಲ್ಲಾ ಸಂಯೋಜಕರು, ಕ.ರಾ.ಸೌ.ಸಂ.ಸ.ನಿ., ಬೆಳಗಾವಿ ಇವರನ್ನು ಮಾನ್ಯ ಸಹಕಾರಿಗಳ ಉಪನಿಬಂಧಕರು, ಬಾಗಲಕೋಟೆ ಜಿಲ್ಲೆ ಇವರು ನೇಮಕ ಮಾಡಿ ಆದೇಶ ಮಾಡಿರುತ್ತಾರೆ.

**3. ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಬೆಂಗಳೂರು ವಿಚಾರಣಾಧಿಕಾರಿಯನ್ನು ನೇಮಕ ಮಾಡಿರುವ ಕುರಿತು.**

ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಬೆಂಗಳೂರು ಸಹಕಾರಿಯ ಕಾರ್ಯನಿರ್ವಹಣೆಯ ಕುರಿತು ವಿಚಾರಣೆ ನಡೆಸಲು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ–1997ರ ಪ್ರಕರಣ 61(2)(ಎಲ್–5)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಶ್ರೀಧರ್ ಎಸ್., ಸಹಪ್ರಧಾನ ವ್ಯವಸ್ಥಾಪಕರು, ಹಾಗೂ ಪ್ರಾಂತೀಯ ಅಧಿಕಾರಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರನ್ನು ದಿನಾಂಕ 20.05.2024ರಂದು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ನೇಮಕ ಮಾಡಿ ಆದೇಶ ಮಾಡಿರುತ್ತಾರೆ.

## ಉದ್ಘಾಟನೆ



**ಬೆಂಗಳೂರು :** ದಿನಾಂಕ 27 ಮೇ 2024 ರಂದು ಶ್ರೀ ಚರಣ್ ಸೌಹಾರ್ದ ಸಹಕಾರಿ ಬ್ಯಾಂಕ್ ಲಿ., ಕೂಡಿಗೆಹಳ್ಳಿಯಲ್ಲಿ 10ನೇ ಶಾಖೆಯ ಉದ್ಘಾಟನೆಯನ್ನು ದೀಪ ಬೆಳಗಿಸುವ ಮೂಲಕ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಎಸ್. ಗುಂಡೂರಾವ್ ರವರು ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್‌ರವರು ನೆರವೇರಿಸಿದರು. ಈ ಸಮಾರಂಭದಲ್ಲಿ ಗೌರವಾನ್ವಿತ ನ್ಯಾಯಮೂರ್ತಿ ಶ್ರೀ ಪಿ.ಎಸ್. ದಿನೇಶ್ ಕುಮಾರ, ನಿವೃತ ಮುಖ್ಯ ನ್ಯಾಯಾಧೀಶರು, ಕರ್ನಾಟಕ ಹೈಕೋರ್ಟ್ ಹಾಗೂ ಗೌರವಾನ್ವಿತ ಅತಿಥಿಗಳು ಶ್ರೀ ಎಚ್. ಆರ್. ರಂಗನಾಥ್, ಮುಖ್ಯಸ್ಥರು, ಪಬ್ಲಿಕ್ ಟಿವಿ ಹಾಗೂ ಶ್ರೀ ಚರಣ್ ಸೌಹಾರ್ದ ಸಹಕಾರಿ ಬ್ಯಾಂಕ್ ಲಿ., ಇದರ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಬಿ.ವಿ. ದ್ವಾರಕನಾಥ್ ರವರು ಉಪಸ್ಥಿತರಿದ್ದರು.

## ಇ–ಸ್ಟಾಂಪ್ ಎಸಿಸಿಗಳ ಮಾಹಿತಿಗಾಗಿ,

**ಮಾನ್ಯರೇ,**

ಮಾನ್ಯ ಆಯುಕ್ತರು ಕಂದಾಯ ಇಲಾಖೆಯ ಅಧಿಕಾರಿಗಳು, ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿ., ಮತ್ತು ಸಂಯುಕ್ತ ಸಹಕಾರಿಯ ಸಿಬ್ಬಂದಿಗಳಿಗೆ ರಾಜ್ಯದಲ್ಲಿನ ಇ–ಸ್ಟಾಂಪ್ ಎಸಿಸಿ ಕೇಂದ್ರಗಳ ಪರಿವೀಕ್ಷಣೆ ವರದಿ ಸಲ್ಲಿಸಲು ತಿಳಿಸಿರುತ್ತಾರೆ. ಇದರ ಪೂರ್ವದಲ್ಲಿ ಎಸಿಸಿಗಳು ತಮ್ಮ ಕಛೇರಿಯಲ್ಲಿ ಪಾಲಿಸಬೇಕಾದ ನಿಯಮಗಳು ಈ ಕೆಳಗಿನಂತಿವೆ.

1. ಎಸಿಸಿಯಲ್ಲಿ ಕಡ್ಡಾಯವಾಗಿ ಇ–ಸ್ಟಾಂಪ್ ಅನುಚ್ಛೇಧಗಳನ್ನು ಪ್ರದರ್ಶಿಸುವುದು, Its mandatory to Display the Articles in ACC's.
2. ಇ–ಸ್ಟಾಂಪ್ ಬಳಕೆದಾರರ ಐಡಿ ಹೊಂದಿರುವ ಸಿಬ್ಬಂದಿಗಳೇ ಇ–ಸ್ಟಾಂಪ್ ವಿತರಿಸವುದು, Staff having e-stamp user ID's should issue e-stamps.
3. ಗ್ರಾಹಕರಿಂದ ಅರ್ಜಿ ಪಡೆದೇ ಇ–ಸ್ಟಾಂಪ್ ವಿತರಿಸತಕ್ಕದ್ದು, Collect customer application before the issue of e-stamps.
4. ಸರ್ಕಾರದ ಆದೇಶದಂತೆ ಸೇವಾ ಶುಲ್ಕ ಪಡೆಯತಕ್ಕದ್ದು, Collect Service charges as per Government Order.
5. ಅನುಮತಿ ಪಡೆದ ಸ್ಥಳದಲ್ಲಿಯೇ ಇ–ಸ್ಟಾಂಪ್ ವಿತರಿಸತಕ್ಕದ್ದು, Issue the e-stamps only in permitted address.
6. ಸಂಯುಕ್ತ ಸಹಕಾರಿ ಮತ್ತು ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ನ ಸಹಯೋಗದಲ್ಲಿ ನೀಡಿರುವ ಪ್ರಮಾಣಪತ್ರವನ್ನು ಎಸಿಸಿಗಳಲ್ಲಿ ಕಡ್ಡಾಯವಾಗಿ ಪ್ರದರ್ಶಿಸುವುದು. Its mandatory for all the to display the Co-Branded certificate jointly issued by Federal Cooperative and Stock Holding Corporation.
7. ಸಹಕಾರಿಗಳು ಇ–ಸ್ಟಾಂಪ್ ಮುದ್ರಿಸಲು ಕಡ್ಡಾಯವಾಗಿ 2 ಕಂಪ್ಯೂಟರ್‌ಗಳನ್ನು ಬಳಸುವುದು. Its Mandatory to use 2 computers for the printing of Estamp Certificates.
8. 2 ಕಂಪ್ಯೂಟರ್‌ಗಳಲ್ಲೂ ಗೂಗಲ್ ಕ್ರೋಮ್ ಬಳಸಿ ಇ–ಸ್ಟಾಂಪ್ ಮುದ್ರಿಸುವುದು. Use Google Chrome in both computers for printing Estamp.
9. ಪ್ರತಿ 4 ದಿನಗಳಿಗೆ ಒಮ್ಮೆ ಬ್ರೌಸರ್ ಹಿಸ್ಟರಿ ತೆರವುಗೊಳಿಸಿ. Please clear Browsing History once in every 4 days.
10. 80 ಜಿಎಸ್‌ಎಂ ಅಥವಾ ಹೆಚ್ಚಿನ ಗಾತ್ರದ ಬಾಂಡ್ ಪೇಪರ್ ಬಳಸಿ ಇ–ಸ್ಟಾಂಪ್ ಮುದ್ರಿಸಿ, Please use Bond paper with thickness 80GSM and above for printing Estamp.
11. ಒರಿಜಿನಲ್ ಕಾರ್ಟಿಡ್ಜ್ ಬಳಸಿ ಇ–ಸ್ಟಾಂಪ್ ಮುದ್ರಿಸಿ, Please use Original Cartridge for printing E-stamps.

ಸಂಯುಕ್ತ ಸಹಕಾರಿ ಮತ್ತು ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ನ ಸಹಯೋಗದಲ್ಲಿ ನೀಡಿರುವ ಪ್ರಮಾಣಪತ್ರವನ್ನು ಸ್ವೀಕರಿಸದ ಎಸಿಸಿಗಳು ಈ ಕೆಳಗಿನ ಲಿಂಕ್ ಬಳಸಿ ಸಹಕಾರಿಯ ಸದಸ್ಯತ್ವ ಸಂಖ್ಯೆ, ಸಹಕಾರಿಯ(ಎಸಿಸಿ) ಹೆಸರು, ವಿಳಾಸ ದೂರವಾಣಿ ಸಂಖ್ಯೆ ಹಾಗೂ ಇ–ಮೇಲ್ ಐಡಿಯ ಮಾಹಿತಿ ನೀಡಲು ಕೋರಿದೆ. ಸದರಿ ಮಾಹಿತಿಯನ್ನು ಸಂಯುಕ್ತ ಸಹಕಾರಿಯ ದಾಖಲೆಗಳ ಜೊತೆ ತಾಳೆ ಮಾಡಿದ ನಂತರವಷ್ಟೇ ಪ್ರಮಾಣಪತ್ರ ಕಳುಹಿಸಲಾಗುವುದು. ಸಹಕಾರಿಯ ಶಾಖೆಗಳಲ್ಲಿ ಇ–ಸ್ಟಾಂಪ್ ಎಸಿಸಿ ಹೊಂದಿದ್ದಲ್ಲಿ ಶಾಖೆಯ ವಿಳಾಸ ನಮೂದಿಸುವುದು. ಪ್ರತಿ ಶಾಖೆಗೂ ಪ್ರತ್ಯೇಕವಾಗಿ ಮಾಹಿತಿ ಸಲ್ಲಿಸಲು ಕೋರಿದೆ. ಗೂಗಲ್ ಲಿಂಕ್: https://forms.gle/DkroKNWAcxDNci379

**ಈಗಾಗಲೇ ಮಾಹಿತಿ ನೀಡಿ ಪ್ರಮಾಣಪತ್ರ ಪಡೆದ 500 ಎಸಿಸಿಗಳು ಮಾಹಿತಿ ಸಲ್ಲಿಸದಿರಲು ಕೋರಿದೆ.**

## ಉದ್ಘಾಟನೆ



**ಬೆಂಗಳೂರು** : ದಿನಾಂಕ 25.05.2024ರಂದು ಶ್ರೀ ವೀರಸನ್ಯಾಸಿ ವಿವೇಕಾನಂದ ಸೌಹಾರ್ದ ಸಹಕಾರಿ ಸಂಘ ನಿ., ಅರಸೀಕೆರೆ ನೂತನ ಸಹಕಾರಿಯ ಉದ್ಘಾಟನಾ ಕಾರ್ಯಕ್ರಮ ಜರುಗಿತು. ಸದರಿ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ನಂಜನಗೌಡ ಜಿ. ರವರು ಮುಖ್ಯ ಅತಿಥಿಯಾಗಿ ಭಾಗವಹಿಸಿ ಕಾರ್ಯಕ್ರಮವ ಉದ್ಘಾಟನೆಯನ್ನು ನೆರವೇರಿಸಿದರು. ಉದ್ಘಾಟನಾ ಕಾರ್ಯಕ್ರಮದಲ್ಲಿ ಶ್ರೀ ಅಜಿತ್ ಅನುಮಕ್ಕನವರ್, ಸುವರ್ಣ ನ್ಯೂಸ್ ಸಂಪಾದಕರು, ಬೆಂಗಳೂರು, ಮೈಸೂರು ಪ್ರಾಂತೀಯ ಅಧಿಕಾರಿ, ಶ್ರೀ ಗುರುಪ್ರಸಾದ್ ಬಂಗೇರ ಹಾಗೂ ಸೌಹಾರ್ದ ಅಭಿವೃ ಅಧಿಕಾರಿಯಾದ ಶ್ರೀ ಪಾಲ್‌ರಾಜ್, ಅಧಿಕಾರಿಯಾದ ಶ್ರೀ ಚಂದ್ರಶೇಖರಯ್ಯ ಎಂ ರವರು ಸಹಕಾರಿಯ ಅಧ್ಯಕ್ಷರಾದ ಶ್ರೀ ಕೃಷ್ಣ ರವರು ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಯಾದಗಿರಿ** : ದಿನಾಂಕ 01.05.2024 ರಂದು ಸಿಂಧು ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ ನೂತನ ಶಾಖೆಯ ಉದ್ಘಾಟನೆಯನ್ನು ಯಾದಗಿರಿ ಜಿಲ್ಲೆಯ ಶಹಾಪುರ ನಗರದಲ್ಲಿ ಆಯೋಜಿಸಲಾಗಿತ್ತು. ಉದ್ಘಾಟನೆಯನ್ನು ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು ಮತ್ತು ಯಾದಗಿರಿ ಜಿಲ್ಲೆಯ ಉಸ್ತುವಾರಿ ಸಚಿವರಾದ ಶ್ರೀ ಶರಣಬಸಪ್ಪಗೌಡ ದರ್ಶನಾಪುರ ರವರು ನೆರವೇರಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ಗುರುನಾಥ ಜ್ಯಾಂತಿಕರ, ಶ್ರೀಮತಿ ಶೈಲಜಾ ತಪಲಿ, ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ, ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ಎಸ್.ಎಸ್. ಪಾಟೀಲ ಮತ್ತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ್ ರ್‍ಯಾಕಲೆ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ರಾಜಶೇಖರ ಬಿ. ರವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರು, ಸಿಬ್ಬಂದಿ ವರ್ಗ, ಸಹಕಾರಿಯ ಸದಸ್ಯರು, ಸ್ಥಳೀಯ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಮತ್ತು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಪವನ ಎಮ್.ಆರ್ ರವರು ಉಪಸ್ಥಿತರಿದ್ದರು.




**ಕಲಬುರಗಿ** : ದಿನಾಂಕ 12.05.2024 ರಂದು ಕಲಬುರಗಿ ಸೌಹಾರ್ದ ಪತ್ತಿನ ಸಹಕಾರಿ ಸಂಘದ 10ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಕಲಬುರಗಿ ನಗರದ ಸರ್.ಎಂ. ವಿಶ್ವೇಶ್ವರ ಭವನದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಗಿಡಕ್ಕೆ ನೀರನ್ನು ಹಾಕುವುದರ ಮುಖಾಂತರ ಚಾಲನೆಯನ್ನು ನೀಡಲಾಯಿತು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಖೇಮಲಿಂಗ ಬಿ. ಶೆಟಗಾರ ರವರು ವಹಿಸಿದ್ದರು. ಸಭೆಯಲ್ಲಿ 11 ಜನ ಉತ್ತಮ ಸದಸ್ಯರಿಗೆ ಗಣ್ಯ ಮಾನ್ಯರಿಂದ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರು, ಸಿಬ್ಬಂದಿ ವರ್ಗದವರು ಮತ್ತು ಸಹಕಾರಿಯ ಸದಸ್ಯರು ಉಪಸ್ಥಿತರಿದ್ದರು.

# ಸಹಕಾರಿ ಸಂಸ್ಥೆಗಳಲ್ಲಿ ಮುಖ್ಯಕಾರ್ಯನಿರ್ವಾಹಕನ ನೇಮಕ - ಪ್ರಭಾರ ವ್ಯವಸ್ಥೆ - ಒಂದು ವಿಮರ್ಶೆ.



– ಶ್ರೀ ಸಿ.ಎನ್ ಪರಶಿವಮೂರ್ತಿ, ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರು.

ಒಂದು ಸಹಕಾರ ಸಂಸ್ಥೆಯಲ್ಲಿ ಮುಖ್ಯಕಾರ್ಯನಿರ್ವಾಹಕನ ನೇಮಕಾತಿ ಬಗ್ಗೆ ಕಾಯ್ದೆ ಕಲಂ.29ಜಿ ಉಪಕಲಂ (1) ಈ ಕೆಳಕಂಡಂತೆ ಇದೆ.

**ಕಲಂ.29ಜಿ : ಮುಖ್ಯಕಾರ್ಯನಿರ್ವಾಹಕನ ನೇಮಕ :–**

(1) ಪ್ರತಿಯೊಂದು ಸಹಕಾರ ಸಂಘಕ್ಕೆ ಒಬ್ಬ ಮುಖ್ಯಕಾರ್ಯನಿರ್ವಾಹಕನು ಇರತಕ್ಕದ್ದು. ಅವನನ್ನು (xxxx) ನೇಮಕ ಮಾಡುವ ಅಥವಾ ಸಂಘದಿಂದ ತೆಗೆದುಹಾಕಬಹುದಾಗಿರತಕ್ಕದ್ದು.

ಪರಂತು, (i) ವಿಧಾಯಕ ಮಾಡಬಹುದಾದಂತಹ ನಿಯಮಗಳಿಗೊಳಪಟ್ಟು, [ಸಹಕಾರ ಪತ್ತಿನ ರಚನೆಯಲ್ಲಿನ ಸಂಘವನ್ನು ಹೊರುತು ಪಡಿಸಿ ನೆರವು ಪಡೆದ ಸಹಕಾರ ಸಂಘಗಳ] ಸಂಬಂಧದಲ್ಲಿ, ಮುಖ್ಯಕಾರ್ಯನಿರ್ವಾಹಕ ನನ್ನು ನೇಮಕ ಮಾಡುವ ಮತ್ತು ತೆಗೆದು ಹಾಕುವ ಅಧಿಕಾರವನ್ನು ಸರ್ಕಾರ ಅಥವಾ ನಿಬಂಧಕರೇ ಹೊಂದಿರತಕ್ಕದ್ದು; ಮತ್ತು

[ಮತ್ತೂ ಅಲ್ಲದೆ, ಸಹಕಾರ ಪತ್ತಿನ ರಚನೆಯಲ್ಲಿನ ಸಂಘವು ಸಂದರ್ಭಾನುಸಾರವಾಗಿ, ಸರ್ಕಾರವನ್ನು ಅಥವಾ ನಿಬಂಧಕರನ್ನು ಕೋರುವುದರ ಮೂಲಕ ಮುಖ್ಯಕಾರ್ಯನಿರ್ವಾಹಕನನ್ನು ನೇಮಕ ಮಾಡಿಕೊಳ್ಳುವ ಆಯ್ಕೆಯ ಅವಕಾಶವನ್ನು ಹೊಂದಿರತಕ್ಕದ್ದು.]

(ii) [ಇತರ ಪ್ರಕರಣಗಳಲ್ಲಿ] ಅಂತಹ ಸಂಘಗಳ ಕೋರಿಕೆಯ ಮೇರೆಗೆ ಐದು ವರ್ಷಗಳಿಗೆ ಕಡಿಮೆಯಿಲ್ಲದ ಅವಧಿಗೆ ಸರ್ಕಾರ ಅಥವಾ ನಿಬಂಧಕರೇ ಮುಖ್ಯಕಾರ್ಯನಿರ್ವಾಹಕನನ್ನು ನೇಮಕ ಮಾಡಬಹುದು ಮತ್ತು ಅವನನ್ನು ತೆಗೆದು ಹಾಕಬಹುದು.

(2) ಸರ್ಕಾರ ಅಥವಾ ನಿಬಂಧಕರು ಒಂದು ಸಹಕಾರ ಸಂಘಕ್ಕೆ ಮುಖ್ಯಕಾರ್ಯನಿರ್ವಾಹಕನನ್ನು ನೇಮಕ ಮಾಡಿದ ನಂತರ ಸಂಘದಿಂದ ಮುಖ್ಯಕಾರ್ಯನಿರ್ವಾಹಕನಾಗಿ ನೇಮಕಗೊಂಡವನ್ನು ಅವನನ್ನು ಯಾವುದೇ ಹೆಸರಿನಿಂದ ಕರೆಯಲ್ಪಡಲಿ, ಮುಖ್ಯಕಾರ್ಯನಿರ್ವಾಹಕನಾಗಿರುವುದು ಸ್ಥಗಿತಗೊಳ್ಳತಕ್ಕದ್ದು.

**ನಿಯಮ.14ಎಎಮ್ : ಮುಖ್ಯಕಾರ್ಯನಿರ್ವಾಹಕನ ಅಧಿಕಾರಗಳು ಮತ್ತು ಪ್ರಕಾರ್ಯಗಳು :–**

ಕಾಯ್ದೆಯ ಕಲಂ.29ಜಿ ನ ಉಪಕಲಂ (4) ಮತ್ತು (5) ರಲ್ಲಿ ತಿಳಿಸಿರುವ ಅಧಿಕಾರಗಳ ಜೊತೆಗೆ, ಮುಖ್ಯಕಾರ್ಯನಿರ್ವಾಹಕನು ಈ ಕೆಳಗಿನ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಹೊಂದಿರತಕ್ಕದ್ದು.

(1) ಸಂಘದ ಕಾರ್ಯನಿರ್ವಹಣೆ ಮತ್ತು ವ್ಯವಹಾರಗಳನ್ನು ಶ್ರುತಪಡಿಸಲು ಅಗತ್ಯವಾದ ಮಾಹಿತಿಯನ್ನು ಕಾಲಕಾಲಕ್ಕೆ ಆಡಳಿತ ಮಂಡಳಿಗೆ ಒದಗಿಸುವುದು.

(2) ಸಹಕಾರ ವರ್ಷ ಮುಕ್ತಾಯವಾದ 30 ದಿನಗಳೊಳಗೆ ಕರಡು ವಾರ್ಷಿಕ ವರದಿ ಮತ್ತು ಆರ್ಥಿಕ ತಃಖ್ತೆಗಳನ್ನು ತಯಾರಿಸಿ ಆಡಳಿತ ಮಂಡಳಿಯ ಅನುಮೋದನೆಗೆ ಮಂಡಿಸತಕ್ಕದ್ದು.

(3) ಸಹಕಾರ ಸಂಘದ ದೈನಂದಿನ ವ್ಯವಹಾರದ ನಿರ್ವಹಣೆ, ಸಾಮಾನ್ಯ ಮೇಲ್ವಿಚಾರಣೆ, ನಿಯಂತ್ರಣ ಮತ್ತು ವ್ಯವಸ್ಥಾಪನೆಗೆ ಜವಾಬ್ದಾರನಾಗಿರತಕ್ಕದ್ದು.

(4) ಸಹಕಾರ ಸಂಘದ ನೌಕರರಿಗೆ ರಜೆ ಮಂಜೂರು ಮಾಡುವ, ಯಾವುದೇ ದಂಡನೆ ವಿಧಿಸುವ ಅಥವಾ ಅವರನ್ನು ಅಮಾನತ್ತಿನಲ್ಲಿಡುವ ಅಧಿಕಾರವನ್ನು ಒಳಗೊಂಡಂತೆ ನೌಕರರ ಮೇಲೆ ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿಯಂತ್ರಣವನ್ನು ಹೊಂದಿರಲು ಜವಾಬ್ದಾರನಾಗಿರತಕ್ಕದ್ದು.

ಪರಂತು, ನೌಕರರನ್ನು ವಿಚಾರಣೆಯನ್ನು ಕಾಯ್ದಿರಿಸಿ ಅಮಾನತ್ತಿನಲ್ಲಿಡುವ ಅಥವಾ ಯಾವುದೇ ದಂಡನೆಯನ್ನು ವಿಧಿಸುವ ಅಧಿಕಾರವು ಸಹಕಾರ ಸಂಘದ ಉಪವಿಧಿಗಳಲ್ಲಿ ಅಥವಾ ಸೇವಾಬಂಧನೆಗಳಲ್ಲಿ ಸ್ಪಷ್ಟವಾಗಿ ಕೊಡಮಾಡಲ್ಪಡದಿದ್ದಲ್ಲಿ, ಅಂಥ ಅಮಾನತ್ತು ಅಥವಾ ಶಿಕ್ಷೆಯನ್ನು ಆಡಳಿತ ಮಂಡಳಿಯ ಅನುಮೋದನೆ ಮೇರೆಗೆ ವಿಧಿಸತಕ್ಕದ್ದು.

(5) ಸಹಕಾರ ಸಂಘದ ನಗದು ಹಣ, ದಾಸ್ತಾನು ಮತ್ತು ಇತರ ಆಸ್ತಿಗಳ ನಿರ್ವಹಣೆ ಮತ್ತು ಅಭಿರಕ್ಷೆಗೆ ಸೂಕ್ತ ವ್ಯವಸ್ಥೆ ಮಾಡತಕ್ಕದ್ದು.

(6) ಸಹಕಾರ ಸಂಘದ ನಿಧಿಗಳಿಂದ ಎಲ್ಲಾ ವ್ಯವಸ್ಥಾಪನಾ ವೆಚ್ಚಗಳನ್ನು ಮತ್ತು ಕಾರ್ಯನಿರ್ವಹಣಾ ವೆಚ್ಚಗಳನ್ನು ಪಾವತಿಸತಕ್ಕದ್ದು.

(7) ಅಜೆಂಡಾ ಮತ್ತು ಅದರಲ್ಲಿನ ಪ್ರತಿಯೊಂದು ವಿಷಯದಲ್ಲಿನ ಟಿಪ್ಪಣಿ ಸಹಿತ ಸಾಮಾನ್ಯ ನಿಕಾಯದ, ಮಂಡಳಿಯ ಮತ್ತು ಉಪಸಮಿತಿಗಳ ಸಭೆಗಳಿಗೆ ನೋಟೀಸು ನೀಡತಕ್ಕದ್ದು.

(8) ಸಾಮಾನ್ಯ ನಿಕಾಯದ, ಮಂಡಳಿಯ ಮತ್ತು ಉಪಸಮಿತಿಗಳ

ಸಭೆಗಳಲ್ಲಿ ಹಾಜರಿದ್ದು, ಸದರಿ ಸಭೆಗಳಲ್ಲಿ ಅಗತ್ಯ ಪಡಿಸುವ ಕಾಗದ ಪತ್ರಗಳನ್ನು ಹಾಜರು ಪಡಿಸತಕ್ಕದ್ದು ಮತ್ತು ಸಭಾಪತಿಯೊಡನೆ ಅಂತಹ ಸಭೆಗಳ ನಡವಳಿಗಳಿಗೆ ಸಹಿ ಮಾಡತಕ್ಕದ್ದು.

(9) ಸಹಕಾರ ವರ್ಷ ಮುಕ್ತಾಯವಾದ ಮೂವತ್ತು ದಿನಗಳೊಳಗೆ ಹಿಂದಿನ ವರ್ಷದ ವಾರ್ಷಿಕ ಆರ್ಥಿಕ ತಃಖ್ತೆಗಳನ್ನು, ತತ್ಸಂಬಂಧದ ಷೆಡ್ಯೂಲುಗಳ, ಅಧಿಕೃತ ವರದಿಗಳ ಮತ್ತು ಇತರ ತಃಖ್ತೆಗಳ ಸಹಿತ ತಯಾರಿಸಿ ಮಂಡಳಿಯ ಅನುಮೋದನೆ ಪಡೆದು ಲೆಕ್ಕಪರಿಶೋಧಕರ ಮುಂದೆ ಮಂಡಿಸತಕ್ಕದ್ದು.

(10) ಕಾಯ್ದೆಯ ಕಲಂ.63ರ ಲೆಕ್ಕಪರಿಶೋಧನಾ ವರದಿಗಳನ್ನು, ಕಲಂ.64ರ ವಿಚಾರಣಾ ವರದಿಗಳನ್ನು ಮತ್ತು ಕಲಂ.65ರ ಪರಿವೀಕ್ಷಣಾ ವರದಿಗಳನ್ನು (ಇದ್ದಲ್ಲಿ) ಅವುಗಳಲ್ಲಿ ಉಕ್ತವಾದ ಲೋಪದೋಷಗಳನ್ನು ಸರಿಪಡಿಸಲು ಅಥವಾ ಅಕ್ರಮಗಳನ್ನು ನೇರ್ಪಡಿಸಲು ತೆಗೆದುಕೊಳ್ಳಬಹುದಾದ ಕ್ರಮಗಳ ಸಹಿತ ಮಂಡಳಿಯ ಮುಂದೆ ಮಂಡಿಸತಕ್ಕದ್ದು.

(11) ಸದರಿ ವರದಿಗಳಲ್ಲಿ ತಿಳಿಸಲಾದ ಲೋಪದೋಷಗಳನ್ನು ಸರಿಪಡಿಸಲು ಅಥವಾ ಅಕ್ರಮಗಳನ್ನು ನೇರ್ಪಡಿಸಲು ತೆಗೆದುಕೊಂಡು ಕ್ರಮಗಳನ್ನುಳ್ಳ ಅನುಪಾಲನಾ ವರದಿಗಳಿಗೆ ಮಂಡಳಿಯ ಅನುಮೋದನೆ ಪಡೆದು ಅನುಪಾಲನಾ ವರದಿಗಳನ್ನು ಕಳುಹಿಸತಕ್ಕದ್ದು. ಸದರಿ ಲೋಪದೋಷಗಳು ಸರಿಪಡಿಸಲ್ಪಡುವವರೆಗೆ ಮತ್ತು ಅಂತಹ ಅಕ್ರಮಗಳು ನೇರ್ಪಡಿಸಲ್ಪಡುವವರೆಗೆ, ಅಂಥ ಅನುಪಾಲನಾ ವರದಿಗಳನ್ನು ನಿಯತಕಾಲಿಕವಾಗಿ ರಿಜಿಸ್ಟ್ರಾರನಿಗೆ ಅಥವಾ ಲೆಕ್ಕಪರಿಶೋಧನಾ ನಿರ್ದೇಶಕನಿಗೆ ಸಲ್ಲಿಸುವುದನ್ನು ಮುಂದುವರೆಸತಕ್ಕದ್ದು.

(12) ಮಂಡಳಿಯ ಅನುಮೋದನೆಯೊಂದಿಗೆ ಸಂಘದ ಪರವಾಗಿ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹಾಕುವುದು, ನಡೆಸುವುದು, ಸಮರ್ಥಿಸಿಕೊಳ್ಳುವುದು ಅಥವಾ ರಾಜಿ ಮಾಡಿಕೊಳ್ಳುವುದು ಅಥವಾ ಕೈ ಬಿಡುವುದು ಹಾಗೂ ಸಂಘಕ್ಕೆ ಸಾಲ ಕೊಟ್ಟವರೊಡನೆ ಅಥವಾ ಸಂಘದಿಂದ ಸಾಲ ಪಡೆದವರೊಡನೆ ಮಧ್ಯಸ್ಥಿಕೆ ಅಥವಾ ರಾಜಿ ಮಾಡಿಕೊಳ್ಳುವುದು ಅಥವಾ ವಿರುದ್ಧವಾಗಿ ದಾಖಲಿಸಲ್ಪಟ್ಟ ದಾವೆ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಸಮರ್ಥಿಸಿಕೊಳ್ಳುವುದು, ನಡೆಸುವುದು, ರಾಜಿ ಮಾಡಿಕೊಳ್ಳುವುದು ಅಥವಾ ಕೈಬಿಡುವುದು.

(13) ಸಹಕಾರ ಸಂಘದ ಯಾವುದೇ ನಿರ್ದೇಶಕರನು ಕಾಯ್ದೆಯ, ನಿಯಮಗಳ ಮತ್ತು ಉಪವಿಧಿಗಳ ಅಡಿಯಲ್ಲಿ ತನ್ನ ಪದದಲ್ಲಿ ಮುಂದುವರೆಯಲು ಅನರ್ಹನಾದರೆ, ಅದನ್ನು ಸಂಬಂಧಪಟ್ಟ ರಿಜಿಸ್ಟ್ರಾರನಿಗೆ 30 ದಿನಗಳೊಳಗೆ ವರದಿ ಮಾಡತಕ್ಕದ್ದು.

(14) ಸಹಕಾರ ಸಂಘದ ವ್ಯವಹಾರಗಳಿಗೆ ಸಂಬಂಧಿಸಿದಂತೆ ರಿಜಿಸ್ಟ್ರಾರನು ಕಾಲಕಾಲಕ್ಕೆ ಅಗತ್ಯಪಡಿಸುವ ಅಂಥ ಮಾಹಿತಿಯನ್ನು, ವರದಿಗಳನ್ನು ಮತ್ತು ರಿಟರ್ನುಗಳನ್ನು ಸಲ್ಲಿಸತಕ್ಕದ್ದು.

(15) ಅಪೆಕ್ಸ್ ಸಂಘದ ಸಂಬಂಧದಲ್ಲಿ, ಮುಖ್ಯಕಾರ್ಯನಿರ್ವಾಹಕನು

(i) ಅಧ್ಯಕ್ಷನೊಡನೆ ಸಮಾಲೋಚಿಸಿ ನೌಕರರನ್ನು ವರ್ಗಾಯಿಸಲು ಅಧಿಕಾರವುಳ್ಳವನಾಗಿರತಕ್ಕದ್ದು.

(ii) ಯಾವುದೇ ನೌಕರನ ವಿರುದ್ಧದ ಆರೋಪಗಳ ಬಗ್ಗೆ ಶಿಸ್ತಿನ ವಿಚಾರಣೆಯನ್ನು ನಡೆಸಲು ಉದ್ದೇಶಿಸಿರುವಾಗ ಅಥವಾ ಬಾಕಿಯಿರುವಾಗ, ಆತನನ್ನು ಅಮಾನತ್ತಿನಲ್ಲಿಡಬಹುದು.

(16) ಮುಖ್ಯಕಾರ್ಯನಿರ್ವಾಹಕನ ಹುದ್ದೆಯು ಖಾಲಿಯಿರುವಾಗ ಅಥವಾ ರಜೆಯ ಮೇಲೆ ಅಥವಾ ಆತನು ರಜೆಯ ಮೇಲೆ ಹಾಜರಿಲ್ಲದಿರುವಾಗ, ಮುಖ್ಯಕಾರ್ಯನಿರ್ವಾಹಕನ ಪ್ರಚಲಿತ ಎಂದಿನ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಆತನ ನಂತರದ ನಿಕಟ ಕೆಳಗಿನ ಅಧಿಕಾರಿಯು ನಿರ್ವಹಿಸತಕ್ಕದ್ದು.

ಈ ಮೇಲ್ಕಂಡ ವಿಷಯವನ್ನು ಆಯ್ಕೆ ಮಾಡಿಕೊಂಡ ಉದ್ದೇಶವೆಂದರೆ ಹಲವಾರು ರಾಜ್ಯ ಮಟ್ಟದ ಸಹಕಾರ ಸಂಸ್ಥೆಗಳು, ಪ್ರಮುಖ ಪಟ್ಟಣ ಸಹಕಾರ ಬ್ಯಾಂಕ್‌ಗಳು, ಮತ್ತು ಹಲವು ಜಿಲ್ಲಾ ಮಟ್ಟದ ಸಹಕಾರಿ ಸಂಸ್ಥೆಗಳು ಮುಖ್ಯ ಕಾರ್ಯನಿರ್ವಾಹಕನನ್ನು ನೇಮಕ ಮಾಡಿಕೊಳ್ಳದೇ ಪ್ರಭಾರ ವ್ಯವಸ್ಥೆಯಲ್ಲಿ ಮುಂದುವರಿಸುತ್ತಿವೆ. ಇದಕ್ಕೆ ಸಾಮಾನ್ಯವಾಗಿ ಪ್ರಮುಖ ಕಾರಣಗಳು ಅರ್ಹ ವ್ಯಕ್ತಿಗಳು ಭಡ್ತಿ ನೀಡಲು ಲಭ್ಯವಿಲ್ಲದೇ ಇದ್ದಾಗ, ಅಥವಾ ನೇರ ನೇಮಕಾತಿಗೆ ಆಸಕ್ತಿ ಇಲ್ಲದಾಗ (ಏಕೆಂದರೆ ನಿಯಮದಂತೆ ನೇಮಕಾತಿ ಸಮಿತಿ, ಲಿಖಿತ ಪರೀಕ್ಷೆ, ಮೌಖಿಕ ಪರೀಕ್ಷೆ ಮೂಲಕ ಮಾಡಿದರೆ ಅವರಿಗೆ ಬೇಕಾದ ವ್ಯಕ್ತಿ ಲಭ್ಯವಾಗದೇ ಹೊಗಬಹುದೆಂದು) ಅಥವಾ ಅಧಿಕ ವೆಚ್ಚವಾಗುತ್ತಿದೆಂದು ಅಥವಾ ಸರ್ಕಾರ ಹಾಗೂ ನಿಬಂಧಕರಿಂದ ನೇಮಕ ಕೇಳಿದರೆ, ಚುನಾಯಿತ ಪ್ರತಿನಿಧಿಗಳ ಮಾತು ನಡೆಯುವುದಿಲ್ಲವೆಂದು. (ಆದರೆ ಈಗ ಇಲಾಖಾಧಿಕಾರಿಗಳು ಚುನಾಯಿತ ಪ್ರತಿನಿಧಿಗಳ ಜೊತೆ ಹೊಂದಾಣಿಕೆ ಮಾಡಿಕೊಳ್ಳುವುದರ ಜೊತೆಗೆ, ಆ ಸಂಸ್ಥೆ ವ್ಯವಹಾರದಲ್ಲಿ ಏನೇನು ಮಾಡಬಹುದೆಂದು ಮಾರ್ಗದರ್ಶನ ನೀಡಲೂ ತಯಾರಿದ್ದಾರೆ) ಅಥವಾ ಕೆಳಹಂತದ ಅಧಿಕಾರಿಗೆ ಪ್ರಭಾರವಹಿಸಿ, ಅವನನ್ನು ನಿಯಂತ್ರಣದಲ್ಲಿಟ್ಟು ಕೊಂಡು, ಚುನಾಯಿತ ಪ್ರತಿನಿಧಿಗಳ ಮರ್ಜಿಯಲ್ಲಿರುವಂತೆ ಮತ್ತು ಅಂತಹ ವ್ಯಕ್ತಿ ಯಾವುದೇ ತೊಡಕು ಮಾಡುವ ಪ್ರಯತ್ನ ಮಾಡಿದರೆ, ಅವನ ಪ್ರಭಾರ ವ್ಯವಸ್ಥೆ ನಿಲ್ಲಿಸುವ ಅಧಿಕಾರವಿರುವುದರಿಂದ, ಸಂಸ್ಥೆಯನ್ನು ಚುನಾಯಿತ ಪ್ರತಿನಿಧಿಗಳ

ನಿಯಂತ್ರಣ ಮಾಡಲು ತಡೆಯೊಡ್ಡುವ ಶಕ್ತಿ, ಪ್ರಭಾರ ಅಧಿಕಾರಿಗೆ ಇಲ್ಲ ಎಂಬ ಭ್ರಮೆಯಿಂದ. ಆದರೆ ಪ್ರಭಾರ ವಹಿಸಿಕೊಂಡ ಅಧಿಕಾರಿ, ಮುಖ್ಯಕಾರ್ಯನಿರ್ವಾಹಕನ ಹುದ್ದೆ ಅಲಂಕರಿಸಿದ ದಿನಾಂಕದಿಂದ ಕಲಂ.29ಜಿ ನಲ್ಲಿ ನಿಗದಿ ಪಡಿಸಿದ ಹಕ್ಕು, ಕರ್ತವ್ಯ ಮತ್ತು ಜವಾಬ್ದಾರಿಗೆ ಭದ್ದನಾಗಿರಬೇಕೆಂಬ ಮತ್ತು ಆಗಿಲ್ಲದಿದ್ದರೆ ಕರ್ತವ್ಯ ಚ್ಯುತಿ ಮಾಡಿದಂತಾಗುತ್ತದೆ ಎಂಬ ಭಾವನೆ ಪ್ರಭಾರ ವಹಿಸಿಕೊಂಡ ಅಧಿಕಾರಿಗಳು ಗಮನಹರಿಸುವುದೇ ಇಲ್ಲ. ಅಂದರೆ ಪ್ರಭಾರ ಎಂದರೆ, ಅದು ತಾತ್ಕಾಲಿಕ ಮತ್ತು ಜವಾಬ್ದಾರಿ ರಹಿತ ಎಂದು ಭ್ರಮೆಯಿಂದ, ಚುನಾಯಿತ ಪ್ರತಿನಿಧಿಗಳು ಹೇಳಿದಂತೆ ನಡೆದರೆ, ಅದು ಅಶಿಸ್ತಾಗುತ್ತದೆ ಎಂದು ತಿಳಿಯಲೇಬೇಕು. ಕಲಂ 29ಜಿ ನ ಎರಡು ಪರಂತುಕಗಳು 2013 ಮತ್ತು 2014 ರಲ್ಲಿ ಸೇರ್ಪಡೆ ಮಾಡಲಾಗದೆ. ಈ ಮೇಲ್ಕಂಡ ಸೇರ್ಪಡೆ ನಂತರ ನಿಬಂಧಕರು ಮತ್ತು ಸರ್ಕಾರದ ಮಟ್ಟದಲ್ಲಿ ಯಾವುದೇ ಸಹಕಾರ ಸಂಘವು ಮುಖ್ಯಕಾರ್ಯನಿರ್ವಾಹಕ ಹುದ್ದೆ ಖಾಲಿಯಾದ ಮೂರು ತಿಂಗಳೊಳಗೆ ಮುಖ್ಯಕಾರ್ಯನಿರ್ವಾಹಕನ ಹುದ್ದೆ ಭರ್ತಿ ಮಾಡಿಲ್ಲ ಎಂಬ ಮಾಹಿತಿ ಇದ್ದರೆ, ಮತ್ತು ಜೊತೆಗೆ ಆ ಸಂಸ್ಥೆಯಲ್ಲಿ ಇರುವ ಇನ್ನಿತರ ನೌಕರರಲ್ಲಿ ಅರ್ಹತೆ ಇರುವ ವ್ಯಕ್ತಿಗಳು ಇದ್ದಾರೆಯೇ ಅಥವಾ ಭಡ್ತಿ ನೀಡುವಾಗ ಅನುಸರಿಸಬೇಕಾದ ನೀತಿಯನ್ನು ನಿಯಮ 17 ರಲ್ಲಿ ಸೇರಿಸಿ, ಭಡ್ತಿಗೆ ಬೇಕಾದ ಅರ್ಹತೆ ಮತ್ತು ಅನುಭವ ನಿಗದಿ ಪಡಿಸಿದ್ದರೆ. ಇಂತಹ ಅರ್ಹ ಅಭ್ಯರ್ಥಿಗಳೂ ಇಲ್ಲದ ಬಗ್ಗೆ ದೃಢೀಕರಿಸಿಕೊಳ್ಳುವ ಬಗ್ಗೆ ನಿಬಂಧಕರು/ಸರ್ಕಾರ ಯಾವುದೇ ವ್ಯವಸ್ಥೆ ಮಾಡಿಕೊಂಡಿಲ್ಲ. ಆದರೆ ಹಿರಿಯ ಅಧಿಕಾರಿಗಳಿಗೆ ಭಡ್ತಿ ನೀಡಬೇಕಾದಾಗ ಸರ್ಕಾರ ಮತ್ತು ನಿಬಂಧಕರು ವಿವಿಧ ಸಹಕಾರ ಸಂಸ್ಥೆಗಳನ್ನು ಹುಡುಕಿ ಅಲ್ಲಿಗೆ ಅವಶ್ಯಕತೆ ಇಲ್ಲದೇ ಇದ್ದರೂ ಭಡ್ತಿ ಪಡೆಯುವ ಅಧಿಕಾರಿಗಳ ಒತ್ತಡಕ್ಕೆ ಸಿಲುಕಿ ನೇಮಕ ಮಾಡಲಾಗುತ್ತಿದೆ. ಆದರೆ ಶಾಸನಾತ್ಮಕವಾಗಿ ಕಲಂ.29ಜಿ ಅಡಿ ಯಾವುದೇ ಸಹಕಾರ ಸಂಸ್ಥೆ, ಮುಖ್ಯಕಾರ್ಯನಿರ್ವಾಹಕನ ಹುದ್ದೆ ಖಾಲಿಯಾದ ಮೂರು ತಿಂಗಳು ಭಡ್ತಿ ನೀಡದಿದ್ದರೆ, ಅಥವಾ ಆಯ್ಕೆ ಮಾಡದಿದ್ದರೆ, ಅಂತಹ ಸಂಸ್ಥೆಗಳಿಗೆ ಮುಖ್ಯಕಾರ್ಯನಿರ್ವಾಹಕನ ನೇಮಕ ಮಾಡುವ ಜವಾಬ್ದಾರಿ ನಿಬಂಧಕರಿಗೆ/ಸರ್ಕಾರಕ್ಕೆ ಇದ್ದರೂ ಅದನ್ನು ಪಾಲಿಸದಿದ್ದರೆ, ಸಹಕಾರಿ ಸಂಸ್ಥೆಗಳನ್ನು ಕಾನೂನು ಭದ್ದ ಜವಾಬ್ದಾರಿ ನಿರ್ವಹಿಸುವಂತೆ ನೋಡಿಕೊಳ್ಳುವ ಜವಾಬ್ದಾರಿಯೊಂದು ನುಣುಚಿಕೊಳ್ಳುವ ಬೇಜವಾಬ್ದಾರಿತನ ತೋರಿಸಿದಂತಾಗುತ್ತಿದೆ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಯಾವುದೇ ಸಹಕಾರಿ ಸಂಸ್ಥೆಯೂ ಯಾವುದೇ ಕಾರಣಕ್ಕೂ ಮುಖ್ಯಕಾರ್ಯನಿರ್ವಾಹಕನ ನೇಮಕ ಅತಿ ಅವಶ್ಯಕವೆಂದು ಸರ್ಕಾರ ತಿಳಿದಿದ್ದರಿಂದಲೇ 2013/2014 ರಲ್ಲಿ ಈ ಪರಂತುಕವನ್ನು ಹೊಸದಾಗಿ ಸೇರ್ಪಡೆ ಮಾಡಿದೆ. ಇದನ್ನು ಪಾಲಿಸಬೇಕಾದರೆ, ಕ್ಷೇತ್ರ ಸಿಬ್ಬಂದಿ ಅಂದರೆ ಸಹಾಯಕ ನಿಬಂಧಕರು, ಉಪನಿಬಂಧಕರು ಮತ್ತು ಸಂಯುಕ್ತ ನಿಬಂಧಕರು ತಾವು ಸರ್ಕಾರದ ಪರವಾಗಿ ನಿರ್ದೇಶಕರಾಗಿ ಕೆಲಸ ಮಾಡುವ ಸಂಸ್ಥೆಗಳಲ್ಲಿ, ಮುಖ್ಯಕಾರ್ಯನಿರ್ವಾಹಕನ ಹುದ್ದೆ ಖಾಲಿಯಾಗಿದೆಯೇ ಮತ್ತು ಮೂರು ತಿಂಗಳಲ್ಲಿ ಆ ಹುದ್ದೆ ಭಡ್ತಿ ಮಾಡುವ ವ್ಯವಸ್ಥೆ ಮಾಡಲಾಗಿದೆಯೇ? ಎಂಬುದು ತಿಳಿಯುವುದು ಕಷ್ಟವೇನಲ್ಲ. ಅದೇ ರೀತಿ ವಿಸ್ತಿರಣಾಧಿಕಾರಿ, ಸಹಕಾರಿ ಅಭಿವೃದ್ಧಿ ಅಧಿಕಾರಿ ಅಥವಾ ಇನ್ನಿತರ ಸಿಬ್ಬಂದಿ ಮೂಲಕ ಕೆಳಹಂತದ ಸಹಕಾರಿ ಸಂಸ್ಥೆಗಳಲ್ಲಿ ಮುಖ್ಯಕಾರ್ಯನಿರ್ವಾಹಕನ ನೇಮಕ ಮಾಡಿದ/ಮಾಡದೇ ಇದ್ದ ಬಗ್ಗೆ ಮಾಹಿತಿ ಪಡೆಯಬಹುದು. ಆದರೆ ಇದಕ್ಕೆ ಒಂದು ಎಚ್ಚರಿಕೆ ವಹಿಸುವುದು ಅವಶ್ಯಕ. ಈ ವಿಷಯವನ್ನು ಆಧಾರವಾಗಿಟ್ಟ ಇಲಾಖಾಧಿಕಾರಿಗಳು ಸಹಕಾರ ಸಂಸ್ಥೆಗಳನ್ನು ಶಿಕ್ಷೆಗೊಳಿಸಬಾರದು. ಇಲ್ಲಿ ನಿಬಂಧಕರು ಸ್ನೇಹಿತ, ತತ್ವಜ್ಞಾನಿ ಮತ್ತು ಮಾರ್ಗದರ್ಶಕ ಎಂಬ ನೀತಿಗೆ ಪೂರಕವಾಗಿ ಸಹಕಾರಿ ಸಂಸ್ಥೆಗಳಿಗೆ ಮಾರ್ಗದರ್ಶನ ನೀಡಬೇಕು. ಭರ್ತಿ ಮಾಡುವಂತೆ ಪ್ರೇರೆಪಿಸಿ ಕ್ರಮ ಜರುಗಿಸಬೇಕು. ಇದರ ಜೊತೆಗೆ ಸಹಕಾರಿ ಸಂಸ್ಥೆಗಳಲ್ಲಿ ನೇಮಕ ಮತ್ತು ಭಡ್ತಿ ನೀಡುವಾಗ ನ್ಯಾಯಾಲಯಗಳು ನೀಡಿದ ಮಾರ್ಗದರ್ಶಕ ತೀರ್ಪಿಗೆ ಪೂರಕವಾಗಿ ಭಡ್ತಿ ನೀತಿ ರೂಪಿಸಬೇಕು. ಅರ್ಹತೆಗಳಿಗೆ ವಿನಾಯ್ತಿ ನೀಡುವ ಪ್ರವೃತ್ತಿ ಇರಬಾರದು. ಇದಕ್ಕೆ ಉದಾಹರಣೆ ನೀಡುವುದಾದರೆ ಎರಡು ಜಿಲ್ಲಾ ಸಹಕಾರ ಬ್ಯಾಂಕ್‌ಗಳಲ್ಲಿ ಶೀಘ್ರಲಿಪಿಗಾರನಾಗಿದ್ದ ವ್ಯಕ್ತಿ ಅದೇ ಸಂಸ್ಥೆಲ್ಲಿ ವ್ಯವಸ್ಥಾಪಕ ನಿರ್ದೇಶಕರಾದರು, ಅದೇ ರೀತಿ ಸಹಕಾರ ಇಲಾಖೆಯಲ್ಲಿ ಶೀಘ್ರಲಿಪಿಕಾರರಾಗಿದ್ದ ಬಗ್ಗೆ ವ್ಯಕ್ತಿ ಅಪರನಿಬಂಧಕರಾದ ಪ್ರಸಂಗಳು ಆಗದಂತೆ ಭಡ್ತಿ ನೀತಿ ರೂಪಿಸಬೇಕು. ಅಂದರೆ ಒಂದು ಸಹಕಾರಿ ಸಂಸ್ಥೆಯ ಮುಖ್ಯಕಾರ್ಯನಿರ್ವಾಹಕನಾಗ ಬೇಕಾದರೆ ಅವನು ಕನಿಷ್ಟ ಸಂಸ್ಥೆಯಲ್ಲಿ ಹಿರಿಯ ಅಧಿಕಾರಿಯಾಗಿ ನೇರ ನೇಮಕಾತಿ ಮುಖಾಂತರ ಆಯ್ಕೆಯಾಗಿರುವುದನ್ನು ದೃಢೀಕರಿಸಿಕೊಳ್ಳಬೇಕು. ಇಲ್ಲವಾದರೆ ಅಂತಹ ವ್ಯಕ್ತಿಗಳು ಸಹಕಾರ ಸಂಸ್ಥೆಯ ಅಭಿವೃದ್ಧಿ ಬದಲಾಗಿ ಅರ್ಹತೆ ಇಲ್ಲದೇ ಮುಖ್ಯಕಾರ್ಯನಿರ್ವಾಹಕನಾದರೆ ಆ ಸಂಸ್ಥೆ ಬೆಳೆಸಲು ಸಾಧ್ಯವಾಗುವುದೇ ಇಲ್ಲ.

ಇದರ ಜೊತೆಗೆ ನಮ್ಮ ರಾಜ್ಯದಲ್ಲಿ ಸುಮಾರು 16000 ಹಾಲು ಉತ್ಪಾದಕ ಸಹಕಾರ ಸಂಘಗಳು ಕೆಲಸ ನಿರ್ವಹಿಸುತ್ತಿವೆ. ಈ ಸಂಸ್ಥೆಗಳಲ್ಲಿ ಮುಖ್ಯಕಾರ್ಯನಿರ್ವಾಹಕ ಎಂಬ ಶದ್ದಕ್ಕೆ ಅಪಮಾನ ಮಾಡಲಾಗುತ್ತಿದೆ. ಅವನ್ನು ಸಿಪಾಯಿಯಂತೆ ಕೆಲಸ ಮಾಡಿಸಲಾಗುತ್ತಿದೆ. ಇದಕ್ಕೆ ಹಾಲು

ಒಕ್ಕೂಟಕ ಕ್ಷೇತ್ರ ಸಿಬ್ಬಂದಿ ಸಹಕಾರ ನೀಡುತ್ತಾರೆ. ಈ ಸಂಸ್ಥೆಗಳನ್ನು ಮುಖ್ಯಕಾರ್ಯನಿರ್ವಾಹಕನು ಖಾಯಂ ಆಗಿ ಇರುವುದೇ ಇಲ್ಲ. ಹಲವಾರು ಪ್ರಸಂಗಳಲ್ಲಿ ಹಾಲು ಪರೀಕ್ಷಣೆ ಮುಖ್ಯಕಾರ್ಯ ನಿರ್ವಾಹಕನಾಗಿ ಸೇವೆ ಮಾಡುತ್ತಾರೆ. ಇದರ ಜೊತೆಗೆ ಮುಖ್ಯಕಾರ್ಯನಿರ್ವಾಹಕನ ನೇಮಕ/ತೆಗೆದು ಹಾಕುವುದು ನಿರಂತರವಾಗಿ ನಡೆಯುತ್ತಲೇ ಇರುತ್ತದೆ. ಇದನ್ನು ಇಲಾಖೆ ಗಮನಹರಿಸುವುದೇ ಇಲ್ಲ. ಪತ್ತಿನ ಸಹಕಾರ ಸಂಘಗಳಲ್ಲಿ ಸಹ ಪ್ರತ್ಯೇಕ ನೇಮಕಾತಿ ಪ್ರಾಧಿಕಾರದ ಮೂಲಕ ಮಾಡಿದರೂ, ಅಂತಹ ವ್ಯಕ್ತಿಗಳು ಚುನಾಯಿತ ಪ್ರತಿನಿಧಿಗಳು ಸೇವಕರಂತೆ ಕೆಲಸ ಮಾಡುತ್ತಿದ್ದಾರೆ. ಕೆಲವು ಸಂಸ್ಥೆಗಳಲ್ಲಿ ಮುಖ್ಯಕಾರ್ಯನಿರ್ವಾಹಕನೇ ಅಂತಿಮ ಪ್ರಾಧಿಕಾರದಂತೆ ಕೆಲಸ ಮಾಡಲು ಚುನಾಯಿತ ಪ್ರತಿನಿಧಿಗಳು ಅವಕಾಶ ಕಲ್ಪಿಸುತ್ತಾರೆ. ಅಂದರೆ ಅವರು ಕಲಂ.28ಸಿ ಅಡಿ ನೀಡಿದ ಕರ್ತವ್ಯ ಹೊತ್ತು ಮತ್ತು ಜವಾಬ್ದಾರಿಯನ್ನು ತಿಳಿದೇ ಇಲ್ಲ.

ಈ ಲೇಖನದ ಮೂಲ ಉದ್ದೇಶ ಹಲವಾರು ಪ್ರತಿಷ್ಠಿತ ಸಹಕಾರ ಸಂಸ್ಥೆಗಳಲ್ಲಿಯೂ, ಅರ್ಹತೆ ಇದ್ದ ಅಧಿಕಾರಿಗಳಿದ್ದರೂ, ಅಥವಾ ಸರ್ಕಾರದ ಅಧಿಕಾರಿಗಳು ತೆಗೆದುಕೊಳ್ಳುವ ಮನಸಿಲ್ಲದೇ, ಅವರಿಗೆ ಅನುಕೂಲವಾಗುವ ವ್ಯಕ್ತಿಗಳು ಸಿಗುವವರೆಗೆ ಮುಖ್ಯಕಾರ್ಯನಿರ್ವಾಹಕರ ಹುದ್ದೆ ಭಡ್ತಿ ಅಥವಾ ನೇರ ನೇಮಕಾತಿ ಮೂಲಕ, ಭರ್ತಿ ಮಾಡದೆ ಇದ್ದ ಸಹಕಾರ ಸಂಸ್ಥೆಗಳು ಆ ಸಂಸ್ಥೆಯ ಹಿತ ದೃಷ್ಟಿಯಿಂದ ಮೂರು ತಿಂಗಳಿಗಿಂತ ಹೆಚ್ಚು ಅವಧಿಗೆ ಖಾಲಿ ಇರಬಾರದು. ಇದನ್ನು ಅಧಿಕೃತವಾಗಿ ದೃಡೀಕರಿಸಿಕೊಳ್ಳುವ ಜವಾಬ್ದಾರಿ ನಿಬಂಧಕರು ನಿರ್ವಹಿಸಬೇಕು. ಏಕೆಂದರೆ ಒಂದು ನೋಂದಾಯಿತ ಸಹಕಾರ ಸಂಸ್ಥೆಗೆ ಒಬ್ಬ ಮುಖ್ಯಕಾರ್ಯನಿರ್ವಾಹಕನ ಅವಶ್ಯಕತೆ ಕಾನೂನಿನಂತೆ ಅವಶ್ಯಕ ಮತ್ತು ಆ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಪೂರೈಸಲು ಸತತ ಕಾರ್ಯನಿರ್ವಹಿಸಬೇಕು. ಅಂತಹ ವ್ಯಕ್ತಿ ಚುನಾಯಿತ ಮಂಡಳಿಗೆ, ಲಿಖಿತವಾಗಿ ಮಂಡಳಿ ಸಭೆಗಳಲ್ಲಿ ಟಿಪ್ಪಣಿ ಮೂಲಕ, ಮಾಹಿತಿ ನೀಡಿ ಅದರ ಉದ್ದೇಶವನ್ನು ಸಾರ್ಥಕ ಪಡಿಸಲು ಕ್ರಮವಿಡುವ ವ್ಯಕ್ತಿ. ಅವನ ಪೂರ್ಣ ಪ್ರಮಾಣದ ಸೇವೆ ಅವಶ್ಯಕ. ಅವನ ಹಕ್ಕು, ಕರ್ತವ್ಯ ಜವಾಬ್ದಾರಿ ಅರಿಯಲು ಶ್ರೇಷ್ಠ ಮಟ್ಟದ ತರಬೇತಿ ಅವಶ್ಯಕ ಮತ್ತು ನಿಯಮದಲ್ಲಿ ನಿಗದಿ ಪಡಿಸಿದ ವಿದ್ಯಾರ್ಹತೆ ಇಲ್ಲದ ವ್ಯಕ್ತಿಗಳನ್ನು ಮುಖ್ಯಕಾರ್ಯನಿರ್ವಾಹಕನ ಹುದ್ದೆಗೆ ನೇಮಕ ಮಾಡದಂತೆ ನೋಡಿಕೊಳ್ಳುವುದು ನಿಬಂಧಕರ ಜವಾಬ್ದಾರಿ.

ಇದಕ್ಕೆ ಪೂರಕವಾಗಿ, ವಿದ್ಯಾರ್ಹತೆ ನಿಗದಿ ಪಡಿಸಿದ ನಂತರ ವಿವಿಧ ಮಹಾಮಂಡಳಿಗಳು ನಿರ್ವಹಿಸುತ್ತಿರುವ, ಸಹಕಾರಿ ಡಿಪ್ಲೊಮಾಗಳ ಬಗ್ಗೆ, ಆನ್‌ಲೈನ್ ತರಬೇತಿ ಬಗ್ಗೆ, ಒಂದು ಸಂಶೋಧನಾ ಸಂಸ್ಥೆ ಮೌಲ್ಯ ಮಾಪನ ಮಾಡುವ ವ್ಯವಸ್ಥೆ ನಿಬಂಧಕರು ಮಾಡುವುದು ಅವಶ್ಯಕ. ಏಕೆಂದರೆ, ಇಂತಹ ಸಹಕಾರ ಡಿಪ್ಲೊಮಾ ಪಡೆದ ನಂತರ, ಅಂತಹ ಅಭ್ಯರ್ಥಿಗಳ ಸಮರ್ಥ್ಯವನ್ನು ಹೆಚ್ಚಿಸಲಾಗಿದೆಯೇ ಎಂಬುದನ್ನು ನಿಬಂಧಕರು ಗಮನಿಸಬೇಕು.

ಈವರೆವಿಗೂ ಪ್ರಭಾರ ವ್ಯವಸ್ಥೆಯಲ್ಲಿಯೇ ಮುಂದುವರಿಸಿರುವ ಸಹಕಾರ ಸಂಸ್ಥೆಗಳ ಮೇಲೆ ಮಾಹಿತಿ ಪಡೆದು ಅವಧಿ ನಿಗದಿ ಪಡಿಸಿ, ಪೂರ್ಣ ಪ್ರಮಾಣದ ಮುಖ್ಯಕಾರ್ಯನಿರ್ವಾಹಕನ ನೇಮಕ ಮಾಡುವ ವ್ಯವಸ್ಥೆ ಮಾಡುವುದು ನಿಬಂಧಕರ ಶಾಸಕ ವೃದ್ದ ಜವಾಬ್ದಾರಿ.

## ಬಸವ ಜಯಂತಿ ಆಚರಣೆ

**ಬೆಳಗಾವಿ :** ಬಸವಣ್ಣನವರ 891 ನೇ ಜಯಂತಿಯನ್ನು ದಿನಾಂಕ 10 ಮೇ 2024 ರಂದು ಬೆಳಗಾವಿ ಪ್ರಾಂತೀಯ ಕಛೇರಿಯಲ್ಲಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ್ ಇವರು ಮಾತನಾಡುತ್ತಾ ಹನ್ನೆರಡನೇಯ ಶತಮಾನದ ಬಹುದೊಡ್ಡ ಸಮಾಜ ಸುಧಾರಕರು ಬಸವಣ್ಣನವರು. ಬಸವಣ್ಣನವರ ಸಾರಥ್ಯದಲ್ಲಿ ನಡೆದ ಸುಧಾರಣೆಯ ಪ್ರಯತ್ನ ಒಂದು ಸಾಮಾಜಿಕ ಚಳುವಳಿಯಾಗಿ ರೂಪುಗೊಂಡಿತು. ಇವರ ತತ್ವ, ಆದರ್ಶಗಳು, ಚಿಂತನೆಗಳು ಇಂದಿಗೂ ಪ್ರಸ್ತುತ. ಬಸವಣ್ಣನವರು ಕಾಯಕವೇ ಕೈಲಾಸ ಎಂದು ಸಾರಿದರೂ. ಸಾಮಾಜಿಕ ಅಸಮಾನತೆ, ಜಾತಿ ವ್ಯವಸ್ಥೆ ಸೇರಿದಂತೆ ಹಲವು ಅನಿಷ್ಠ ಪದ್ದತಿಗಳು ಆಚರೆಯಲ್ಲಿದ್ದ ಈ ಕಾಲದಲ್ಲಿ ಬಸವಣ್ಣನವರು ತಮ್ಮ ಸರಳ ವಚನಗಳ ಮೂಲಕ ಸಮಾಜದಲ್ಲಿ ಬದಲಾವಣೆಯನ್ನು ತರಲು ಪ್ರಯತ್ನಿಸಿದರು. ಈ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿದರು. ವಿಶ್ವಗುರು ಬಸವಣ್ಣನವರು ಹಾಕಿಕೊಟ್ಟ ದಾರಿಯಲ್ಲಿ ಸಾಗಿದರೆ ಜೀವನ ಸುಖಮಯ ಹಾಗೂ ಸಮಾಜವು ಸುಂದರ. ಬಸವಣ್ಣನವರ ಅನುಭವ ಮಂಟಪ ಎಂಬುದೆ ಅದ್ಬುತ ಪರಿಕಲ್ಪನೆ. ಈ ಮೂಲಕ ಎಲ್ಲಾ ವರ್ಗದವರನ್ನು ಒಂದೆಡೆ ತರುವ ಪ್ರಯತ್ನವನ್ನು ಮಾಡಿದರು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಶ್ರೀಮತಿ ಶೋಭಾ ಆರ್, ಮಾನ್ಯ ಉಪಪ್ರಧಾನ ವ್ಯವಸ್ಥಾಪಕರು ಹಾಗೂ ಟಾಸ್ಕಫೋರ್ಸ್ ಉಸ್ತುವಾರಿಗಳು ಬೆಳಗಾವಿ ಹಾಗೂ ಕಲಬುರ್ಗಿ ವಿಭಾಗ, ಹಾಗೂ ಪ್ರಾಂತೀಯ ಕಛೇರಿ ಸಿಬ್ಬಂದಿಗಳು ಉಪಸ್ಥಿತರಿದ್ದರು.

**ಕಲಬುರಗಿ :** ದಿನಾಂಕ 10.05.2024 ರಂದು ಪ್ರಾಂತೀಯ ಕಛೇರಿ ಕಲಬುರಗಿಯಲ್ಲಿ ಜಗಜ್ಯೋತಿ ವಿಶ್ವಗುರು ಬಸವಣ್ಣನವರ 891ನೇಯ ಜಯಂತಿಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿಯವರು ಪೂಜೆಯನ್ನು ನೇರವೇರಿಸುವ ಮೂಲಕ ಆಚರಿಸಲಾಯಿತು. ಈ ಸಂದರ್ಭದಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು ಹಾಗೂ ಸಿಬ್ಬಂದಿ ವರ್ಗದವರೂ ಉಪಸ್ಥಿತರಿದ್ದರು.

# ‘ಜೂನ್-1 ವಿಶ್ವ ಹಾಲು ದಿನಾಚರಣೆ’

– ಶ್ರೀ ಸೂರ್ಯಕಾಂತ ರ‍್ಯಾಕಲೆ, ಪ್ರಾಂತೀಯ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ., ಕಲಬುರಗಿ.




ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾದಲ್ಲಿ ಅಧ್ಯಯನ ಮುಗಿಸಿ ಭಾರತಕ್ಕೆ ವಾಪಸ್ಸು ಆದ 27 ರ ಯುವಕ ಸರ್ಕಾರಿ ಸೇವೆಗೆ ಸೇರಿ ಆನಂದ್ ನಗರದಲ್ಲಿದ್ದ ಹಾಲಿನ ಪೌಡರ್ ಉತ್ಪಾದಿಸುವ ಸಣ್ಣ ಘಟಕವೊಂದರಲ್ಲಿ ತಂತ್ರಜ್ಞರಾಗಿ ಕೆಲಸಕ್ಕೆ ಸೇರಿ ರೈತರ ಕಷ್ಟಗಳನ್ನು ಗಮನಿಸಿ ಸರಕಾರಿ ಹುದ್ದೆಗೆ ರಾಜಿನಾಮೆ ನೀಡಿ ಸಹಕಾರದ ಅಸ್ತ್ರ ಬಳಸಿ ಭಾರತದ ಶ್ವೇತ(ಕ್ಷೀರ) ಕ್ರಾಂತಿಗೆ ನಾಂದಿ ಹಾಡಿದ ಪದ್ಮಶ್ರೀ ಪುರಸ್ಕೃತರಾದ ಡಾ. ವರ್ಗೀಸ್ ಕುರಿಯನ್ ರವರಗೆ ‘ಜೂನ–1 ವಿಶ್ವ ಹಾಲು ದಿನಾಚರಣೆ’ ನಿಮಿತ್ತ ಗೌರವಪೂರ್ವಕ ಲೇಖನ.

## ಪ್ರಾರಂಭಿಕ ಜೀವನ

ಡಾ. ವರ್ಗೀಸ್ ಕುರಿಯನ್ ಅವರು 1921ರ ನವೆಂಬರ್ 26ರಂದು ಕೇರಳದ ಕ್ಯಾಲಿಕಟ್ (ಈಗ ಕೋಳಿಕೋಡ್) ನಲ್ಲಿ ಸಿರಿಯಾದ ಶ್ರೀಮಂತ ಕುಟುಂಬದಲ್ಲಿ ಜನಿಸಿದರು. ಅವರ ತಂದೆ ಪುಥೆನ್ಪರಕ್ಕಲ್ ಕುರಿಯನ್ ಬ್ರಿಟಿಷ್ ಸರಕಾರದಲ್ಲಿ ಕೊಚ್ಚಿಯಲ್ಲಿ ಸಿವಿಲ್ ಸರ್ಜನ್ ಆಗಿದ್ದರು ಮತ್ತು ಅವರ ತಾಯಿ ಉನ್ನತ ಶಿಕ್ಷಣ ಪಡೆದ ವಿದ್ಯಾವಂತ ಮಹಿಳೆಯಾಗಿದ್ದರು ಮತ್ತು ಪಿಯಾನೋ ವಾದಕರಾಗಿದ್ದರು. ಡಾ. ಕುರಿಯನ್ ಅವರು ಮದ್ರಾಸನ ಲಯೋಲಾ ಕಾಲೇಜಿಗೆ ಸೇರಿದರು ಮತ್ತು ಭೌತಶಾಸ್ತ್ರದಲ್ಲಿ ಬಿಎಸ್ಸಿ ಪದವಿಯನ್ನು ಪಡೆದ ನಂತರ ಬಿ.ಇ. (ಮೆಕ್ಯಾನಿಕಲ್ ಇಂಜಿನಿಯರಿಂಗ್) ಮಾಡಿದರು. ಬಳಿಕ ಜಮ್ ಷೆಡ್ ಪುರದ ಟಾಟಾ ಸ್ಟೀಲ್ ತಾಂತ್ರಿಕ ಸಂಸ್ಥೆಯಲ್ಲಿ ಅಧ್ಯಯನ ಮಾಡಿ ಮೆಟಲರ್ಜಿಕಲ್ ಇಂಜಿನಿಯರಿಂಗ್‌ನಲ್ಲಿ ಎಂ.ಎಸ್ಸಿ. ಮಾಡಲು ಅವರು ಸರ್ಕಾರಿ ವಿದ್ಯಾರ್ಥಿವೇತನದಲ್ಲಿ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾಕ್ಕೆ ಹೋದರು ಅಲ್ಲಿ ಅವರು ಮೆಕ್ಯಾನಿಕಲ್ ಎಂಜಿನಿಯರಿಂಗನಲ್ಲಿ ಮಾಸ್ಟರ್ ಆಫ್ ಸೈನ್ಸ್ ಪದವಿಯನ್ನು ಪಡೆದರು. ಅವರು ಶಿಕ್ಷಣದ ಜೊತೆ ಕ್ರೀಡೆಗಳಲ್ಲಿ ಬಹಳ ಸಕ್ರಿಯರಾಗಿದ್ದರು. ಕ್ರಿಕೆಟ್, ಬ್ಯಾಡ್ಮಿಂಟನ್, ಬಾಕ್ಸಿಂಗ್ ಮತ್ತು ಟೆನ್ನಿಸನಲ್ಲಿ ಕಾಲೇಜನ್ನು ಪ್ರತಿನಿಧಿಸುತಿದ್ದರು.

## ವೃತ್ತಿ ಜೀವನ

ಅಮೆರಿಕದಿಂದ 1948ರಲ್ಲಿ ಭಾರತಕ್ಕೆ ಹಿಂದಿರುಗಿದ ವರ್ಗೀಸ್ ಕುರಿಯನ್‌ರು ಸರ್ಕಾರ ಪಾವತಿಸಿದ ವಿದ್ಯಾರ್ಥಿವೇತನಕ್ಕೆ ಪ್ರತಿಯಾಗಿ 1949 ರ ಮೇ 13 ರಂದು ಅವರು ಗುಜರಾತಿನ ಕೈರಾ ಜಿಲ್ಲೆಯ ಆನಂದ್ ನಗರದಲ್ಲಿದ್ದ ಸರಕಾರಿ ಸೌಮ್ಯದ ಹಾಲಿನ ಪೌಡರ್ ಉತ್ಪಾದಿಸುವ ಸಣ್ಣ ಘಟಕವೊಂದರಲ್ಲಿ ಡೈರಿ ವಿಭಾಗದಲ್ಲಿ ತಂತ್ರಜ್ಞರಾಗಿ ಕೆಲಸಕ್ಕೆ ಸೇರಿ, ಡೈರಿ ವಿಭಾಗದ ಅಧಿಕಾರಿಯಾಗಿ ಐದು ವರ್ಷಗಳನ್ನು ಕಳೆಯಬೇಕಾಗಿತ್ತು. ಆನಂದಗೆ ಆಗಮಿಸಿದಾಗ, ಹಾಲು ವಿತರಕರು ರೈತರನ್ನು ಶೋಷಿಸುತ್ತಿದ್ದಾರೆ ಮತ್ತು ಇಡೀ ಪ್ರದೇಶವನ್ನು ಪೊಲ್ಸನ್ ಬೆಣ್ಣೆಯನ್ನು ಮಾರಾಟ ಮಾಡುವ "ಪೆಸ್ತನ್ಜಿ ಎಡುಲ್ಜಿ" ಎಂಬ ಚುರುಕಾದ ಬುದ್ಧಿವಂತ ಉದ್ಯಮಿ ನಿಯಂತ್ರಿಸುತಿದ್ದ. ಉದ್ಯಮಿಯಿಂದ ಹಾಲು ಉತ್ಪಾದಕರು ಶೋಷನೆಯಲ್ಲಿ ರೊಷಿಹೊಗಿದ್ದರು, ಇದನ್ನು ಅರಿತು ರೈತರನ್ನು ಒಗ್ಗೂಡಿಸಲು ಮತ್ತು ಶೋಷಣೆಯ ವಿರುದ್ಧ ಸಹಕಾರಿ ಚಳವಳಿಯನ್ನು ರೂಪಿಸಲು ಪ್ರಯತ್ನಿಸುತ್ತಿದ್ದ ತ್ರಿಭುವನಾದಾಸ್ ಪಟೇಲ್ ಅವರ ವ್ಯಕ್ತಿತ್ವದಿಂದ ಡಾ. ಕುರಿಯನ್‌ರವರು. ಮಂತ್ರಮುಗ್ಧರಾದರು ಇದೇ ಸಮಯದಲ್ಲಿ ಕೈರಾ ಜಿಲ್ಲೆಯ ಹಾಲು ಉತ್ಪಾದನಾ ಸಂಘಟನೆಯು ತನ್ನ ಉಳಿಗಾಲಕ್ಕಾಗಿ ಕಷ್ಟಪಡುತ್ತಿದ್ದುದನ್ನು ಗಮನಿಸಿದ ಕುರಿಯನ್‌ರು, ಸರ್ಕಾರಿ ಸೇವೆಯನ್ನು ತ್ಯಜಿಸಿ ಆ ಸಂಸ್ಥೆಗೆ ಜೀವ ತುಂಬಲು ಸ್ವಯಂ ಪ್ರೇರಣೆಯಿಂದ ಮುಂದೆ ಬಂದರು. ವರ್ಗೀಸ್ ಕುರಿಯನ್‌ರ ಈ ಸಾಹಸ ‘ಅಮುಲ್’ ಎಂಬ ಹೊಸ ಚರಿತ್ರೆಗೆ ನಾಂದಿಹಾಡಿತು. ಹೀಗೆ ಅವರು ಡೈರಿ ಅಭಿವೃದ್ಧಿಯ ಸಹಕಾರಿ ಮಾದರಿಯನ್ನು ಭಾರತದ ಅತಿದೊಡ್ಡ ಮತ್ತು ಅತ್ಯಂತ ಯಶಸ್ವೀ ಉದ್ಯಮವನ್ನಾಗಿ ಮಾಡಿದರು. ಪ್ರಧಾನಿ ಜವಾಹರಲಾಲ್ ನೆಹರು ಅಮುಲ್ "ಫ್ಯಾಕ್ಟರಿ" ಉದ್ಘಾಟಿಸಲು ಆನಂದ್ ಗೆ ಭೇಟಿ ಕೊಟ್ಟಾಗ ಅವರ ಅದ್ಭುತ ಕಾರ್ಯವನ್ನು ಮೆಚ್ಚಿ ಅವರನ್ನು ಆಲಂಗಿಸಿದರು.

ಸಹಕಾರಿತನದ ಅಮುಲ್ ಮಾದರಿಯು ಎಷ್ಟು ಯಶಸ್ವಿಯಾಯಿತು ಅಂದರೆ ಲಾಲ್ ಬಹದ್ದೂರ್ ಶಾಸ್ತ್ರಿ ಅವರನ್ನು ರಾಷ್ಟ್ರೀಯ ಡೈರಿ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಲು ಪ್ರೇರೆಪಿಸಿ ಡಾ. ವರ್ಗೀಸ್ ಕುರಿಯನ್ ಅವರನ್ನು ಅದರ ಅಧ್ಯಕ್ಷರನ್ನಾಗಿ ನೇಮಿಸುವಂತೆ ಮಾಡಿತು. ಹೀಗೆ 1965ರ ವರ್ಷದಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರಿಂದ ರಾಷ್ಟ್ರೀಯ ಹಾಲು ಉತ್ಪಾದನಾ ನಿಗಮಕ್ಕೆ ಅಧ್ಯಕ್ಷರೆಂದು ನೇಮಿಸಲ್ಪಟ್ಟ ವರ್ಗಿಸ್ ಕುರಿಯನ್ನರು ದೇಶದಾಂತ್ಯ ಕ್ಷೀರ ಕ್ರಾಂತಿ ಮಾಡಿದರು. ಮುಂದೆ 1973ರಲ್ಲಿ ಗುಜರಾತ್ ಕೋ–ಆಪರೇಟಿವ್ ಮಿಲ್ಕ್ ಮಾರ್ಕೆಟಿಂಗ್ ಫೆಡರೇಶನ್ ಸ್ಥಾಪಿಸಿ ಹಾಲಿನ ಉತ್ಪನ್ನಗಳನ್ನು ಮಾರುಕಟ್ಟೆಯಲ್ಲಿ ಸಮರ್ಥವಾಗಿ ವಿತರಣೆಯಾಗುವಂತೆ ವ್ಯವಸ್ಥೆ ಮಾಡಿದರು. ಹೀಗೆ ವರ್ಗಿಸ್ ಕುರಿಯನ್‌ರು ಭಾರತವನ್ನು ಅತ್ಯಂತ ಬೃಹತ್ ಹಾಲು ಉತ್ಪಾದನಾ ದೇಶವನ್ನಾಗಿ ಮಾಡಿದರು.

24ನೇ ಪುಟಕ್ಕೆ.....

# ಮಹಾರಾಷ್ಟ್ರದ ಬುಲ್ಡಾನ ಅರ್ಬನ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಸಾಧನೆ ರಾಜ್ಯದ ಕ್ರೆಡಿಟ್ ಸಹಕಾರ ಸಂಘಗಳಿಗೆ ಮಾದರಿ ಹಾಗೂ ಅನುಕರಣೀಯ

– ಶ್ರೀ ಶರಣಗೌಡ ಜಿ. ಪಾಟೀಲ, ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.






**Shri. Radheshyam Devkishanji Chandak**
**Chairman**



**Dr. Sukesh Brijmohanji Zamwar**
**Chief Managing Director**

ಸಹಕಾರ ಸಂಘಗಳು ಒಂದು ಉತ್ತಮ ರಾಷ್ಟ್ರವನ್ನು ನಿರ್ಮಾಣ ಮಾಡುತ್ತವೆ ಎಂಬ ಐ.ಸಿ.ಎ ಹೇಳಿದ ಮಾತು ನಿಜವಾಗಿಸಲು ನಮ್ಮ ದೇಶದಲ್ಲಿ ಹಲವಾರು ಕ್ರೆಡಿಟ್ ಸಹಕಾರ ಸಂಸ್ಥೆಗಳು ಬೃಹತ ಪ್ರಮಾಣದಲ್ಲಿ ಬೆಳೆದು ಉತ್ತಮ ಸೇವೆ ಸಲ್ಲಿಸುತ್ತಿರುವುದು ನಿದರ್ಶನವಾಗಿದೆ. ಅದರಂತೆ ಅನೇಕ ಪಟ್ಟಣ ಸಹಕಾರ ಬ್ಯಾಂಕುಗಳು ವಿದೇಶಿ ಮಾದರಿಯನ್ನು ಅಳಡಿಸಿ ಗ್ರಾಹಕರಿಗೆ ಉತ್ತಮ ಸೇವೆ ನೀಡುವುದರ ಜೊತೆಗೆ ವಾಣಿಜ್ಯ ಬ್ಯಾಂಕುಗಳಿಗೆ ಯಾವುದೇ ರೀತಿಯಲ್ಲಿ ಕಡಿಮೆ ಏನಿಲ್ಲ. ಅದೇ ರೀತಿ ಕೃಷಿ ಪತ್ತಿನ ಸಹಕಾರ ಸಂಘಗಳು ಕೃಷಿಕರ ಬವಣೆಯನ್ನು ನಿಗಿಸಿವೆ. ದೇಶದ ಆಹಾರ ಉತ್ಪಾದನೆಯಲ್ಲಿ ಮಹತ್ವದ ಪಾತವನ್ನು ನಿರ್ವಹಿಸುವುದರ ಜೊತೆಗೆ ಆಹಾರ ಸ್ವಾವಲಂಬನೆಗೆ ಕಾರಣವಾಗಿವೆ. ಹಾಲು ಉತ್ಪಾದಕರ ಸಹಕಾರ ಸಂಸ್ಥೆಗಳು ದೇಶದ ಹೈನುಗಾರಿಕೆಯಲ್ಲಿ ಕ್ರಾಂತಿಯನ್ನೆ ಮಾಡಿವೆ. ಇವತ್ತು ಭಾರತ ವಿಶ್ವದ ಹಾಲು ಉತ್ಪಾದನೆಯಲ್ಲಿ ನಂ 1 ಆಗಿರುವುದು ಹೆಮ್ಮೆಯ ವಿಷಯ. ರೈತರ ಆರ್ಥಿಕ ಅಭಿವೃದ್ಧಿಗೆ ನೆರವಾಗಿವೆ. ವಿಶೇಷವಾಗಿ ಮಹಿಳಾ ಸಬಲೀಕರಣಕ್ಕೆ ಕಾರಣವಾಗಿವ. ಹೀಗಾಗಿ ಸಹಕಾರ ಸಂಸ್ಥೆಗಳಿಂದ ನಮ್ಮ ದೇಶದ ಆರ್ಥಿಕ ಹಾಗೂ ಸಾಮಾಜಿಕ ಬದಲಾವಣೆಗೆ ಸಾಧಿಸಲಾಗುತ್ತಿದೆ.

ಸಹಕಾರ ಕ್ಷೇತ್ರದ ಬೆಳವಣಿಗೆಯಲ್ಲಿ ಮಹಾರಾಷ್ಟ್ರ ನಂ 1 ಆಗಿದೆ ಹಾಗೂ ಗುಜರಾತ ನಂ 2 ನಲ್ಲಿ ಇದೆ ಕರ್ನಾಟಕ 3ನೇ ಸ್ಥಾನದಲ್ಲಿ ಎಂದು ಹೇಳಲಾಗುತ್ತಿದೆ. ಮಹಾರಾಷ್ಟ್ರ ಹಾಗೂ ಗುಜರಾತಗಳಲ್ಲಿ ಅಧ್ಯಯನ ಯೋಗ್ಯ ಹಾಗೂ ಇತರರಿಗೆ ಮಾದರಿಯೆನಿಸುವ ಹಲವಾರು ಸಹಕಾರ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಸಹಕಾರಿ ಕ್ಷೇತ್ರದ ಎಲ್ಲ ಆಯಾಮಗಳಲ್ಲೂ ಈ ರಾಜ್ಯಗಳ ಜನ ಸಾಧನೆಗಳನ್ನು ಮಾಡಿದ್ದಾರೆ. ಪ್ರಯೋಜನ ಪಡೆದಿದ್ದಾರೆ. ಇತರರಿಗೆ ಮಾದರಿಯೆನಿಸಿದ್ದಾರೆ.

ಮಹಾರಾಷ್ಟ್ರದ ಬುಲ್ಡಾನಾ ಅರ್ಬನ್ ಕ್ರೆಡಿಟ್ ಸಹಕಾರ ಸಂಘವು ಉತ್ತಮ ಹಾಗೂ ಬೃಹತ್ ಪ್ರಮಾಣದ ಕಾರ್ಯಚಟುವಟಿಕೆಗಳನ್ನು ಮಾಡುತ್ತಿರುವ ಸಹಕಾರಿ ಸಂಘಗಳ ಸಾಲಿನಲ್ಲಿ ಸೇರುತ್ತದೆ. ಸಹಕಾರ ಕ್ಷೇತ್ರದ ಮೂಲಕ ಅಸಾಧ್ಯವಾದುದನ್ನು ಸಾಧಿಸಬಹುದು ಎಂಬುದಕ್ಕೆ ಈ ಸಂಘ ಉದಾಹಣೆಯಾಗಿದೆ.

1989 ಆಗಸ್ಟ್ 15 ರಂದು ಕೇವಲ 72 ಜನರಿಂದ ಕೇವಲ 12,000 ರೂಗಳ ಷೇರು ಬಂಡವಾಳದೊಂದಿಗೆ ಶ್ರೀ ರಾಧೇಶಾಮ ಚಂಡಕ ರವರ ನೇತೃತ್ವದಲ್ಲಿ ಪ್ರಾರಂಭವಾದ ಈ ಸೊಸಾಯಿಟಿ ಇಂದು ಬೃಹತ್ತಾಗಿ ಬೆಳೆದಿರುವುದು ಸಹಕಾರಿಗಳ ಶ್ರಮಕ್ಕೆ ತಕ್ಕ ಪ್ರತಿಫಲ ದೊರಕಿದೆ. ಒಂದು ಉತ್ತಮ ಕ್ರೆಡಿಟ್ ಸಹಕಾರ ಸಂಘವಾಗಿ ಹೆಮ್ಮರವಾಗಿ ಬೆಳೆದಿದೆ. ಈ ಬೆಳವಣಿಗೆಗೆ ಭದ್ರ ಬುನಾದಿಯಂತೆ ಈ ಸಂಘವು ಮಾನವೀಯತೆಗೆ ಮಹತ್ವವ್ನು ನೀಡುತ್ತ ಸಾಂಪ್ರದಾಯಿಕ ಮೌಲ್ಯಗಳನ್ನು ಪಾಲಿಸುತ್ತ ವೃತ್ತಿಪರತೆಯನ್ನು ರೂಢಿಸಿಕೊಂಡಿರುವುದು ವಿಶೇಷ. ಸಾಮಾಜಿಕ ಜವಾಬ್ದಾರಿಯನ್ನು ಆದ್ಯತೆಯ ಮೇಲೆ ನಿರ್ವಹಿಸುವ ವ್ಯವಸ್ಥೆಯನ್ನು ರೂಢಿಸಿಕೊಂಡಿದೆ. ಉತ್ತಮ ದೂರದೃಷ್ಟಿಯ ನಾಯಕತ್ವ ಹೊಂದಿದೆ. ಗ್ರಾಹಕರ ಸೇವೆ ಪ್ರಥಮ ಆದ್ಯತೆಯನ್ನು ನೀಡುತ್ತದೆ. ಅತ್ಯಂತ ಹೊಸ ಹಾಗೂ ವಿಶ್ವ ಮಟ್ಟದ ತಾಂತ್ರಿಕತೆಯನ್ನು ಅಳವಡಿಸಿಕೊಂಡಿದೆ. ಕೂಡಿಬಾಳುವಿಕೆಯನ್ನು ಆಚರಣೆಗೆ ಹೆಚ್ಚು ಮಹತ್ವ ನೀಡುವ ಈ ಸಹಕಾರ ಸಂಘ ಟೀಮ್ ವರ್ಕಗೆ ಹೆಚ್ಚಿನ ಮಹತ್ವ ನೀಡುತ್ತದೆ. ದೇಶದ ಅತ್ಯಂತ ದೊಡ್ಡ ಕ್ರೆಡಿಟ್ ಸಹಕಾರ ಸಂಘಗಳ ಸಾಲಿನಲ್ಲಿ ಈ ಸಂಘವನ್ನು

ಗುರುತಿಸಲಾಗಿದೆ.

**ಈ ಸಂಘದ ಸಂಕೀಪ್ತ ಪ್ರಗತಿಯನ್ನು ನೋಡಿದಾಗ ಸಹಕಾರಿಗಳು ಆಶ್ಚರ್ಯ ಹಾಗೂ ಹೆಮ್ಮೆ**

ದೇಶದ 9 ರಾಜ್ಯಗಳಾದ ಮಹಾರಾಷ್ಟ್ರ, ಛತ್ತೀಸ್‌ಗಡ, ಮಧ್ಯಪ್ರದೇಶ, ರಾಜಸ್ತಾನ, ಗುಜರಾತ್, ತೆಲಂಗಾಣ, ಗೋವಾ, ಅಂಡಮಾನ ಮತ್ತು ನಿಕೋಬಾರ್, ಆಂದ್ರಪ್ರದೇಶ ಕಾರ್ಯವ್ಯಾಪ್ತಿಯನ್ನು ಈ ಸಂಘ ಹೊಂದಿದೆ. ಪ್ರಸಕ್ತ 37,401 ಸದಸ್ಯರನ್ನು 163.71 ಕೋಟಿ ರೂಗಳ ಷೇರು ಬಂಡವಾಳವನ್ನು 10,223 ಕೋಟಿಗಳ ಠೇವಣಿಗಳನ್ನು ಹೊಂದಿದೆ. 300 ಗೋಡೌನಗಳನ್ನು 5000 ಸಿಬ್ಬಂದಿಯವರನ್ನು ಹೊಂದಿದೆ. 470 ಶಾಖೆಗಳನ್ನು ಹೊಂದಿದೆ. ಸಾಲ ಮರುಪಾವತಿ 97 ನಿಂದ 98% ಇದ್ದು ಸದಸ್ಯರ ಸರ್ವತೋಮುಖ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದೆ.

ಸದಸ್ಯರ ಹಾಗೂ ಸಿಬ್ಬಂದಿಯವರ ಮಕ್ಕಳುಗಳಿಗಾಗಿ ಶಾಲಾ ಕಾಲೇಜುಗಳನ್ನು ನಡೆಸುತ್ತಿದೆ. ಆರೋಗ್ಯ ಕೇಂದ್ರಗಳನ್ನು ನಡೆಸುತ್ತಿದೆ. ಸದಸ್ಯರಿಗೆ ಅನುಕೂಲವಾಗುವಂತೆ ತರಕಾರಿ ಹಾಗೂ ದಿನಸಿ ವಸ್ತುಗಳ ಮತ್ತು ಪುಸ್ತಕಗಳ ಮತ್ತು ಬಟ್ಟೆ ಮಾರಾಟ ಕೇಂದ್ರಗಳ ವ್ಯವಸ್ಥೆ ಜೊತೆಗೆ ಸಾರಿಗೆ ವ್ಯವಸ್ಥೆ ಅಂಬುಲೆನ್ಸ ವ್ಯವಸ್ಥೆಗಳನ್ನು ಈ ಸಂಘ ಮಾಡಿದೆ. ಚಿಕ್ಕ ಮಕ್ಕಳ ಆರೈಕೆ ಹಾಗೂ ಅವುಗಳ ರಕ್ಷಣೆ ಮಾಡುವ ಶಿಶುಪಾಲನಾ ಕೇಂದ್ರಗಳನ್ನು ನಡೆಸುತ್ತಿದೆ. ಮಕ್ಕಳಿಗಾಗಿ ಆಟದ ಮೈದಾನ ಸಲಕರಣೆಗಳ ವ್ಯವಸ್ಥೆಯನ್ನು ಮಾಡುವುದರ ಜೊತೆಗೆ ಮನರಂಜನಾ ಕೇಂದ್ರಗಳನ್ನು ನಡೆಸುತ್ತಿದೆ. ಅಂಗವಿಕಲರಿಗೆ ಕೃತಕ ಕಾಲು ಜೋಡಿಸುವ ವ್ಯವಸ್ಥೆಮಾಡಿದ್ದಾರೆ. ರೇಲ್ವೆ ರಿಸರ್ವೆಶನ್ ಮಾಡುತ್ತಾರೆ. ಮೃತದೇಹಗಳನ್ನ ಸಾಗಿಸಲು ವಾಹನ ವ್ಯವಸ್ಥೆ ಇದೆ. ಖಾಸಗಿ ಲೇವಾದೇವಿದಾರರಿಂದ ಸದಸ್ಯರಿಗೆ ರಕ್ಷಣೆ ನೀಡಲಾಗುತ್ತಿದೆ. ಎಲ್ಲಕ್ಕಿಂತ ಮೇಲಾಗಿ ಸದಸ್ಯರಿಗಾಗಿ ತಿರುಪತಿ ದೇವಸ್ಥಾನಕೆ ಯಾತ್ರೆ ಕರೆದುಕೊಂಡು ಹೋಗುವ ವ್ಯವಸ್ಥೆ ತಿರುಪತಿಯಲ್ಲಿ ವಸತಿ ವ್ಯವಸ್ಥೆಗಳನ್ನು ಮಾಡಿದ್ದಾರೆ.

ಈ ಸಂಘದ ಆಡಳಿತ ಮಂಡಳಿಯಲ್ಲಿ ಸಮಿತಿಯಲ್ಲಿ 15 ಜನ ಸದಸ್ಯರಿದ್ದಾರೆ. ಮುಖ್ಯ ವ್ಯವಸ್ಥಾಪಕ ನಿರ್ದೇಶಕರಾಗಿ ಡಾ. ಸುಕೇಶ ಬ್ರಿಜಮೋಹನ ಜಾಮ್ವಾರ್ ರವರು ಕಾರ್ಯನಿರ್ವಹಿಸುತಿದ್ದಾರೆ.

ಸಂಪರ್ಕ ದೂರವಾಣಿ : 07262 – 242705, 243705 ರಾಜ್ಯದ ಸೌಹಾರ್ದ ಸಹಕಾರಿಗಳು ಇಂತಹ ಸಹಕಾರಿ ಸಂಸ್ಥೆಗಳನ್ನು ಭೇಟಿ ಮಾಡಿ ಅಧ್ಯಯನ ಮಾಡಿ ತಮ್ಮ ಸಹಕಾರಿಗಳಲ್ಲೂ ಇಂತಹ ಅನೇಕ ಕಾರ್ಯಕ್ರಮಗಳನ್ನು ಅಳವಡಿಸಲು ಕ್ರಮವಿಡಬಹುದಾಗಿದೆ.

**ಸಹಕಾರ ಕ್ಷೇತ್ರದ ಗುರಿ**

ಮಹಾತ್ಮಾ ಗಾಂಧಿಜೀಯವರು ಹೇಳಿದಂತೆ "ಅಸಮಾನತೆಯನ್ನು ಹೋಗಲಾಡಿಸಿ ಸಮಾಜವನ್ನು ಬಲಪಡಿಸುವುದು, ಅಭಿವೃದ್ಧಿ ಸಾಧಿಸುವುದು, ಸಮಾಜದಲ್ಲಿ ಸುಖ, ಸಂತೋಷವನ್ನುಂಟು ಮಾಡುವುದು ಮತ್ತು ಸೌಹಾರ್ದತೆಯ ಬಾಳು ಸಾಧಿಸುವುದು ಸಹಕಾರ ಕ್ಷೇತ್ರದ ಗುರಿ."

---

.....22ನೇ ಪುಟದಿಂದ

ಕುರಿಯನ್ ಮತ್ತು ಅವರ ತಂಡದವರು ಹಸುವಿನ ಹಾಲಿನ ಬದಲಾಗಿ ಎಮ್ಮೆಯ ಹಾಲಿನಿಂದ ಹಾಲಿನ ಪುಡಿ ಪ್ರಕ್ರಿಯೆಯನ್ನು ಕಂಡು ಹಿಡಿದರು. ಅಮುಲ್ ಯಶಸ್ವಿಯಾಗಲು ಹಸುವಿನ ಹಾಲು ಬಳಸುವ ನೆಸ್ಲೆ ವಿರುದ್ಧ ಉತ್ತಮ ಪೈಪೋಟಿ ನೀಡಲು ಇದೇ ಪ್ರಮುಖ ಕಾರಣವಾಯಿತು. ಯುರೋಪ್‌ನಲ್ಲಿ ಹಸುವಿನ ಹಾಲು ಹೇರಳವಾಗಿದ್ದರೆ ಭಾರತದಲ್ಲಿ, ಎಮ್ಮೆ ಹಾಲು ಪ್ರಮುಖ ಕಚ್ಚಾ ಪದಾರ್ಥವಾಯಿತು.

ಅತ್ಯಂತ ಕುಶಲ ಹಾಗೂ ಶ್ರಮಭರಿತ ದುಡಿಮೆಗೆ ಹೆಸರಾದ ವರ್ಗೀಸ್ ಕುರಿಯನ್ನರು ಯಾವುದೇ ಪ್ರತಿಕೂಲ ಪರಿಸ್ಥಿತಿ ಇದ್ದಾಗ್ಯೂ ಹೇಗೆ ಒಬ್ಬ ವ್ಯಕ್ತಿ ಇಡೀ ಸಮಾಜಕ್ಕೆ ದೇಶಕ್ಕೆ ದಾರಿ ದೀಪವಾಗಬಹುದು ಎಂಬುದನ್ನು ಭಾರತೀಯ ಸಮಾಜದಲ್ಲಿ ಸಮರ್ಥವಾಗಿ ಪ್ರತಿಬಿಂಬಿಸಿದರು, ಭಾರತೀಯ ಗ್ರಾಮೀಣ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಹಲವಾರು ಸಂಘಟನೆಗಳಿಗೆ ನೇತಾರರಾಗಿ ಮಾರ್ಗದರ್ಶನ ಮಾಡಿದರು.

**ಪ್ರಶಸ್ತಿಗಳು**

ಡಾ. ಕುರಿಯನ್ ಯಾವಾಗಲೂ ತಮ್ಮನ್ನು ತಾವು ರೈತರ ಪರವಾಗಿ ಸಮೃದ್ಧಿಯನ್ನು ತರಲು ಏನು ಬೇಕಾದರೂ ಮಾಡುವ ನೌಕರರಂತೆ ಪರಿಗಣಿಸುತ್ತಿದ್ದರು. ಐವತ್ತು ವರ್ಷಗಳ ತಮ್ಮ ಸೇವೆಯಲ್ಲಿ ಅವರು ಕಲಿಕೆ ಎಂದಿಗೂ ನಿಲ್ಲಬಾರದು ಎಂದು ನಂಬಿದರು. ಇಂತಹ ಮಹಾಚೇತನಗೆ ವಿಶ್ವದ ವಿವಿಧ ಸಂಸ್ಥೆಗಳಿಂದ 15 ಗೌರವ ಪದವಿಗಳನ್ನು ನೀಡಿ ಗೌರವಿಸಲಾಗಿದೆ. ಅವರ ನಿರಂತರ ವ್ಯಕ್ತಿತ್ವ, ಉತ್ಸಾಹ, ವರ್ಚಸ್ಸು ಮತ್ತು ಅಸಾಧ್ಯವಾದುದನ್ನು ಸಾಧ್ಯವಾಗುವಂತೆ ಪರಿವರ್ತಿಸುವ ದೃಢನಿಶ್ಚಯ ದಿಂದಾಗಿ, ಸಮುದಾಯ ನಾಯಕತ್ವಕ್ಕಾಗಿ ರಾಮನ್ ಮ್ಯಾಗ್ಸೆಸೆ ಪ್ರಶಸ್ತಿ (1963), ಭಾರತ ಸರಕಾರದ ಪ್ರತಿಷ್ಠಿತ ಪ್ರಶಸ್ತಿಗಳಾದ ಪದ್ಮಶ್ರೀ (1965), ಪದ್ಮಭೂಷಣ (1966), ಪದ್ಮವಿಭೂಷಣ (1999), ಕೃಷಿ ರತ್ನ ಪ್ರಶಸ್ತಿ (1986), ವಿಶ್ವ ಆಹಾರ ಪ್ರಶಸ್ತಿ (1989), ಎಕನಾಮಿಕ್ ಟೈಮ್ಸ್ ಪ್ರಶಸ್ತಿ (2001) ಮತ್ತು ಇತರೆ ಹಲವಾರು ಪ್ರಶಸ್ತಿಗಳಿಂದ ಗೌರವಕ್ಕೆ ಭಾಜನರಾದರು, ಆದರೆ ದೇಶದ ಜನರು ಅವರಿಗೆ ನೀಡಿದ ಅತ್ಯುತ್ತಮ ಪ್ರಶಸ್ತಿಯೆಂದರೆ "ಮಿಲ್ಕ್ ಮ್ಯಾನ್ ಆಫ್ ಇಂಡಿಯಾ" ಎಂಬ ಬಿರುದು.

ರಾಷ್ಟ್ರ ಸೇವೆಗಾಗಿ ರೈತರಿಗಾಗಿ ಜೀವನ ಪರ್ಯಂತ ಹೊರಾಡಿದ ಡಾ. ವರ್ಗೀಸ್ ಕುರಿಯನ್ ಅವರು 2012ರ ಸೆಪ್ಟೆಂಬರ್ 9ರಂದು ಆನಂದ್‌ನಲ್ಲಿ ಕೊನೆಯುಸಿರೆಳೆದರು. ಡಾ. ವರ್ಗೀಸ್ ಕುರಿಯನ್ ಅವರು ಹಾಲಿನ ಅರ್ಥವನ್ನು ಆರ್ಥಿಕ ಅಭಿವೃದ್ಧಿಗೆ ಪ್ರಬಲ ಸಾಧನವಾಗಿ ಮರು ವ್ಯಾಖ್ಯಾನಿಸಿದ ವ್ಯಕ್ತಿ ಎಂದು ಯಾವಾಗಲೂ ನಮ್ಮೆಲ್ಲರಲ್ಲಿ ನೆನಪಿನಲ್ಲಿ ಉಳಿಯುತ್ತಾರೆ.

# ಸಹಕಾರ ಚಳುವಳಿಯ ಪ್ರಾರಂಭ, ಬೆಳವಣಿಗೆ ಮತ್ತು ಪ್ರಸಕ್ತ ಸನ್ನಿವೇಶ

– ಶ್ರೀಮತಿ ದಿವ್ಯ ಟಿ, ಹಿರಿಯ ಸಹಾಯಕಿ, ಕರಾಸೌಸಂಸನಿ., ಬೆಂಗಳೂರು.

**ಪ್ರಪಂಚ :**

ಸಹಕಾರ ಚಳುವಳಿಯ ಇತಿಹಾಸವು ಪ್ರಪಂಚದಾದ್ಯಂತ ಸಹಕಾರಿಗಳ ಮೂಲ ಮತ್ತು ಇತಿಹಾಸಕ್ಕೆ ಸಂಬಂಧಿಸಿದೆ. ಪರಸ್ಪರ ಸಹಕಾರ ವ್ಯವಸ್ಥೆಗಳು ಮತ್ತು ಸಹಕಾರದ ತತ್ವಗಳು ಬಹಳ ಹಿಂದೆಯೇ ಅಸ್ತಿತ್ವದಲ್ಲಿದ್ದರೂ ಸಹ, ಸಹಕಾರ ಚಳುವಳಿಯು ವ್ಯವಹಾರ ಸಂಸ್ಥೆಗೆ ಸಹಕಾರ ತತ್ವಗಳ ಅನ್ವಯದೊಂದಿಗೆ ಪ್ರಾರಂಭವಾಯಿತು. ಆಧುನಿಕ ಸಹಕಾರ ಚಳುವಳಿಯ ಉಗಮಕ್ಕೆ ಬ್ರಿಟನ್ ಗ್ರಾಹಕರ ಸಹಕಾರ ಚಳುವಳಿ ನಾಂದಿ ಹಾಡಿದರೆ, ಜರ್ಮನಿ ದೇಶ ಕೃಷಿ ಪತ್ತಿನ ಹಾಗೂ ಪಟ್ಟಣ ಸಹಕಾರ ಸಂಘಗಳಿಗೆ ಭದ್ರ ಬುನಾದಿ ಹಾಕಿತು.

**ಸಹಕಾರದ ಏಳು ತತ್ವಗಳು**

1. ಮುಕ್ತ ಹಾಗೂ ಸ್ವಯಂ ಪ್ರೇರಿತ ಸದಸ್ಯತ್ವ 2. ಪ್ರಜಾಸತ್ತಾತ್ಮಕ ಸದಸ್ಯರ ಹತೋಟಿ 3. ಆರ್ಥಿಕ ಚಟುವಟಿಕೆಗಳಲ್ಲಿ ಸದಸ್ಯರ ಪಾಲು 4. ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ. 5. ಸಹಕಾರ ಶಿಕ್ಷಣ, ತರಬೇತಿ ಮತ್ತು ಪ್ರಚಾರ 6. ಸಹಕಾರಿಗಳಲ್ಲಿ ಪರಸ್ಪರ ಕ್ರಿಯಾತ್ಮಕ ಸಹಕಾರ 7. ಸಾಮಾಜಿಕ ಕಳಕಳಿ

ವಿದೇಶದಲ್ಲಿನ ಸಹಕಾರ ಚಳುವಳಿಯ ಅಗ್ರಸ್ಥಾನ ರಾಬರ್ಟ್ ಓವೆನ್‌ಗೆ ಸಲ್ಲುತ್ತದೆ. ಕೈಗಾರಿಕಾ ಕ್ರಾಂತಿಯಾದ ನಂತರ ಶ್ರೀಮಂತ ಮತ್ತು ಕಾರ್ಮಿಕ ವರ್ಗ ಎಂದು ಎರಡು ಗುಂಪುಗಳಾಗಿ ಕಾರ್ಮಿಕರು ನಿರಂತರ ಶೋಷಣೆಗೆ ಒಳಗಾದಾಗ ರಾಬರ್ಟ್ ಓವೆನ್‌ರವರು ಕಾರ್ಮಿಕರಿಗೆ ಕೈತುಂಬ ಸಂಬಳ, ಉತ್ತಮ ಶಿಕ್ಷಣ, ವಸತಿ ಸೌಲಭ್ಯ ಹಾಗೂ ಇತರೆ ಕಾರ್ಮಿಕ ಕಲ್ಯಾಣ ಯೋಜನೆಯನ್ನು ಕಾರ್ಯಗತ ಮಾಡಲು "ಸಹಕಾರ ಗ್ರಾಮ" ಸ್ಥಾಪಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

1844ರಲ್ಲಿ ರಾಕ್‌ಡೇಲ್ ಪಯೋನಿಯರ್ಸ್ ಇವರು ಇಂಗ್ಲೆಂಡ್‌ನ ಲಂಕಾಷೈರ್‌ನಲ್ಲಿ ಆಧುನಿಕ ಸಹಕಾರ ಚಳುವಳಿಯನ್ನು ಸ್ಥಾಪಿಸಿದರು. ಸಮುದಾಯಕ್ಕೆ ಅನುಕೂಲವಾಗುವಂತೆ ಕಳಪೆ–ಗುಣಮಟ್ಟದ ಮತ್ತು ಕಲಬೆರಕೆ ಆಹಾರ ಇವುಗಳ ವಿರುದ್ಧ ಕೈಗೆಟುಕುವ ಪರ್ಯಾಯವನ್ನು ಒದಗಿಸಲು ಕ್ರಮ ಕೈಗೊಂಡರು. ಅಂದಿನಿಂದ, ಸಹಕಾರ ಚಳುವಳಿಯು ಪ್ರವರ್ಧಮಾನಕ್ಕೆ ಬಂದು, ಪ್ರಪಂಚದಾದ್ಯಂತ ವಿಸ್ತರಿಸಿದೆ ಮತ್ತು ಆರ್ಥಿಕತೆಯ ಎಲ್ಲಾ ಕ್ಷೇತ್ರಗಳನ್ನು ಒಳಗೊಂಡಿದೆ.

ಜರ್ಮನಿಯಲ್ಲಿ ಸ್ವತಂತ್ರವಾಗಿ ರೂಪಿಸಲಾದ ಸಹಕಾರ ಮಾದರಿಯನ್ನು ಫ್ರೆಡ್ರಿಕ್ ವಿಲ್ಹೆಲ್ಮ್ ರೈಫಿಸೆನ್ ಮತ್ತು ಫ್ರಾಂಜ್ ಹರ್ಮನ್ ಷುಲ್ಜ್–ಡೆಲಿಚ್ ಇವರು ಅಭಿವೃದ್ಧಿಪಡಿಸಿದರು. ರೈಫಿಸೆನ್ ಮತ್ತು ಷುಲ್ಜ್–ಡೆಲಿಚ್ ಮೂಲತಃ 1862ರಲ್ಲಿ ಸಾಲ ಒಕ್ಕೂಟಗಳನ್ನು ರಚಿಸಿದರು. ಅಂದಿನಿಂದ ಈ ಮಾದರಿಯು ಇತರ ಕ್ಷೇತ್ರಗಳಾಗಿ ಬೆಳೆಯಿತು ಮತ್ತು ಪ್ರಪಂಚದಾದ್ಯಂತದ ಆರ್ಥಿಕ ಸಹಕಾರಿಗಳ ಬೆಳವಣಿಗೆಗೆ ಸ್ಫೂರ್ತಿ ನೀಡಿತು.

ಸಹಕಾರಿಗಳ ವ್ಯವಹಾರದ ಮಾರ್ಗಕ್ಕೆ ಆಧಾರವಾಗಿರುವ ತತ್ವಗಳು ಇಂದಿಗೂ ಎಲ್ಲಾ ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸುವ ಅಡಿಪಾಯಗಳಾಗಿ ಅಂಗೀಕರಿಸಲ್ಪಟ್ಟಿವೆ. ಈ ತತ್ವಗಳನ್ನು ಪರಿಷ್ಕರಿಸಲಾಗಿದೆ ಮತ್ತು ನವೀಕರಿಸಲಾಗಿದೆ, ಆದರೆ 1844ರಲ್ಲಿ ಪಯೋನಿಯರ್‌ಗಳು ಅಭ್ಯಾಸ ಮಾಡಿರುವಂತೆ ಮೂಲಭೂತವಾಗಿ ಉಳಿದಿದೆ.

ಇಂದು ಸಹಕಾರಿ ವಲಯವು ಸುಮಾರು 1 ಬಿಲಿಯನ್ ಸದಸ್ಯರನ್ನು ಹೊಂದಿದೆ ಎಂದು ಅಂದಾಜಿಸಲಾಗಿದೆ. ಸಹಕಾರ ಸಂಸ್ಥೆಗಳು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಜಗತ್ತಿನಾದ್ಯಂತ 250 ಮಿಲಿಯನ್ ಜನರಿಗೆ ಉದ್ಯೋಗ ನೀಡಿದೆ. 2014ರ ವರ್ಲ್ಡ್ ಕೋ–ಆಪರೇಟಿವ್ ಮಾನಿಟರ್ ಬಹಿರಂಗಪಡಿಸಿದಂತೆ ವಿಶ್ವದ ಅಗ್ರ 300 ಸಹಕಾರಿಗಳು ಸ್ವತಃ ಅಂದಾಜು ಜಾಗತಿಕ ವಹಿವಾಟು 2.2 ಟ್ರಿಲಿಯನ್ ಯುಎಸ್‌ಡಿ ಅನ್ನು ಹೊಂದಿವೆ.

**ಭಾರತ :**

ಭಾರತದಲ್ಲಿನ ಸಹಕಾರಿ ಚಳುವಳಿಯು ಶ್ರೀಮಂತ ಇತಿಹಾಸವನ್ನು ಹೊಂದಿದೆ. ಇದು ದೇಶದ ಸಾಮಾಜಿಕ–ಆರ್ಥಿಕ ಅಭಿವೃದ್ಧಿಯೊಂದಿಗೆ ಆಳವಾಗಿ ಹೆಣೆದುಕೊಂಡಿದೆ. ಇದು ಸ್ವಾತಂತ್ರ್ಯ ಪೂರ್ವದಿಂದ ಇಂದಿನವರೆಗೆ ವ್ಯಾಪಿಸಿದೆ, ವಿವಿಧ ಹಂತಗಳ ಮೂಲಕ ವಿಕಸನಗೊಳ್ಳುತ್ತಿದೆ ಮತ್ತು ಸಮಾಜದ ಬದಲಾಗುತ್ತಿರುವ ಅಗತ್ಯಗಳಿಗೆ ಹೊಂದಿಕೊಳ್ಳುತ್ತಿದೆ. ಪಂಚವಾರ್ಷಿಕ ಯೋಜನೆಗಳ ಮೂಲಕ ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಲಾಯಿತು ಮತ್ತು ಇದರ ಪರಿಣಾಮವಾಗಿ ಸಹಕಾರಿ ಸಂಸ್ಥೆಗಳು ವಿವಿಧ ಕ್ಷೇತ್ರಗಳಲ್ಲಿ ದೊಡ್ಡ ವಿಸ್ತರಣೆಯನ್ನು ದಾಖಲಿಸಿದವು. ಭಾರತದಲ್ಲಿ ಸಹಕಾರ ಚಳುವಳಿಯ ಇತಿಹಾಸದಲ್ಲಿ ಪ್ರಮುಖ ಹಂತಗಳ ಅವಲೋಕನ ಇಲ್ಲಿದೆ:

**ಆರಂಭಿಕ ಆರಂಭ (ಸ್ವಾತಂತ್ರ್ಯ ಪೂರ್ವ ಯುಗ) :**

20ನೇ ಶತಮಾನದ ಆರಂಭದಲ್ಲಿ ಭಾರತದಲ್ಲಿ ಸಹಕಾರ ಚಳುವಳಿಯು 1900ರ ದಶಕದ ಆರಂಭದಲ್ಲಿ ಪ್ರಾರಂಭವಾಯಿತು. ಬ್ರಿಟೀಷ್ ಸರ್ಕಾರವು 1904ರಲ್ಲಿ ಸಹಕಾರಿ ಕ್ರೆಡಿಟ್ ಸೊಸೈಟಿಗಳ ಕಾಯಿದೆಯನ್ನು ಜಾರಿಗೊಳಿಸಿದ್ದು ಔಪಚಾರಿಕ ಆರಂಭವನ್ನು ಗುರುತಿಸಿತು. ಈ ಕಾಯಿದೆಯು ರೈತರಿಗೆ ಆರ್ಥಿಕ ನೆರವು ನೀಡಲು ಮತ್ತು ಲೇವಾದೇವಿಗಾರರ ಪ್ರಭಾವವನ್ನು ನಿಗ್ರಹಿಸುವ ಗುರಿಯನ್ನು ಹೊಂದಿತ್ತು. ಭಾರತದ ಪ್ರಥಮ ಕೃಷಿ ಸಹಕಾರ ಸಂಘವನ್ನು ಕರ್ನಾಟಕದ ಅಂದಿನ ಧಾರವಾಡ ಜಿಲ್ಲೆಯ ಗದಗ ತಾಲ್ಲೂಕಿನ ಕಣಗಿನಹಾಳ ಎಂಬ ಗ್ರಾಮದಲ್ಲಿ ದಿನಾಂಕ 08 ಮೇ 1905ರಂದು ಪ್ರಾರಂಭವಾಯಿತು. ನಂತರ ದೇಶದಾದ್ಯಂತ ಅನೇಕ ಕೃಷಿ ಸಹಕಾರ ಸಂಘಗಳ ಸ್ಥಾಪನೆಯಾಯಿತು.

**1912ರ ಸಹಕಾರ ಸಂಘಗಳ ಕಾಯಿದೆ :** ಆರಂಭಿಕ ಸಹಕಾರ ಸಂಘಗಳ ಯಶಸ್ಸು 1912ರ ಸಹಕಾರ ಸಂಘಗಳ ಕಾಯಿದೆಗೆ ಕಾರಣವಾಯಿತು. ಇದು ಮಾರುಕಟ್ಟೆ, ಸಂಸ್ಕರಣೆ ಮತ್ತು ಇತರ ಆರ್ಥಿಕ ಚಟುವಟಿಕೆಗಳಂತಹ ಸಾಲೇತರ ಚಟುವಟಿಕೆಗಳನ್ನು ಸೇರಿಸಲು ಸಹಕಾರಿಗಳ ವ್ಯಾಪ್ತಿಯನ್ನು ವಿಸ್ತರಿಸಿತು.

**ಸರ್ ಎಡ್ವರ್ಡ್ ಮ್ಯಾಕ್ಲಗನ್ ಪಾತ್ರ :** ಸಹಕಾರಿ ಚಳವಳಿಯ ವಿಸ್ತರಣೆಯಲ್ಲಿ ಸರ್ ಎಡ್ವರ್ಡ್ ಮ್ಯಾಕ್ಲಗನ್ ಮಹತ್ವದ ಪಾತ್ರ ವಹಿಸಿದ್ದರು.

1915ರಲ್ಲಿ ಅವರ ಸಮಿತಿಯ ವರದಿಯು ಸಹಕಾರಿಗಳ ಭವಿಷ್ಯದ ಅಭಿವೃದ್ಧಿಗೆ ತತ್ವಗಳನ್ನು ಹಾಕಿತು.

ಸಹಕಾರ ಸಂಘಗಳ ಕಾಯಿದೆ, 1912 ಅನ್ನು ಜಾರಿಗೊಳಿಸಿದಾಗ 1904ರ ಕಾಯಿದೆಯ ನ್ಯೂನ್ಯತೆಗಳನ್ನು ನಿವಾರಿಸಲಾಯಿತು. ಇದು ಸಹಕಾರಿಗಳಿಗೆ ಮಾರುಕಟ್ಟೆ ಸಂಘಗಳು, ಕೈಮಗ್ಗ ನೇಕಾರರು ಸಂಘಗಳಿಗೆ ವ್ಯಾಪ್ತಿಯನ್ನು ವಿಸ್ತರಿಸಿತು. 1914ರಲ್ಲಿ, ಮ್ಯಾಕ್ಲಗನ್ ಸಮಿತಿಯು ಸಹಕಾರ ಸಂಘಗಳಲ್ಲಿ ವಿಶೇಷವಾಗಿ ಸಾಲ ಸಂಘಗಳಿಗೆ ಕೆಲವು ಸುಧಾರಣೆಗಳನ್ನು ಪ್ರಸ್ತಾಪಿಸಿತು ಮತ್ತು ಕೇಂದ್ರ, ಪ್ರಾಂತ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಮೂರು ಹಂತದ ಸಹಕಾರಿ ಬ್ಯಾಂಕಿಂಗ್ ಅನ್ನು ಪ್ರಸ್ತಾಪಿಸಿತು. ಭಾರತ ಸರ್ಕಾರದ ಕಾಯಿದೆ, 1919 ಸಹಕಾರಿಗಳಿಗೆ ಕಾನೂನು ಮಾಡಲು ಪ್ರಾಂತ್ಯಗಳಿಗೆ ಅಧಿಕಾರ ನೀಡಿತು, ಬಾಂಬೆ ಸಹಕಾರಿ ಸೊಸೈಟಿ ಕಾಯಿದೆ, 1925 ಪ್ರಾಂತೀಯ ಸರ್ಕಾರವು ಅಂಗೀಕರಿಸಿದ ಮೊದಲ ಸಹಕಾರಿ ಶಾಸನವಾಗಿದೆ. ಒಂದಕ್ಕಿಂತ ಹೆಚ್ಚು ಪ್ರಾಂತ್ಯಗಳಿಂದ ಸದಸ್ಯತ್ವವನ್ನು ಹೊಂದಿರುವ ಸಹಕಾರಿಗಳ ಪ್ರಚಾರ ಮತ್ತು ನಿಯಂತ್ರಣಕ್ಕಾಗಿ ಬಹು–ಘಟಕ ಸಹಕಾರ ಸಂಘಗಳ ಕಾಯಿದೆ, 1942 ಅನ್ನು ಜಾರಿಗೊಳಿಸಿತು. ಕಾಯಿದೆಯು ಎಲ್ಲಾ ಪ್ರಾಯೋಗಿಕ ಉದ್ದೇಶಗಳಿಗಾಗಿ ಸಹಕಾರಿಗಳ ಕೇಂದ್ರೀಯ ರಿಜಿಸ್ಟ್ರಾರ್‌ನ ಅಧಿಕಾರವನ್ನು ರಾಜ್ಯ ರಿಜಿಸ್ಟ್ರಾರ್‌ಗಳಿಗೆ ನಿಯೋಜಿಸಿತು.

**ಸ್ವಾತಂತ್ರ್ಯೋತ್ತರ ಯುಗ :**

ಸ್ವಾತಂತ್ರ್ಯದ ನಂತರ ಸಹಕಾರ ಸಂಘಗಳು ಭಾರತದ ಪಂಚವಾರ್ಷಿಕ ಯೋಜನೆಗಳ ಅವಿಭಾಜ್ಯ ಅಂಗವಾಯಿತು. ಮೊದಲ ಪಂಚವಾರ್ಷಿಕ ಯೋಜನೆಯು ಸಹಕಾರಿ ಸಂಸ್ಥೆಗಳಿಗೆ ನಿರ್ಣಾಯಕ ಪಾತ್ರವನ್ನು ಗೊತ್ತುಪಡಿಸಿತು, ಗ್ರಾಮ ಪಂಚಾಯತ್‌ಗಳೊಂದಿಗೆ ಅವುಗಳ ಸಮನ್ವಯಕ್ಕೆ ಒತ್ತು ನೀಡಿತು. ಈ ಅವಧಿಯ ಮತ್ತೊಂದು ಪ್ರಮುಖ ಘಟನೆಯೆಂದರೆ 1954ರಲ್ಲಿ ಅಖಿಲ ಭಾರತ ಗ್ರಾಮೀಣ ಕ್ರೆಡಿಟ್ ಸಮೀಕ್ಷೆಯ ನಿರ್ದೇಶನ ಸಮಿತಿಯ ವರದಿಯ ಪ್ರಕಟಣೆ.

**1950ರ ದಶಕ – ಹಸಿರು ಕ್ರಾಂತಿ :** ಸ್ವಾತಂತ್ರ್ಯದ ನಂತರ, ಸಹಕಾರ ಚಳುವಳಿಯನ್ನು ರಾಷ್ಟ್ರದ ಅಭಿವೃದ್ಧಿ ಕಾರ್ಯತಂತ್ರದಲ್ಲಿ ನಿರ್ಣಾಯಕ ಅಂಶವಾಗಿ ಪರಿಗಣಿಸಲಾಯಿತು. ಪಂಚವಾರ್ಷಿಕ ಯೋಜನೆಗಳು ಕೃಷಿ ಅಭಿವೃದ್ಧಿಗೆ, ಸಹಕಾರಿ ಸಂಘಗಳ ಬೆಳವಣಿಗೆಗೆ ಹೆಚ್ಚಿನ ಒತ್ತು ನೀಡಿತು. ವಿಶೇಷವಾಗಿ 1960ರ ಹಸಿರು ಕ್ರಾಂತಿಯ ಸಮಯದಲ್ಲಿ, ಬೀಜಗಳು, ರಸಗೊಬ್ಬರಗಳು ಮತ್ತು ಸಾಲ ವಿತರಣೆಯಲ್ಲಿ ಸಹಕಾರಿ ಸಂಸ್ಥೆಗಳು ಪ್ರಮುಖ ಪಾತ್ರವಹಿಸಿದವು.

**1960ರ ದಶಕ – ಆಪರೇಷನ್ ಫ್ಲಡ್ :** ಡೈರಿ ವಲಯದಲ್ಲಿ ಸಹಕಾರಿ ಚಳುವಳಿಯ ಯಶಸ್ಸನ್ನು ಡಾ. ವರ್ಗೀಸ್ ಕುರಿಯನ್ ಆರಂಭಿಸಿದ ಆಪರೇಷನ್ ಫ್ಲಡ್ ಕಾರ್ಯಕ್ರಮದ ಮೂಲಕ ನಿರೂಪಿಸಲಾಗಿದೆ. ಈ ಉಪಕ್ರಮವು ಭಾರತವನ್ನು ಹಾಲಿನ ಅತಿದೊಡ್ಡ ಉತ್ಪಾದಕರಲ್ಲಿ ಒಂದನ್ನಾಗಿ ಪರಿವರ್ತಿಸಿತು ಮತ್ತು ಸಹಕಾರಿ ಮಾದರಿ, ವಿಶೇಷವಾಗಿ ಆನಂದ್ ಮಿಲ್ಕ್ ಯೂನಿಯನ್ ಲಿಮಿಟೆಡ್ (ಒಂಗಬ) ನಿಂದ ನಡೆಸಲ್ಪಟ್ಟಿದೆ.

**ಶಾಸಕಾಂಗ ಚೌಕಟ್ಟು :** 1984ರ ಬಹು–ರಾಜ್ಯ ಸಹಕಾರಿ ಸಂಘಗಳ ಕಾಯಿದೆ ಮತ್ತು 2002ರಲ್ಲಿ ಅದರ ತಿದ್ದುಪಡಿಯು ಅನೇಕ ರಾಜ್ಯಗಳಾದ್ಯಂತ ಸಹಕಾರಿಗಳ ಕಾರ್ಯಚಟುವಟಿಕೆಗೆ ದೃಢವಾದ ಚೌಕಟ್ಟನ್ನು ಒದಗಿಸಿತು, ವಿವಿಧ ವಲಯಗಳಲ್ಲಿ ಸಹಕಾರಿಗಳ ಉತ್ತಮ ನಿಯಂತ್ರಣ ಮತ್ತು ಬೆಳವಣಿಗೆಯನ್ನು ಖಚಿತಪಡಿಸುತ್ತದೆ. ಒಂದೇ ರೀತಿಯ ಸಂಘಗಳನ್ನು ನಿಯಂತ್ರಿಸುವ ಹಲವಾರು ಕಾನೂನುಗಳನ್ನು ಕ್ರೋಢೀಕರಿಸಲು, ಭಾರತ ಸರ್ಕಾರವು 2002ರಲ್ಲಿ ಸಹಕಾರಿಗಳ ರಾಷ್ಟ್ರೀಯ ನೀತಿಯನ್ನು ಘೋಷಿಸಿತು. ಪ್ರಸ್ತುತ, ಬಹುರಾಜ್ಯ ಸಹಕಾರಿ ಸಂಘಗಳ ತಿದ್ದುಪಡಿ ಕಾಯಿದೆ 2023 ಮತ್ತು ಬಹುರಾಜ್ಯ ಸಹಕಾರಿ ಸಂಘಗಳ ತಿದ್ದುಪಡಿ ನಿಯಮಗಳ ಪ್ರಸ್ತುತ ಕಾನೂನುಗಳನ್ನು 97ನೇ ತಿದ್ದುಪಡಿ ಭಾಗ ೫ಫಿ ನೊಂದಿಗೆ ಹೊಂದಿಸಲು ರಚಿಸಲಾಗಿದೆ. ಬಹು–ರಾಜ್ಯ ಸಹಕಾರ ಸಂಘಗಳ ಕಾಯಿದೆ ಮತ್ತು ಮುಂಬರುವ ರಾಷ್ಟ್ರೀಯ ನೀತಿಯಂತಹ ಇತ್ತೀಚಿನ ನೀತಿ ಬದಲಾವಣೆಗಳು ಸಹಕಾರಿಗಳಿಗೆ ಹೆಚ್ಚಿನ ಸ್ವಾತಂತ್ರ್ಯದೊಂದಿಗೆ ಸಹಕಾರಿಗಳನ್ನು ಸಶಕ್ತಗೊಳಿಸುತ್ತವೆ.

**ಆಧುನಿಕ ಯುಗ (ಉದಾರೀಕರಣದ ನಂತರ) :**

ಆರ್ಥಿಕ ಉದಾರೀಕರಣ : 1991ರ ಆರ್ಥಿಕ ಸುಧಾರಣೆಗಳು ಮತ್ತು ನಂತರದ ಉದಾರೀಕರಣವು ಸಹಕಾರಿ ಸಂಸ್ಥೆಗಳಿಗೆ ಸವಾಲುಗಳು ಮತ್ತು ಅವಕಾಶಗಳನ್ನು ನೀಡಿತು. ಪೈಪೋಟಿ ಹೆಚ್ಚಾದಾಗ, ಡೈರಿ, ಸಕ್ಕರೆ ಮತ್ತು ಬ್ಯಾಂಕಿಂಗ್‌ನಂತಹ ಕ್ಷೇತ್ರಗಳಲ್ಲಿ ಸಹಕಾರಿ ಸಂಸ್ಥೆಗಳು ಮಹತ್ವದ ಪಾತ್ರವನ್ನು ನಿರ್ವಹಿಸುವುದನ್ನು ಮುಂದುವರಿಸಿದವು.

**ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮ (NCDC) :** 1963ರಲ್ಲಿ ಸ್ಥಾಪನೆಯಾದ ಓಅಆಅ, ಸಹಕಾರಿಗಳ ಅಭಿವೃದ್ಧಿಗೆ ಹಣಕಾಸಿನ ನೆರವು ಮತ್ತು ಬೆಂಬಲವನ್ನು ನೀಡುವಲ್ಲಿ ಪ್ರಮುಖವಾಗಿದೆ. ಉದಾರೀಕರಣದ ನಂತರದ ಯುಗದಲ್ಲಿ ಇದರ ಪಾತ್ರವು ಮೀನುಗಾರಿಕೆ, ಸಂಗ್ರಹಣೆ ಮತ್ತು ಶೀತಲ ಸರಪಳಿಯಂತಹ ವೈವಿಧ್ಯಮಯ ವಲಯಗಳ ಸೇರ್ಪಡೆಗೆ ವಿಸ್ತರಿಸಿದೆ.

**ಭಾರತ ಸಂವಿಧಾನದಲ್ಲಿ ಸಹಕಾರಕ್ಕೆ ಸ್ಥಾನ :**

ಭಾರತ ಸಂವಿಧಾನದಲ್ಲಿ ಸಹಕಾರ ರಾಜ್ಯದ ವಿಷಯ. 2012 ಜನವರಿಯಲ್ಲಿ ಭಾರತ ಸಂವಿಧಾನದಲ್ಲಿ ಸಹಕಾರಕ್ಕೆ ವಿಶೇಷ ಮನ್ನಣೆ ದೊರಯಿತು. ಸಹಕಾರಿ ಸಂಸ್ಥೆ ಸ್ಥಾಪಿಸುವುದು, ಬೆಳೆಸುವುದು ಪ್ರಜೆಯ ಸಂವಿಧಾನ ಬದ್ಧವಾದ ಮೂಲಭೂತ ಹಕ್ಕು ಎಂದು ವಿಧಿತವಾಯಿತು. 2012 ಜನವರಿಯಲ್ಲಿ ಜಾರಿಯಾದ 97ನೇ ಸಂವಿಧಾನ ತಿದ್ದುಪಡಿಯಲ್ಲಿ ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮಹತ್ತರವಾದ ಕಾರ್ಯವಿಧಾನಗಳ ವಿರವರಣೆಯನ್ನು ನೀಡಲಾಗಿದೆ. ಇದರಿಂದಾಗಿ ಸಹಕಾರಿ ಸಂಘಗಳು ವೃತ್ತಿಪರ, ಉತ್ತಮ ಗುಣಮಟ್ಟದ ಪ್ರಜಾಪ್ರಭುತ್ವ ವ್ಯವಸ್ಥೆಗಳಾಗಿ ಹೊರಹೊಮ್ಮಲು ವಿಫುಲ ಅವಕಾಶಗಳು ಒದಗಿ ಬಂದಿತು. ಸಹಕಾರ ರಂಗಕ್ಕೆ ಇದೊಂದು ಪರಿಣಾಮಕಾರಿ ಹೆಜ್ಜೆ.

**ಸಹಕಾರ ಸಚಿವಾಲಯ ಸ್ಥಾಪನೆ – 2021 :**

ದಿನಾಂಕ 06 ಜುಲೈ 2021ರಂದು ಸ್ಥಾಪಿತವಾದ ಸಹಕಾರ ಸಚಿವಾಲಯವು ವಿವಿಧ ಯೋಜನೆಗಳು ಮತ್ತು ಉಪಕ್ರಮಗಳನ್ನು ಜಾರಿಗೊಳಿಸುವ ಮೂಲಕ ಸಹಕಾರ ಚಳುವಳಿಯು ಗಣನೀಯವಾಗಿ ಪ್ರಗತಿಯನ್ನು ಸಾಧಿಸಿದೆ. ರಾಷ್ಟ್ರದಾದ್ಯಂತ ಸಹಕಾರ ಚಳುವಳಿಯನ್ನು

ಮುನ್ನಡೆಸಲು ವಿಶಿಷ್ಟವಾದ ಆಡಳಿತಾತ್ಮಕ, ಕಾನೂನು ಮತ್ತು ನೀತಿ ಚೌಕಟ್ಟನ್ನು ಸ್ಥಾಪಿಸುವ ಜವಾಬ್ದಾರಿಯನ್ನು ಸಹಕಾರ ಸಚಿವಾಲಯವು ಹೊಂದಿದೆ. ಸಹಕಾರಿ ಸಂಸ್ಥೆಗಳಿಗೆ "ಸುಲಭ ವ್ಯವಹಾರ"ಕ್ಕಾಗಿ ಕಾರ್ಯವಿಧಾನಗಳನ್ನು ಸುಗಮಗೊಳಿಸುವುದು, ಸಹಕಾರಿಗಳನ್ನು ಬಲಪಡಿಸುವುದು ಮತ್ತು ಆಧುನೀಕರಿಸುವುದು, ಪಾರದರ್ಶಕತೆ ಮತ್ತು ಗಣಕೀಕರಣವನ್ನು ಉತ್ತೇಜಿಸುವುದು, ಸ್ಪರ್ಧಾತ್ಮಕತೆಯನ್ನು ಬೆಳೆಸುವುದು ಮತ್ತು ಹಿಂದುಳಿದ ಗ್ರಾಮೀಣ ಸಮುದಾಯಗಳಿಗೆ ಪ್ರವೇಶಿಸಬಹುದಾದ ಅಭಿವೃದ್ಧಿಯನ್ನು ಖಾತ್ರಿಪಡಿಸುವುದು. ಸಹಕಾರಿಗಳೊಂದಿಗೆ ಪ್ರತಿಯೊಂದು ಗ್ರಾಮವನ್ನು ಸಂಪರ್ಕಿಸುವುದು ಅಂತಿಮ ಗುರಿಯಾಗಿದೆ. ಸಹಕಾರ ಸಚಿವಾಲಯವು 'ಸಹಕಾರ್ ಸೇ ಸಮೃದ್ಧಿ' ಎಂಬ ಮಂತ್ರದ ಮೂಲಕ, ಅಂತಿಮವಾಗಿ ರಾಷ್ಟ್ರದ ಒಟ್ಟಾರೆ ಏಳಿಗೆಗೆ ಕೊಡುಗೆ ನೀಡುತ್ತದೆ.

**ಕರ್ನಾಟಕ :**

**ಕರ್ನಾಟಕದ ಸಹಕಾರಿ ಆಂದೋಲನದ ಅವಲೋಕನ ಇಲ್ಲಿದೆ:**

**ಸ್ವಾತಂತ್ರ್ಯ ಪೂರ್ವ ಯುಗ :**

ಬ್ರಿಟೀಷ್ ವಸಾಹತುಶಾಹಿ ಅವಧಿಯಲ್ಲಿ ಕರ್ನಾಟಕದಲ್ಲಿ ಸಹಕಾರ ಚಳುವಳಿ ಪ್ರಾರಂಭವಾಯಿತು. 1904ರ ಸಹಕಾರ ಸಂಘಗಳ ಕಾಯಿದೆಯ ಜಾರಿಯು ಕರ್ನಾಟಕ ಸೇರಿದಂತೆ ಭಾರತದಾದ್ಯಂತ ಸಹಕಾರ ಸಂಘಗಳಿಗೆ ಅಡಿಪಾಯ ಹಾಕಿತು. ಕರ್ನಾಟಕದ ಮೊದಲ ಸಹಕಾರಿ ಸಂಘವನ್ನು 1905ರಲ್ಲಿ ಗದಗ ಜಿಲ್ಲೆಯ ಕಣಗಿನಹಾಳ್ ಗ್ರಾಮದಲ್ಲಿ ಸ್ಥಾಪಿಸಲಾಯಿತು. ಈ ಸಾಲ ಸಹಕಾರ ಸಂಘವು ರೈತರ ಆರ್ಥಿಕ ಅಗತ್ಯಗಳನ್ನು ಪರಿಹರಿಸುವ ಗುರಿಯನ್ನು ಹೊಂದಿದ್ದು, ಲೇವಾದೇವಿಗಾರರ ಶೋಷಣೆಯಿಂದ ಪರ್ಯಾಯವನ್ನು ಒದಗಿಸಿತು.

**ವಿಸ್ತರಣೆ ಮತ್ತು ಬೆಳವಣಿಗೆ :**

1920 ಮತ್ತು 1930ರ ದಶಕದ ವೇಳೆಗೆ, ಸಹಕಾರ ಚಳುವಳಿ ಕರ್ನಾಟಕದ ಇತರ ಭಾಗಗಳಿಗೆ ಹರಡಿತು. ಸಾಲ, ಕೃಷಿ ಮತ್ತು ಮಾರುಕಟ್ಟೆ ಸೇರಿದಂತೆ ವಿವಿಧ ಉದ್ದೇಶಗಳಿಗಾಗಿ ಸಹಕಾರ ಸಂಘಗಳನ್ನು ರಚಿಸಲಾಯಿತು. 1925ರ ಮೈಸೂರು ಪ್ರಾಂತೀಯ ಸಹಕಾರ ಸಂಘಗಳ ಕಾಯಿದೆಯು ಹೆಚ್ಚು ಸಮಗ್ರವಾದ ಕಾನೂನು ಚೌಕಟ್ಟನ್ನು ಒದಗಿಸುವ ಮೂಲಕ ಚಳುವಳಿಯ ಬೆಳವಣಿಗೆಯನ್ನು ಮತ್ತಷ್ಟು ಬೆಂಬಲಿಸಿತು.

**ಸ್ವಾತಂತ್ರ್ಯೋತ್ತರ ಯುಗ :**

**ಕರ್ನಾಟಕ ರಾಜ್ಯ ರಚನೆ :**

ಭಾರತವು 1947ರಲ್ಲಿ ಸ್ವಾತಂತ್ರ್ಯವನ್ನು ಪಡೆದ ನಂತರ, ಹಲವಾರು ಪ್ರದೇಶಗಳನ್ನು ವಿಲೀನಗೊಳಿಸಿ 1956ರಲ್ಲಿ ಕರ್ನಾಟಕವನ್ನು ಮರುಸಂಘಟಿಸಲಾಯಿತು. ರಾಜ್ಯ ಬೆಂಬಲ ಮತ್ತು ಗ್ರಾಮೀಣ ಅಭಿವೃದ್ಧಿಯ ಗುರಿಯನ್ನು ಹೊಂದಿರುವ ರಾಷ್ಟ್ರೀಯ ನೀತಿಗಳಿಂದ ಪ್ರಯೋಜನ ಪಡೆಯುತ್ತಾ ಸಹಕಾರಿ ಆಂದೋಲನವು ಬೆಳೆಯುತ್ತಲೇ ಇತ್ತು.

**1960 ಮತ್ತು 1970 :**

ಈ ಅವಧಿಯಲ್ಲಿ, ಕರ್ನಾಟಕದಲ್ಲಿ ಸಹಕಾರಿ ಚಳುವಳಿಯು ವೈವಿಧ್ಯಮಯವಾಯಿತು. ಸಾಲ ಸಹಕಾರ ಸಂಘಗಳಲ್ಲದೇ, ಡೈರಿ, ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಹಕಾರಿಗಳಲ್ಲಿ ಗಮನಾರ್ಹ ಬೆಳವಣಿಗೆಗಳು ಕಂಡುಬಂದವು. ಸಹಕಾರಿ ಬ್ಯಾಂಕಿಂಗ್ ಕ್ಷೇತ್ರವನ್ನು ಮೇಲ್ವಿಚಾರಣೆ ಮಾಡಲು ಮತ್ತು ಬೆಂಬಲಿಸಲು ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಅನ್ನು ಸ್ಥಾಪಿಸಲಾಯಿತು. ಅಂತೆಯೇ, ಸಹಕಾರಿ ಹಾಲು ಒಕ್ಕೂಟಗಳನ್ನು ಸ್ಥಾಪಿಸಲಾಯಿತು, ಅಂತಿಮವಾಗಿ 1974ರಲ್ಲಿ ಕರ್ನಾಟಕ ಹಾಲು ಒಕ್ಕೂಟದ (ಕೆಎಂಎಫ್) ರಚನೆಗೆ ಕಾರಣವಾಯಿತು, ಇದು ಜನಪ್ರಿಯ ಬ್ರ್ಯಾಂಡ್ ನಂದಿನಿಯನ್ನು ಪ್ರಾರಂಭಿಸಿತು.

**ಆಧುನಿಕ ಯುಗ :**

**1980 ರಿಂದ 2000ರ ದಶಕ :**

ಸಹಕಾರ ಚಳುವಳಿಯು ರಾಜಕೀಯ ಹಸ್ತಕ್ಷೇಪ, ದುರಾಡಳಿತ ಮತ್ತು ಆರ್ಥಿಕ ಅಸ್ಥಿರತೆ ಸೇರಿದಂತೆ ಹಲವಾರು ಸವಾಲುಗಳನ್ನು ಎದುರಿಸಿತು. ಈ ಸಮಸ್ಯೆಗಳ ಹೊರತಾಗಿಯೂ, ಅನೇಕ ಸಹಕಾರಿ ಸಂಸ್ಥೆಗಳು ಅಭಿವೃದ್ಧಿ ಹೊಂದುವುದನ್ನು ಮುಂದುವರೆಸಿದವು ಮತ್ತು ಗ್ರಾಮೀಣ ಆರ್ಥಿಕತೆಯಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿದವು. ಸಹಕಾರ ಕ್ಷೇತ್ರವನ್ನು ಬಲಪಡಿಸಲು ಸರ್ಕಾರವು ಹೊಸ ನೀತಿಗಳ ಅನುಷ್ಠಾನ ಮತ್ತು ಸಹಕಾರಿ ಕಾನೂನುಗಳಿಗೆ ತಿದ್ದುಪಡಿಗಳನ್ನು ಒಳಗೊಂಡಂತೆ ವಿವಿಧ ಕ್ರಮಗಳನ್ನು ಪರಿಚಯಿಸಿತು.

**ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ – 1997 :**

ಸ್ವಾತಂತ್ರ್ಯಾ ನಂತರ ಸಹಕಾರ ಕ್ಷೇತ್ರಕ್ಕೆ ಹೆಚ್ಚಿನ ಆರ್ಥಿಕ ನೀಡಿದರೂ ಸಹ ಸಹಕಾರ ಕ್ಷೇತ್ರದಲ್ಲಿ ನಿರೀಕ್ಷಿತ ಯಶಸ್ಸು ಸಾಧಿಸಲಿಲ್ಲ. ಈ ಕುರಿತು ಚರ್ಚೆಗಳು ಆರಂಭವಾದವು. ಈ ಹಿನ್ನೆಲೆಯಲ್ಲಿ ಈ ಕುರಿತು ಅಧ್ಯಯನ ನಡೆಸಲು ಕೇಂದ್ರ ಸರ್ಕಾರವು 1987ರಲ್ಲಿ ಶ್ರೀ ಅರ್ಧನಾರೀಶ್ವರನ್ ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿತು. ಈ ಸಮಿತಿಯು ತನ್ನ ವರದಿಯಲ್ಲಿ "ಸರಕಾರದ ಅತಿಯಾದ ಹಸ್ತಕ್ಷೇಪದಿಂದಾಗಿ ದೇಶದಲ್ಲಿ ಸಹಕಾರಿ ಚಳುವಳಿ ವಿಫಲವಾಗಿದೆಯೆಂದು" ತಿಳಿಸಿತು. ಸಹಕಾರ ಚಳುವಳಿ ವಿಫಲವಾದರೂ ಸಹ ಜನಸಾಮಾನ್ಯರು ತಮ್ಮ ಆರ್ಥಿಕ ಏಳಿಗೆಗಾಗಿ ತಾವೇ ಸ್ವಯಂ ಸ್ಫೂರ್ತಿಯಿಂದ ಭಾಗವಹಿಸುವ ಮೂಲಕ ಈ ಚಳುವಳಿಯನ್ನು ಯಶಸ್ವಿಯಾಗಿಸುವ ಅಗತ್ಯತೆಯನ್ನು ಗುರುತಿಸಿದ ಕೇಂದ್ರ ಯೋಜನಾ ಆಯೋಗವು ಸರ್ಕಾರದ ಹಸ್ತಕ್ಷೇಪ ತಡೆಯಬಲ್ಲ ಸದಸ್ಯರಿಗೆ ಹೆಚ್ಚು ಅಧಿಕಾರ ನೀಡುವ ಹಾಗೂ ಅವರ ಸಹಭಾಗಿತ್ವ ಹೆಚ್ಚಿಸುವ ಸಹಕಾರಿ ಸಂಸ್ಥೆಗಳಿಗೆ ಚಟುವಟಿಕೆ ನಡೆಸಲು ಮುಕ್ತ ವಾತಾವರಣ ನಿರ್ಮಿಸುವಂತಹ ಮಾದರಿ ಸಹಕಾರಿ ಕಾಯ್ದೆಯನ್ನು ರೂಪಿಸಲು ಚೌಧರಿ ಬ್ರಹ್ಮಪ್ರಕಾಶರ ನೇತೃತ್ವದಲ್ಲಿ ಮತ್ತೊಂದು ಸಮಿತಿಯನ್ನು ರಚಿಸಿತು.

ಈ ಸಮಿತಿ 1991ರಲ್ಲಿ ವಿವಿಧ ರಾಜ್ಯಗಳಲ್ಲಿ ಪ್ರಸ್ತುತ ಜಾರಿಯಲ್ಲಿರುವ ಸಹಕಾರಿ ಕಾಯ್ದೆಗಳ ಬಗ್ಗೆ ವಿವರವಾದ ಅಧ್ಯಯನ ನಡೆಸಿ ಒಂದು ಮಾದರಿ ಕಾಯ್ದೆ ರೂಪಿಸಿತು. ಯೋಜನಾ ಆಯೋಗದಿಂದ ಈ ಮಾದರಿ ಸಹಕಾರಿ ಕಾಯ್ದೆಯನ್ನು ಅಳವಡಿಸಿಕೊಳ್ಳಲು ಸಲಹೆ ನೀಡಿ ಎಲ್ಲಾ ರಾಜ್ಯ ಸರ್ಕಾರಗಳಿಗೆ ಕಳುಹಿಸಿತು. ಈ ರೀತಿ ವಿವರವಾದ ಅಧ್ಯಯನದ ಫಲವಾಗಿ ಯೋಜನಾ ಆಯೋಗ ಕಳುಹಿಸಿದ ಮಾದರಿ ಸಹಕಾರಿ ಕಾಯ್ದೆಯನ್ನು ಕರ್ನಾಟಕ ರಾಜ್ಯದಲ್ಲಿ "ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ – 1997" ಅನ್ನು ಜಾರಿಗೆ ತರಲಾಯಿತು.

ಸ್ವಾಭಿಮಾನಿ ಸಹಕಾರಿ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 28
Licensed to post without Prepayment License No. PMG BG/WPP-384/2023-2025.

**ಭಾರತದ ಆರ್ಥಿಕತೆಯಲ್ಲಿ ಸಹಕಾರಿ ಸಂಸ್ಥೆಗಳ ಪಾತ್ರ :**

- ಪ್ರಸ್ತುತ ಭಾರತೀಯ ಸಹಕಾರಿ ವ್ಯವಸ್ಥೆಯು ಇಡೀ ವಿಶ್ವದಲ್ಲಿಯೇ ದೊಡ್ಡದಾಗಿದೆ. ಕೃಷಿ ಮತ್ತು ಸಂಬಂಧಿತ ವಲಯವು ಅಭಿವೃದ್ಧಿ ಹೊಂದುತ್ತಿರುವ ಪ್ರಬಲ ಸ್ತಂಭಗಳಲ್ಲಿ ಒಂದಾಗಿದೆ.
- ಭಾರತದಲ್ಲಿ ಸುಮಾರು 100% ಹಳ್ಳಿಗಳು ಮತ್ತು 30% ರಾಷ್ಟ್ರೀಯ ಜನಸಂಖ್ಯೆಯನ್ನು ಸದಸ್ಯತ್ವದಲ್ಲಿ ಒಳಗೊಂಡಿರುವ 290 ಮಿಲಿಯನ್ ಸದಸ್ಯತ್ವದೊಂದಿಗೆ ಎಲ್ಲಾ ರೀತಿಯ 0.85 ಮಿಲಿಯನ್ ಸಹಕಾರ ಸಂಘಗಳಿವೆ.
- ರಾಷ್ಟ್ರೀಯ ಸಹಕಾರಿ ಸಂಘಗಳು, ರಾಜ್ಯ ಮಟ್ಟದ ಒಕ್ಕೂಟಗಳು, ಜಿಲ್ಲಾ ಒಕ್ಕೂಟಗಳು ಮತ್ತು ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳು ದೇಶದ ಸಹಕಾರಿ ಚಳುವಳಿಯನ್ನು ಮುನ್ನಡೆಸುತ್ತಿವೆ ಮತ್ತು ಮಾರ್ಗದರ್ಶನ ನೀಡುತ್ತಿವೆ.
- ಇದು ಪರಸ್ಪರ ಸಹಾಯ ಮತ್ತು ಹಂಚಿಕೆಯ ಮೂಲಕ ಸಾಮಾಜಿಕ ಬಿರುಕುಗಳನ್ನು ಕಡಿಮೆ ಮಾಡುತ್ತಿದೆ.
- ಇದು ಸಣ್ಣ ಮತ್ತು ಗುಡಿ ಕೈಗಾರಿಕೆಗಳಿಗೆ ಅನುಕೂಲಕರ ವಾತಾವರಣವನ್ನು ಸೃಷ್ಟಿಸುತ್ತಿದೆ.

**ಪ್ರಸಕ್ತ ಸನ್ನಿವೇಶ**

ವಲಯದ ವೈವಿಧ್ಯತೆ : ಇಂದು, ಭಾರತದಲ್ಲಿ ಸಹಕಾರಿ ಸಂಘಗಳು ಡೈರಿ, ವಸತಿ, ಜವಳಿ ಮತ್ತು ಗ್ರಾಮೀಣ ಬ್ಯಾಂಕಿಂಗ್ ಸೇರಿದಂತೆ ಕೃಷಿಯನ್ನು ಮೀರಿ ವ್ಯಾಪಕವಾದ ಚಟುವಟಿಕೆಗಳಲ್ಲಿ ತೊಡಗಿಕೊಂಡಿವೆ. ಆರ್ಥಿಕ ಸೇರ್ಪಡೆ ಮತ್ತು ಸಾಮಾಜಿಕ–ಆರ್ಥಿಕ ಅಭಿವೃದ್ಧಿಯನ್ನು ಉತ್ತೇಜಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತಿವೆ.

ನೀತಿ ಬೆಂಬಲ : ಸರ್ಕಾರವು ವಿವಿಧ ನೀತಿಗಳು ಮತ್ತು ಕಾರ್ಯಕ್ರಮಗಳ ಮೂಲಕ ಸಹಕಾರ ಚಳುವಳಿಯನ್ನು ಬೆಂಬಲಿಸುವುದನ್ನು ಮುಂದುವರೆಸಿದೆ. 2021ರಲ್ಲಿ ಸ್ಥಾಪಿತವಾದ ಸಹಕಾರ ಸಚಿವಾಲಯವು ಈ ವಲಯದ ಪ್ರಾಮುಖ್ಯತೆಗೆ ಸಾಕ್ಷಿಯಾಗಿದೆ, ಪ್ರಕ್ರಿಯೆಗಳನ್ನು ಸುಗಮಗೊಳಿಸುವ ಮತ್ತು ಹೆಚ್ಚಿನ ಸ್ವಾಯತ್ತತೆ ಹಾಗೂ ದಕ್ಷತೆಯನ್ನು ಒದಗಿಸುವ ಗುರಿಯನ್ನು ಹೊಂದಿದೆ.

**ತಾಂತ್ರಿಕ ಏಕೀಕರಣ :** ಆಧುನಿಕ ಸಹಕಾರಿ ಸಂಸ್ಥೆಗಳು ದಕ್ಷತೆ ಮತ್ತು ಪಾರದರ್ಶಕತೆಯನ್ನು ಹೆಚ್ಚಿಸಲು ತಂತ್ರಜ್ಞಾನವನ್ನು ಹೆಚ್ಚಾಗಿ ಅಳವಡಿಸಿಕೊಳ್ಳುತ್ತಿವೆ. ವಹಿವಾಟುಗಳಿಗೆ ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳು, ಸಹಕಾರಿ ಬ್ಯಾಂಕ್‌ಗಳಿಗೆ ಮೊಬೈಲ್ ಬ್ಯಾಂಕಿಂಗ್ ಮತ್ತು ಕೃಷಿ ಸಹಕಾರಿಗಳಿಗೆ ಆನ್‌ಲೈನ್ ಮಾರುಕಟ್ಟೆ ವೇದಿಕೆಗಳು ಕೆಲವು ಉದಾಹರಣೆಗಳಾಗಿವೆ.

**ಭವಿಷ್ಯದ ನಿರೀಕ್ಷೆಗಳು:**

ಆಡಳಿತ ರಚನೆಗಳನ್ನು ಬಲಪಡಿಸುವುದು, ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವುದು ಮತ್ತು ಸದಸ್ಯರ ಭಾಗವಹಿಸುವಿಕೆಯನ್ನು ಹೆಚ್ಚಿಸುವುದು ಸಹಕಾರ ಕ್ಷೇತ್ರವನ್ನು ಪುನಶ್ಚೇತನಗೊಳಿಸಲು ಸಹಾಯ ಮಾಡುತ್ತದೆ. ವಸತಿ, ಆರೋಗ್ಯ ಮತ್ತು ಶಿಕ್ಷಣ ಸಹಕಾರಿಗಳಂತಹ ಹೊಸ ಕ್ಷೇತ್ರಗಳಿಗೆ ಮತ್ತಷ್ಟು ವಿಸ್ತರಿಸುವುದರಿಂದ ಸಹಕಾರ ಚಳುವಳಿಯ ವ್ಯಾಪ್ತಿ ಮತ್ತು ಪ್ರಭಾವವನ್ನು ಇನ್ನಷ್ಟು ವಿಸ್ತರಿಸಬಹುದು. ಸಂಕ್ಷಿಪ್ತವಾಗಿ ಹೇಳುವುದಾದರೆ, ಸಹಕಾರ ಚಳುವಳಿಯು ಸುದೀರ್ಘ ಮತ್ತು ವೈವಿಧ್ಯಮಯ ಇತಿಹಾಸವನ್ನು ಹೊಂದಿದ್ದು, ಗಮನಾರ್ಹ ಸಾಧನೆಗಳು ಮತ್ತು ಸವಾಲುಗಳಿಂದ ಗುರುತಿಸಲ್ಪಟ್ಟಿದೆ. ಇದು ಸಾಮಾಜಿಕ–ಆರ್ಥಿಕ ಅಭಿವೃದ್ಧಿಯ ಪ್ರಮುಖ ಭಾಗವಾಗಿ ಉಳಿದಿದೆ, ಮತ್ತಷ್ಟು ಬೆಳವಣಿಗೆ ಮತ್ತು ಅಭಿವೃದ್ಧಿಗೆ ಸಾಮರ್ಥ್ಯವಿದೆ.

**ಉಪ ಸಂಹಾರ :**

ಭಾರತದಲ್ಲಿ ಸಹಕಾರ ಚಳವಳಿಯು ಒಂದು ಶತಮಾನದ ಇತಿಹಾಸವನ್ನು ಹೊಂದಿದ್ದು, ದೇಶದ ಸಾಮಾಜಿಕ–ಆರ್ಥಿಕ ರಚನೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದೆ. ರೈತರನ್ನು ಲೇವಾದೇವಿಗಾರರ ಕಪಿಮುಷ್ಠಿಯಿಂದ ಬಿಡುಗಡೆ ಮಾಡುವ ಉದ್ದೇಶದಿಂದ ತನ್ನ ಆರಂಭಿಕ ದಿನಗಳಿಂದ ವಿವಿಧ ಕ್ಷೇತ್ರಗಳಲ್ಲಿ ಇಂದಿನವರೆಗೆ ತೊಡಗಿಸಿಕೊಳ್ಳುವವರೆಗೆ, ಸಹಕಾರಿ ಸಂಸ್ಥೆಗಳು ಸ್ಥಿತಿಸ್ಥಾಪಕತ್ವ ಮತ್ತು ಹೊಂದಾಣಿಕೆಯನ್ನು ಪ್ರದರ್ಶಿಸಿವೆ. ಜರುಗುತ್ತಿರುವ ಸುಧಾರಣೆಗಳು, ತಾಂತ್ರಿಕ ಪ್ರಗತಿಗಳು ಮತ್ತು ನಿರಂತರವಾದ ನೀತಿ ಬೆಂಬಲದೊಂದಿಗೆ ಸಹಕಾರಿ ಚಳುವಳಿಯ ಭವಿಷ್ಯವು ಭರವಸೆಯಂತೆ ಕಾಣುತ್ತಿದೆ.

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ : 080–23378375–80, 23474408, 23573291

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ದೂ: 080–23449933/34

ಇ–ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055

ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ: 080–23525546.

ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299

ಬೆಳಗಾವಿ ಪ್ರಾಂತೀಯ ಕಛೇರಿ : #1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.

ಕಲಬುರಗಿ ಪಾಂತೀಯ ಕಛೇರಿ : # 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003